ಗುರುವಾರ, ನವೆಂಬರ್ 17, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 317 | ಪುಟ 12

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬೆಂಗಳೂರು ಟೆಕ್ ಸಮ್ಮಿಟ್ 9

ಇಂದು ಸ್ಪರ್ಧಾವಾಣಿ 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
61,980 ▲	18,409 ▲	₹54,600 (ಬೆಂಗಳೂರು) ▲	₹63,300 (ಬೆಂಗಳೂರು) ▼	81.26 ▼

ಜಿ–20 ಶೃಂಗ: 'ಬಾಲಿ ಘೋಷಣೆ'ಯಲ್ಲಿ ಪ್ರಧಾನಿ ನರೇಂದ್ರ ಮೋದಿ ಹೇಳಿಕೆ ಪ್ರತಿಧ್ವನಿ

'ಇದು ಯುದ್ಧದ ಯುಗವಲ್ಲ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ಇದು ಯುದ್ಧದ ಯುಗವಲ್ಲ' ಎಂಬುದಾಗಿ ಪ್ರಧಾನಿ ನರೇಂದ್ರ ಮೋದಿ ಅವರು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರಿಗೆ ಹೇಳಿದ್ದ ಮಾತು ಇಂಡೊನೇಷ್ಯಾದ ಬಾಲಿಯಲ್ಲಿ ಬುಧವಾರ ಮುಕ್ತಾಯವಾದ 17ನೇ ಜಿ–20 ಶೃಂಗಸಭೆಯಲ್ಲಿ ಕೈಗೊಂಡ 'ಬಾಲಿ ಘೋಷಣೆ'ಯಲ್ಲಿ ಪ್ರತಿಧ್ವನಿಸಿತು.

'ಇಂದಿನ ಯುಗವು ಯುದ್ಧದಿಂದ ಕೂಡಿರಬಾರದು' ಎಂದು ಜಿ–20 ನಾಯಕರು ಜಂಟಿ ನಿರ್ಣಯದಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ಇದೇ ಸೆಪ್ಟೆಂಬರ್ 16ರಂದು ಉಜ್ಬೇಕಿಸ್ತಾನದ ಸಮರ್‌ಖಂಡ್‌ನಲ್ಲಿ ನಡೆದಿದ್ದ ಶಾಂಘೈ ಸಹಕಾರ ಸಂಘಟನೆಯ (ಎಸ್‌ಸಿಒ) ಶೃಂಗಸಭೆಯಲ್ಲಿ ಪುಟಿನ್ ಜೊತೆಗಿನ ದ್ವಿಪಕ್ಷೀಯ ಮಾತುಕತೆಯ ವೇಳೆ ಪ್ರಧಾನಿ ಮೋದಿ ತಳೆದಿದ್ದ ನಿಲುವನ್ನೇ ಬಾಲಿ ಘೋಷಣೆ ಪ್ರತಿಧ್ವನಿಸಿದೆ. ಆದರೆ ಅದಕ್ಕೂ ಮುನ್ನ ಸದಸ್ಯ ರಾಷ್ಟ್ರಗಳು ಯುದ್ಧ ಮತ್ತು ನಿರ್ಬಂಧಗಳ ಮಧ್ಯೆ ಭಿನ್ನ ನಿಲುವು ವ್ಯಕ್ತಪಡಿಸಿದ್ದವು.

ರಷ್ಯಾ-ಉಕ್ರೇನ್ ಯುದ್ಧ ಕುರಿತು ತೀವ್ರ ಸಮಾಲೋಚನೆಯ ಬಳಿಕ ಸದಸ್ಯ ದೇಶಗಳು ಬಾಲಿ ಘೋಷಣೆಯನ್ನು ಅಳವಡಿಸಿಕೊಳ್ಳುವ ನಿರ್ಧಾರಕ್ಕೆ ಬಂದವು. ಉಕ್ರೇನ್ ಮೇಲೆ ರಷ್ಯಾ ಸಾರಿರುವ ಸೇನಾ ಕಾರ್ಯಾಚರಣೆಯನ್ನು ತೀವ್ರವಾಗಿ ಖಂಡಿಸಲು ಅಮೆರಿಕ ಹಾಗೂ ಪಾಶ್ಚಿಮಾತ್ಯ ದೇಶಗಳು ಒಲವು ವ್ಯಕ್ತಪಡಿಸಿದವು. ಆದರೆ ಇದಕ್ಕೆ ರಷ್ಯಾ ತೀವ್ರವಾಗಿ ವಿರೋಧಿಸಿತು. ಸಂಘಟನೆಯ ಪ್ರಾಥಮಿಕ ಉದ್ದೇಶ ಅಂತರರಾಷ್ಟ್ರೀಯ ಆರ್ಥಿಕ ಸಹಕಾರ ಆಗಿದ್ದು, ಅದನ್ನು ಶಾಂತಿ ಮತ್ತು ಭದ್ರತೆ ವಿಚಾರಕ್ಕೆ ಬದಲಿಸುವ ನಿಲುವನ್ನು ರಷ್ಯಾ ವಿರೋಧಿಸಿತು.

ಆದರೆ ರಷ್ಯಾದ ವಾದವನ್ನು ಪ್ರಧಾನಿ ಮೋದಿ ಅವರು ತಿರಸ್ಕರಿಸಿದರು. 'ಶಾಂತಿ ಮತ್ತು ಭದ್ರತೆ ಸಾಧ್ಯವಾಗದಿದ್ದರೆ ನಮ್ಮ ಮುಂದಿನ ಜನಾಂಗವು ಆರ್ಥಿಕ ಪ್ರಗತಿ ಮತ್ತು ತಂತ್ರಜ್ಞಾನದ ಅನುಕೂಲ ಪಡೆಯಲು ಸಾಧ್ಯವಾಗುವುದಿಲ್ಲ. ಜಿ–20 ಶೃಂಗಸಭೆಯು ಶಾಂತಿ ಮತ್ತು ಸಾಮರಸ್ಯದ ಪ್ರಬಲ ಸಂದೇಶವನ್ನು ಸಾರಲು ಬಯಸುತ್ತದೆ' ಎಂದು ಪ್ರಧಾನಿ ಹೇಳಿದರು.

ರಷ್ಯಾ-ಉಕ್ರೇನ್ ಯುದ್ಧದ ವಿಚಾರದಲ್ಲಿ ಜಿ–20 ಸದಸ್ಯ ರಾಷ್ಟ್ರಗಳು ಭಿನ್ನ ನಿಲುವು ಹೊಂದಿವೆ ಎಂಬುದನ್ನು 'ಬಾಲಿ ನಿರ್ಣಯ' ಬಿಂಬಿಸಿತು. 'ಬಹುತೇಕ' ದೇಶಗಳು ಉಕ್ರೇನ್ ಮೇಲಿನ ದಾಳಿಯನ್ನು ಪ್ರಬಲವಾಗಿ ಖಂಡಿಸಿದವು. ಇದರಿಂದ ನಾಗರಿಕರು ಹೆಚ್ಚು ಸಮಸ್ಯೆ ಎದುರಿಸುತ್ತಿದ್ದು, ಜಾಗತಿಕ ಆರ್ಥಿಕ ಸಮಸ್ಯೆ ತಲೆದೋರಿದೆ. ಬೆಳವಣಿಗೆ ದರ ಕುಸಿತ, ಹಣದುಬ್ಬರ ಹೆಚ್ಚಳ, ಪೂರೈಕೆ ಸರಪಳಿಯಲ್ಲಿ ವ್ಯತ್ಯಯ, ಆಹಾರ ಮತ್ತು ಇಂಧನ ಅಭದ್ರತೆ ಹೆಚ್ಚಿದ್ದು, ಹಣಕಾಸು ಸ್ಥಿರತೆಗೆ ಅಪಾಯ ತಂದೊಡ್ಡಿದೆ' ಎಂಬುದನ್ನು ಬಾಲಿ ಘೋಷಣೆ ಒತ್ತಿ ಹೇಳಿದೆ. ಇತರೆ ಅಭಿಪ್ರಾಯಗಳು, ನಿರ್ಬಂಧಗಳ ಬಗ್ಗೆಯೂ ಘೋಷಣೆಯಲ್ಲಿ ಉಲ್ಲೇಖಿಸಲಾಗಿದೆ.

ಪರಮಾಣು ಅಸ್ತ್ರಗಳ ಬಳಕೆ ಹಾಗೂ ಬಳಸುತ್ತೇವೆ ಎಂಬ ಬೆದರಿಕೆಯನ್ನು ಒಪ್ಪಲಾಗದು ಎಂದು ಸದಸ್ಯರಾಷ್ಟ್ರಗಳು ಹೇಳಿವೆ. 'ಬಿಕ್ಕಟ್ಟುಗಳ ಸಂದರ್ಭದಲ್ಲಿ ಶಾಂತಿಯುತ ಪರಿಹಾರ, ಸಮಸ್ಯೆಗಳನ್ನು ನಿಭಾಯಿಸುವ ಯತ್ನಗಳು, ಮಾತುಕತೆ ಹಾಗೂ ರಾಜತಾಂತ್ರಿಕ ಕ್ರಮಗಳು ಈ ನಿಟ್ಟಿನಲ್ಲಿ ಅಗತ್ಯವಾಗಿವೆ' ಎಂದು ಅಭಿಪ್ರಾಯಪಟ್ಟಿವೆ.

'ಯುದ್ಧ ಈ ಸಮಯಕ್ಕಲ್ಲ. ಮಾತುಕತೆ ಮತ್ತು ರಾಜತಾಂತ್ರಿಕ ಯತ್ನಗಳ ಮೂಲಕ ಇದಕ್ಕೆ ಪರಿಹಾರ ಹುಡುಕಬೇಕು. ಎರಡೂ ಕಡೆಯವರ ನಡುವೆ ಇರುವ ಭಿನ್ನಾಭಿಪ್ರಾಯಗಳನ್ನು ಮಾತುಕತೆ ಮೂಲಕ ಪರಿಹರಿಸಬೇಕು ಎಂದು ಪ್ರಧಾನಿ ಅಭಿಪ್ರಾಯಪಟ್ಟರು' ಎಂದು ವಿದೇಶಾಂಗ ಕಾರ್ಯದರ್ಶಿ ವಿನಯ್ ಮೋಹನ್ ಕ್ವಾತ್ರಾ ಅವರು ಬಾಲಿಯಲ್ಲಿ ಸುದ್ದಿಗಾರರಿಗೆ ತಿಳಿಸಿದರು.

ಯುದ್ಧ ಸಾರಿರುವ ರಷ್ಯಾದ ನಿಲುವನ್ನು ಖಂಡಿಸಿಲ್ಲ ಎಂಬ ಕಾರಣಕ್ಕೆ ಅಮೆರಿಕ ಹಾಗೂ ಪಾಶ್ಚಿಮಾತ್ಯ ದೇಶಗಳಿಂದ ಭಾರತವು ಕೆಲವು ತಿಂಗಳಿನಿಂದ ವಿರೋಧ ಎದುರಿಸುತ್ತಿದೆ. ಇದೇ ಸಂದರ್ಭದಲ್ಲಿ ಇದು ಯುದ್ಧದ ಸಮಯವಲ್ಲ ಎಂದು ಜಾಗತಿಕ ವೇದಿಕೆಯಲ್ಲಿ ಭಾರತ ಹೇಳಿದೆ.



ಇಂಡೊನೇಷ್ಯಾ ಅಧ್ಯಕ್ಷ ಜೊಕೊ ವಿಡೊಡೊ ಅವರು ಜಿ–20 ಶೃಂಗಸಭೆಯ ಅಧ್ಯಕ್ಷರ ಗ್ಯಾವೆಲ್ (ಸಣ್ಣಸುತ್ತಿಗೆ) ಅನ್ನು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಬುಧವಾರ ಹಸ್ತಾಂತರಿಸಿದರು —ಎಎಫ್‌ಪಿ ಚಿತ್ರ

ಭಾರತದ ಅಧ್ಯಕ್ಷತೆಯಲ್ಲಿ2023ರ ಜಿ–20

2023ರ ಜಿ–20 ಅಧ್ಯಕ್ಷತೆಯನ್ನು ಭಾರತಕ್ಕೆ ಇಂಡೊನ್ಯೇಷ್ಯಾ ಬುಧವಾರ ಹಸ್ತಾಂತರಿಸಿತು. ಬಾಲಿಯಲ್ಲಿ ನಡೆದ ಶೃಂಗಸಭೆಯ ಕೊನೆಯ ದಿನ, ಇಂಡೊನೇಷ್ಯಾ ಅಧ್ಯಕ್ಷ ಜೊಕೊ ವಿಡೊಡೊ ಅವರು ಅಧ್ಯಕ್ಷರ ಗ್ಯಾವೆಲ್ (ಸಣ್ಣಸುತ್ತಿಗೆ) ಅನ್ನು ನರೇಂದ್ರ ಮೋದಿ ಅವರಿಗೆ ನೀಡಿದರು. ಬಳಿಕ ಮಾತನಾಡಿದ ಪ್ರಧಾನಿ, ಇದು ಪ್ರತಿ ಭಾರತೀಯರ ಹೆಮ್ಮೆ ಎಂದರು.

ಜಾಗತಿಕ ಭೌಗೋಳಿಕ ಬಿಕ್ಕಟ್ಟು, ಆರ್ಥಿಕ ಹಿನ್ನಡೆ, ಆಹಾರ ಮತ್ತು ಇಂಧನ ದರ ಸಮಸ್ಯೆಗಳು ಎದುರಾಗಿರುವ ಸಮಯದಲ್ಲಿ ಭಾರತವು ಜಿ–20 ಅಧ್ಯಕ್ಷತೆ ವಹಿಸಿಕೊಳ್ಳುತ್ತಿದೆ ಎಂದು ಪ್ರಧಾನಿ ಹೇಳಿದರು. ಭಾರತದ ಅಧ್ಯಕ್ಷತೆಯಲ್ಲಿ ನಡೆಯುವ ಶೃಂಗಸಭೆಯು ಎಲ್ಲರನ್ನೂ ಒಳಗೊಂಡ, ಮಹತ್ವಾಕಾಂಕ್ಷೆಯ, ನಿರ್ಣಯ ತೆಗೆದುಕೊಳ್ಳುವ ಹಾಗೂ ಕ್ರಿಯೆ ಆಧಾರಿತವಾಗಿ ಇರಲಿದೆ ಎಂದು ಹೇಳಿದರು.

ಡಿಜಿಟಲ್ ಕ್ರಾಂತಿ ಒಂದು ಭಾಗಕ್ಕೆ ಮಾತ್ರ ಸೀಮಿತವಾಗದೇ, ಜಗತ್ತಿನ ಪ್ರತಿಯೊಬ್ಬ ವ್ಯಕ್ತಿಗೂ ಲಭ್ಯವಾಗುವಂತೆ ಮುಂದಿನ 10 ವರ್ಷಗಳಲ್ಲಿ ಮಾಡಬೇಕು ಎಂದು ಪ್ರಧಾನಿ ಜಾಗತಿಕ ನಾಯಕರಿಗೆ ಕರೆ ನೀಡಿದರು. 'ಅಭಿವೃದ್ಧಿಗಾಗಿ ದತ್ತಾಂಶ' ಎಂಬುದು 2023ರಲ್ಲಿ ಭಾರತದ ಅಧ್ಯಕ್ಷತೆಯಲ್ಲಿ ನಡೆಯಲಿರುವ ಜಿ–20 ಶೃಂಗಸಭೆಯ ಮುಖ್ಯ ಭಾಗವಾಗಿರುತ್ತದೆ ಎಂದರು.

ಗೋವು ಸಾಕಲು ಸರ್ಕಾರಿ ನೌಕರರ ವೇತನ ಕಡಿತ

ಸಂಘದ ಪ್ರಸ್ತಾವಕ್ಕೆ ಸರ್ಕಾರದ ಮಂಜೂರಾತಿ, ನೌಕರರ ಅಪಸ್ವರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೋಶಾಲೆಯಲ್ಲಿ ಹಸುಗಳನ್ನು ಪೋಷಿಸುವ ಸರ್ಕಾರದ ಮಹತ್ವಾಕಾಂಕ್ಷಿ 'ಪುಣ್ಯಕೋಟಿ ದತ್ತು ಯೋಜನೆ'ಗೆ ನೌಕರರ ವೇತನದಿಂದ ದೇಣಿಗೆ ಕಡಿತಗೊಳಿಸಲು ರಾಜ್ಯ ಸರ್ಕಾರ ಬುಧವಾರ (ನ.16) ಮಂಜೂರಾತಿ ನೀಡಿದೆ.

'ಡಿ' ವೃಂದದ ನೌಕರರನ್ನು ಬಿಟ್ಟು, ಇತರ ವೃಂದಗಳ, ನಿಗಮ, ಮಂಡಳಿ, ಪ್ರಾಧಿಕಾರ, ವಿಶ್ವವಿದ್ಯಾಲಯ ಹಾಗೂ ಸ್ವಾಯತ್ತ ಸಂಸ್ಥೆಗಳ ನೌಕರರ ನವೆಂಬರ್ ತಿಂಗಳ ವೇತನದಿಂದ ನಿರ್ದಿಷ್ಟ ಮೊತ್ತ ಕಡಿತವಾಗಲಿದೆ.

ವೇತನದಿಂದ ಒಂದು ಬಾರಿಗೆ ಸೀಮಿತವಾಗಿ ವಂತಿಗೆ ಕಡಿತಗೊಳಿಸುವಂತೆ ರಾಜ್ಯ ಸರ್ಕಾರಿ ನೌಕರರ ಸಂಘದ ನಿಯೋಗ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಗೆ ಇತ್ತೀಚೆಗೆ ಪ್ರಸ್ತಾವ ಸಲ್ಲಿಸಿತ್ತು. ಅದರಂತೆ, ಈ ಮಂಜೂರಾತಿ ನೀಡಲಾಗಿದೆ. ವಂತಿಗೆ ಕೊಡಲು ಇಚ್ಛೆ ಇಲ್ಲದವರು, ಅಸಮ್ಮತಿ ಪತ್ರವನ್ನು ಇದೇ 25ರ ಒಳಗೆ ಸಂಬಂಧಿಸಿದ ವೇತನ ಬಟವಾಡೆ ಅಧಿಕಾರಿಗಳಿಗೆ ಲಿಖಿತವಾಗಿ ನೀಡಬೇಕು ಎಂದೂ ಆದೇಶದಲ್ಲಿ ವಿವರಿಸಲಾಗಿದೆ.

ಆದರೆ, ಸಂಘ ಸಲ್ಲಿಸಿದ್ದ ಪ್ರಸ್ತಾವ ಮತ್ತು ಸರ್ಕಾರದ ಮಂಜೂರಾತಿಗೆ ನೌಕರರ ವಲಯದಿಂದ ಆಕ್ಷೇಪ ವ್ಯಕ್ತವಾಗಿದೆ.

ಪ್ರಸಕ್ತ ಸಾಲಿನ (2022-23) ಬಜೆಟ್‌ನಲ್ಲಿ 'ಪುಣ್ಯಕೋಟಿ' ದತ್ತು ಯೋಜನೆಯನ್ನು ಮುಖ್ಯಮಂತ್ರಿ ಘೋಷಿಸಿದ್ದರು. ಅಲ್ಲದೆ, ಈ ಯೋಜನೆಯ ಧ್ಯೇಯೋದ್ದೇಶಕ್ಕೆ ಪೂರಕವಾಗಿ ಗೋವುಗಳನ್ನು ಪೋಷಿಸುವ ಕಾರ್ಯಕ್ಕೆ ಸರ್ಕಾರದ ಹಾಗೂ ಸರ್ಕಾರದ ಇತರ ಅವಿಭಾಜ್ಯ ಅಂಗಗಳಾದ ನಿಗಮ, ಮಂಡಳಿ, ಪ್ರಾಧಿಕಾರ, ವಿಶ್ವವಿದ್ಯಾಲಯ, ಸ್ವಾಯತ್ತ ಸಂಸ್ಥೆಗಳ ನೌಕರರು ನೆರವು ನೀಡಬೇಕು ಎಂದು ಮನವಿ ಮಾಡಿದ್ದರು.

ಇತ್ತೀಚೆಗೆ ಮುಖ್ಯಮಂತ್ರಿ ಅವರನ್ನು ಭೇಟಿ ಮಾಡಿದ್ದ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ನೇತೃತ್ವದ ನಿಯೋಗ, ನೌಕರರ ವೇತನದಿಂದ ಹಣ ಕಡಿತ ಮಾಡಿ ಈ ಯೋಜನೆಗೆ ₹ 100 ಕೋಟಿ ದೇಣಿಗೆ ನೀಡುವ ಪತ್ರವನ್ನು ನೀಡಿದ್ದರು.

'ನೌಕರರ ಸಂಘ ಈ ಹಿಂದೆ ಪ್ರವಾಹ, ಕೋವಿಡ್, ಭೂಕಂಪದಂಥ ಸಂದರ್ಭದಲ್ಲಿಯೂ ಸರ್ಕಾರದ ನೆರವಿಗೆ ನಿಂತಿದೆ. ಇದೊಂದು ಉತ್ತಮ ಯೋಜನೆ. ನೆರವು ನೀಡುವಂತೆ ಮುಖ್ಯಮಂತ್ರಿ ಮನವಿ ಮಾಡಿದ್ದರು. ಹೀಗಾಗಿ, ರಾಜ್ಯದಲ್ಲಿರುವ 107 ಸಂಘಗಳ ಪ್ರತಿನಿಧಿಗಳ ಸಭೆ ಕರೆದು ಚರ್ಚಿಸಿ, ಒಮ್ಮತದಿಂದ ಈ ತೀರ್ಮಾನ ತೆಗೆದುಕೊಂಡಿದ್ದೇವೆ. 7ನೇ ವೇತನ ಆಯೋಗ ರಚಿಸುವ ಮೂಲಕ ನೌಕರರ ಪರ ಸರ್ಕಾರ ನಿಂತಿದೆ. ಅದಕ್ಕೆ ಪೂರಕವಾಗಿ ನಾವೂ ಸ್ಪಂದಿಸಿದ್ದೇವೆ. ಹಾಗೆಂದು, ವಂತಿಗೆ ನೀಡುವಂತೆ ಯಾರಿಗೂ ಬಲವಂತ ಇಲ್ಲ. ಶೇ 95ರಷ್ಟು ನೌಕರರು ವೇತನದಿಂದ ದೇಣಿಗೆ ನೀಡುವ ವಿಶ್ವಾಸವಿದೆ' ಎಂದು ಅಧ್ಯಕ್ಷ ಷಡಾಕ್ಷರಿ ತಿಳಿಸಿದರು.

ಅಸಮಾಧಾನ: 'ಸರ್ಕಾರ 7ನೇ ವೇತನ ಆಯೋಗ ರಚಿಸಿದ ಆದೇಶ ಇನ್ನೂ ಬಂದಿಲ್ಲ. ಆದರೆ, ಪುಣ್ಯಕೋಟಿ ಯೋಜನೆಗೆ ವೇತನದಿಂದ ವಂತಿಗೆ ಕಡಿತಗೊಳಿಸುವ ಆದೇಶ ತರಾತುರಿಯಲ್ಲಿ ಬಂದಿದೆ. ಇದು ನಮ್ಮ ದುರಾದೃಷ್ಟ' ಎಂದು ಸಚಿವಾಲಯ ನೌಕರರ ಸಂಘದ ಅಧ್ಯಕ್ಷ ಎಂದು ಪಿ. ಗುರುಸ್ವಾಮಿ ಅವರು ಅಸಮಾಧಾನ ವ್ಯಕ್ತಪಡಿಸಿದರು.

ಎಸ್‌ಸಿ, ಎಸ್‌ಟಿ ನೌಕರರ ಸಂಘ ಅಸಮ್ಮತಿ

'ರಾಜ್ಯದಲ್ಲಿ ನಮ್ಮ ಸಂಘ ಕೂಡಾ ಬಲಿಷ್ಠವಾದುದು. ಯೋಜನೆಗೆ ವೇತನದಿಂದ ದೇಣಿಗೆ ಕಟಾಯಿಸುವ ಬಗ್ಗೆ ನಮ್ಮ ಜೊತೆ ರಾಜ್ಯ ಸರ್ಕಾರಿ ನೌಕರರ ಸಂಘವಾಗಲಿ, ಇತರ ಅಧಿಕಾರಿಗಳಾಗಲಿ ಸಮಾಲೋಚನೆ ನಡೆಸಿಲ್ಲ. ಹೀಗಾಗಿ, ವೇತನ ಕಟಾಯಿಸುವುದಕ್ಕೆ ನಮ್ಮ ಸಮ್ಮತಿ ಇಲ್ಲ' ಎಂದು ರಾಜ್ಯ ಸರ್ಕಾರಿ ಎಸ್‌ಸಿ, ಎಸ್‌ಟಿ ನೌಕರರ ಸಂಘದ ಅಧ್ಯಕ್ಷ ಡಿ. ಚಂದ್ರಶೇಖರಯ್ಯ ಹೇಳಿದರು.

ಯಾರಿಂದ ಎಷ್ಟು ಮೊತ್ತ?

ವೃಂದ	ಮೊತ್ತ (₹ಗಳಲ್ಲಿ)
'ಎ' ವೃಂದ	11,000
'ಬಿ' ವೃಂದ	4,000
'ಸಿ' ವೃಂದ	4,00
'ಡಿ' ವೃಂದ	ವಿನಾಯಿತಿ

ಒಳ ಪುಟಗಳು



ಬಸ್ ತಂಗುದಾಣ ತೆರವಿಗೆ ನೋಟಿಸ್ 5

ಬೆಳಗಾವಿ: ಕಬ್ಬಿಗೆ ಬೆಲೆ ನಿಗದಿ– ಸಕ್ಕರೆ ಆಯುಕ್ತರ ಕಚೇರಿಗೆ ಮುತ್ತಿಗೆ 7

ಶ್ರದ್ಧಾ ಹತ್ಯೆ ಆರೋಪಿಗೆ ನಾರ್ಕೋ ಪರೀಕ್ಷೆ: ಅನುಮತಿ ಕೇಳಿದ ಪೊಲೀಸರು 11

ಐಟಿಟಿಎಫ್: ಶರತ್ ಕಮಲ್ ಆಯ್ಕೆ 12

ಟಿ20 ರ‍್ಯಾಂಕಿಂಗ್: ಅಗ್ರಸ್ಥಾನ ಉಳಿಸಿಕೊಂಡ ಸೂರ್ಯ 12

ಮೂರು ದಿನಗಳ 'ಬೆಂಗಳೂರು ಟೆಕ್ ಸಮ್ಮಿಟ್'ಗೆ ಚಾಲನೆ

ಬೆಂಗಳೂರಿನಲ್ಲಿ ನವೋದ್ಯಮ ಪಾರ್ಕ್: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಶೋಧನೆ, ಅಭಿವೃದ್ಧಿ ಮತ್ತು ಆವಿಷ್ಕಾರಗಳನ್ನು ಉತ್ತೇಜಿಸುವ ಸಲುವಾಗಿ ಇಲ್ಲಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಸಮೀಪದಲ್ಲಿ ನವೋದ್ಯಮ ಪಾರ್ಕ್ ಸ್ಥಾಪಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಕಟಿಸಿದರು.

ನಗರದ ಅರಮನೆ ಮೈದಾನದಲ್ಲಿ ಬುಧವಾರ ಆರಂಭವಾದ ಮೂರು ದಿನಗಳ 'ಬೆಂಗಳೂರು ಟೆಕ್ ಸಮ್ಮಿಟ್' ಉದ್ಘಾಟನಾ ಸಮಾರಂಭದಲ್ಲಿ 'ಬೆಂಗಳೂರು ಟೆಕ್ ಸಮ್ಮಿಟ್ ರಜತ ಮಹೋತ್ಸವ' ಲಾಂಛನ ಬಿಡುಗಡೆ ಮಾಡಿ ಮಾತನಾಡಿದ ಅವರು, 'ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ಫಿನ್‌ಟೆಕ್ ಸೇರಿದಂತೆ ಹಲವು ಕ್ಷೇತ್ರಗಳಿಗೆ ಸಂಬಂಧಿಸಿದ ನವೋದ್ಯಮಗಳು ಬೆಂಗಳೂರಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿವೆ. ರಾಜಧಾನಿಯು ಈಗ ನವೋದ್ಯಮಗಳ ಕೇಂದ್ರವಾಗಿದೆ. ಅವುಗಳಿಗೆ ಮತ್ತಷ್ಟು ಉತ್ತೇಜನ ನೀಡುವ ಉದ್ದೇಶದಿಂದ 6 ತಿಂಗಳೊಳಗೆ ನವೋದ್ಯಮ ಪಾರ್ಕ್ ಸ್ಥಾಪನೆ ಮಾಡಲಾಗುವುದು' ಎಂದರು.

7ನೇ ಪುಟ ನೋಡಿ



ಸಮಾರಂಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು 'ಬೆಂಗಳೂರು ಟೆಕ್ ಸಮ್ಮಿಟ್'ನ ರಜತ ಮಹೋತ್ಸವ ಸ್ಮರಣಿಕೆ ಬಿಡುಗಡೆ ಮಾಡಿದರು. ಫಿನ್ಲೆಂಡ್‌ನ ವಿಜ್ಞಾನ, ಸಂಸ್ಕೃತಿ ಸಚಿವ ಪೆಟ್ರೊ ಹೊಂಕೊನೆನ್, ರಾಜ್ಯದ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ, ಯುಎಇಯ ಕೃತಕ ಬುದ್ಧಿಮತ್ತೆ, ಡಿಜಿಟಲ್ ಆರ್ಥಿಕತೆ ಹಾಗೂ ರಿಮೋಟ್ ತಂತ್ರಾಂಶಗಳ ಖಾತೆ ರಾಜ್ಯ ಸಚಿವ ಒಮರ್ ಬಿನ್ ಸುಲ್ತಾನ್ ಅಲ್ ಒಲಾಮ ಇದ್ದರು

'₹ 36,804 ಕೋಟಿ ಹೂಡಿಕೆ'

'ಎಲೆಕ್ಟ್ರಾನಿಕ್ ಕ್ಷೇತ್ರದ ಹಲವು ಉದ್ದಿಮೆಗಳು ರಾಜ್ಯದಲ್ಲಿ ₹ 36,804 ಕೋಟಿ ಹೂಡಿಕೆ ಮಾಡಲಿವೆ. ರಾಜ್ಯದ ವಿವಿಧೆಡೆ ಈ ಕಂಪನಿಗಳು ಉತ್ಪಾದನಾ ಚಟುವಟಿಕೆ ಆರಂಭಿಸಲಿವೆ' ಎಂದು ಮಾಹಿತಿ ತಂತ್ರಜ್ಞಾನ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ ತಿಳಿಸಿದರು.

'ರಾಜ್ಯದಲ್ಲಿ ಈಗ ಐ.ಟಿ ಮತ್ತು ಬಿ.ಟಿ ವಲಯದಲ್ಲಿ 135 ಶತಕೋಟಿ ಡಾಲರ್ ಮೊತ್ತದ ವಹಿವಾಟು ನಡೆಯುತ್ತಿದೆ. 2025ರ ವೇಳೆಗೆ ಈ ವಹಿವಾಟಿನ ಪ್ರಮಾಣವನ್ನು 300 ಶತಕೋಟಿ ಡಾಲರ್‌ಗಳಿಗೆ ಹೆಚ್ಚಿಸುವ ಗುರಿ ಇದೆ' ಎಂದು ಹೇಳಿದರು.

ಶಿಕ್ಷಕರ ವರ್ಗಾವಣೆ ಕರಡು ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿಕ್ಷಕರ ವರ್ಗಾವಣೆಗೆ ಇದ್ದ ಹಲವು ನಿರ್ಬಂಧಗಳನ್ನು ರದ್ದುಪಡಿಸಿ, ಶಿಕ್ಷಕ ಸ್ನೇಹಿ ವರ್ಗಾವಣೆ ನೀತಿ ಜಾರಿಗೊಳಿಸಲು ಮುಂದಾಗಿರುವ ಸರ್ಕಾರ, ಈ ಸಂಬಂಧ ಬುಧವಾರ ಕರಡು ಅಧಿಸೂಚನೆ ಹೊರಡಿಸಿದೆ.

ಕರ್ನಾಟಕ ರಾಜ್ಯ ನಾಗರಿಕ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಕಾಯ್ದೆ -2020ಕ್ಕೆ ತರಲಾಗಿದ್ದ ತಿದ್ದುಪಡಿಗೆ ವಿಧಾನಮಂಡಲ ಅಧಿವೇಶನದಲ್ಲಿ ಅನುಮೋದನೆ ಪಡೆಯಲಾಗಿತ್ತು. ಈಗ ಕರಡು ಅಧಿಸೂಚನೆ ಹೊರಡಿಸಲಾಗಿದ್ದು, ಅಧಿಕೃತ ಗೆಜೆಟ್‌ನಲ್ಲಿ ಪ್ರಕಟಿಸಿದ ದಿನದಿಂದ 15 ದಿನಗಳ ನಂತರ ಪರಿಗಣನೆಗೆ ತೆಗೆದುಕೊಳ್ಳಲಾಗುವುದು ಎಂದು ವಿವರಿಸಲಾಗಿದೆ.

ಪರಸ್ಪರ ವರ್ಗಾವಣೆಗೆ ಒಂದು ಬಾರಿ ಮಾತ್ರ ಅವಕಾಶ ಇತ್ತು. ಇನ್ನು ಮುಂದೆ ಆ ನಿರ್ಬಂಧ ಇರುವುದಿಲ್ಲ. ಕೆಲಸಕ್ಕೆ ಸೇರಿದ ಮೊದಲ ಐದು ವರ್ಷ ಹಾಗೂ ನಿವೃತ್ತಿಗೆ ಮೊದಲಿನ ಐದು ವರ್ಷ ವರ್ಗಾವಣೆಗೆ ಅವಕಾಶ ಇರುವುದಿಲ್ಲ. ಆದರೆ, ಒಮ್ಮೆ ವರ್ಗಾವಣೆಯಾದ ಬಳಿಕ ಮತ್ತೆ ಮೂರು ವರ್ಷ ಅರ್ಜಿ ಸಲ್ಲಿಸುವಂತಿಲ್ಲ.

ಕಲ್ಯಾಣ ಕರ್ನಾಟಕದ ಏಳು ಜಿಲ್ಲೆಗಳು (371 ಜೆ ಅನ್ವಯ), ಮಲೆನಾಡು ವಲಯ ಹಾಗೂ ನಂಜುಂಡಪ್ಪ ವರದಿಯ ಅನ್ವಯ ಶೈಕ್ಷಣಿಕವಾಗಿ ಹಿಂದುಳಿದ ಪ್ರದೇಶ ಎಂದು ಗುರುತಿಸಲಾಗಿರುವ ತಾಲ್ಲೂಕುಗಳಿಗೆ ಹೋಗಬಯಸುವವರಿಗೆ ವಿಶೇಷ ಆದ್ಯತೆ ಸಿಗಲಿದೆ. ಸಾರ್ವತ್ರಿಕ ವರ್ಗಾವಣೆ ವೇಳೆ ಒಟ್ಟು ವೃಂದ ಬಲದ ಶೇ 11ರಷ್ಟು ಮಿತಿಯೊಳಗೆ ಮಾತ್ರ ವರ್ಗಾವಣೆ ಮಾಡಲು ಅವಕಾಶ ಇರುತ್ತದೆ. ವಿಶೇಷ ಆದ್ಯತೆಯಡಿ ವರ್ಗಾವಣೆ ಬಯಸುವವರಿಗೆ ಈ ನಿಯಮ ಅನ್ವಯವಾಗದು. ಉಳಿದೆಲ್ಲ ನಿಯಮಗಳು ಮುಂದುವರಿಯಲಿವೆ.

ಯಾವುದೇ ಒಂದು ಘಟಕ ಹಾಗೂ ವೃಂದದಲ್ಲಿ ಕನಿಷ್ಠ 10 ವರ್ಷ ಅಥವಾ ಎಲ್ಲ ವೃಂದಗಳೂ ಸೇರಿ 15 ವರ್ಷ ಕೆಲಸ ಮಾಡಿದ ಶಿಕ್ಷಕರನ್ನು ಶೇ 25ರಷ್ಟು ಮಿತಿಯ ಒಳಗೆ ಖಾಲಿ ಹುದ್ದೆಗಳಿರುವ ತಾಲ್ಲೂಕಿಗೆ ವರ್ಗಾವಣೆ ಮಾಡಲು ಅವಕಾಶ ಇರುತ್ತದೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಜಿಲ್ಲಾ ಆಸ್ಪತ್ರೆಗಳಲ್ಲಿ ಶೀಘ್ರವೇ ಸಹಾಯವಾಣಿ

ತುಮಕೂರು: 'ರಾಜ್ಯದ ಎಲ್ಲಾ ಜಿಲ್ಲಾ ಆಸ್ಪತ್ರೆಗಳಲ್ಲಿ 24X7 ಕಾರ್ಯ ನಿರ್ವಹಿಸುವ ಸಹಾಯವಾಣಿ ತೆರೆಯಲು ನಿರ್ಧರಿಸಲಾಗಿದೆ' ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ತಿಳಿಸಿದರು.

ಬುಧವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, 'ರೋಗಿಗಳಿಗೆ ಸಹಾಯ ಮಾಡುವ ಸಲುವಾಗಿ ಸಹಾಯವಾಣಿ ಆರಂಭಿಸಲಾಗುತ್ತಿದೆ. ಇದಕ್ಕಾಗಿ ಪ್ರತಿ ಸಹಾಯವಾಣಿಗೆ ನಾಲ್ವರು ಸಿಬ್ಬಂದಿ ನಿಯೋಜಿಸಲಾಗುತ್ತದೆ. ಪ್ರತಿ ಪಾಳಿಯಲ್ಲಿ ಇಬ್ಬರು ಕೆಲಸ ನಿರ್ವಹಿಸಲಿದ್ದಾರೆ' ಎಂದು ಮಾಹಿತಿ ನೀಡಿದರು.

'ಸರ್ಕಾರಿ ಆಸ್ಪತ್ರೆಗಳಲ್ಲಿ ಸಿಜೇರಿಯನ್ ಹೆರಿಗೆ ಕಡಿಮೆ ಮಾಡಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿದೆ. ಅದಕ್ಕಾಗಿ ಸಮಿತಿ ರಚಿಸಲು ತೀರ್ಮಾನಿಸಲಾಗಿದೆ. ಜಿಲ್ಲಾ ಆಸ್ಪತ್ರೆಗಳಲ್ಲಿ ಜಿಲ್ಲಾ ವೈದ್ಯಾಧಿಕಾರಿ ಹಾಗೂ ತಾಲ್ಲೂಕು ಆಸ್ಪತ್ರೆಗಳಲ್ಲಿ ತಾಲ್ಲೂಕು ವೈದ್ಯಾಧಿಕಾರಿ ನೇತೃತ್ವದಲ್ಲಿ ಸಮಿತಿ ರಚಿಸಲು ನಿರ್ಧರಿಸಲಾಗಿದೆ. ಈ ಸಮಿತಿಯಲ್ಲಿ ಸ್ತ್ರೀರೋಗ ಹಾಗೂ ಪ್ರಸೂತಿ ತಜ್ಞ ವೈದ್ಯರು, ಅರಿವಳಿಕೆ ವೈದ್ಯರನ್ನು ಒಳಗೊಂಡ ತಂಡ ಇರುತ್ತದೆ. ಈ ಸಮಿತಿ ಸಿಜೇರಿಯನ್ ಹೆರಿಗೆ ಮಾಡಬೇಕೇ, ಬೇಡವೇ ಎಂಬುದನ್ನು ನಿರ್ಧರಿಸಲಿದೆ' ಎಂದರು.

7ನೇ ಪುಟ ನೋಡಿ

ತಬ್ಬಲಿ ಬಾಲಕಿಗೆ ₹10 ಲಕ್ಷ ನೆರವು

'ತುಮಕೂರು ಜಿಲ್ಲಾ ಆಸ್ಪತ್ರೆ ಸಿಬ್ಬಂದಿ ನಿರ್ಲಕ್ಷ್ಯದಿಂದಲೇ ತಾಯಿ ಮತ್ತು ಅವಳಿ ಶಿಶುಗಳು ಸಾವನ್ನಪ್ಪಿವೆ. ಆರೋಗ್ಯ ಇಲಾಖೆ ಆಯುಕ್ತರು ತನಿಖೆ ನಡೆಸುತ್ತಿದ್ದು, ವರದಿ ಬಂದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ಸುಧಾಕರ್ ಹೇಳಿದರು.

ಘಟನೆ ನಡೆದ ದಿನ ಕರ್ತವ್ಯದಲ್ಲಿದ್ದ ಡಾ.ಉಷಾ, ತಮ್ಮದೇನೂ ತಪ್ಪಿಲ್ಲ ಎಂದು ಸರ್ಕಾರಿ ವೈದ್ಯರ ಸಂಘಕ್ಕೆ ಪತ್ರ ಬರೆದಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ನಾನು ಸಿ.ಸಿ ಟಿ.ವಿ ಕ್ಯಾಮೆರಾ ದೃಶ್ಯಾವಳಿ ಗಮನಿಸಿದ್ದೇನೆ. ಮೃತ ಮಹಿಳೆ ಹಾಗೂ ವೈದ್ಯೆ ಉಷಾ ಒಟ್ಟಿಗೆ ಇರುವುದನ್ನು ಗಮನಿಸಿದ ನಂತರವೇ ಅಮಾನತು ಮಾಡಲಾಗಿದೆ. ಇದು ಏಕಪಕ್ಷೀಯ ನಿರ್ಧಾರವಲ್ಲ' ಎಂದು ಸ್ಪಷ್ಟಪಡಿಸಿದರು.

'ಚಿಕಿತ್ಸೆ ಸಿಗದೆ ಮೃತಪಟ್ಟ ಮಹಿಳೆಯ ತಬ್ಬಲಿ ಪುತ್ರಿಗೆ ಆರೋಗ್ಯ ಇಲಾಖೆಯಿಂದ ₹10 ಲಕ್ಷ ನೆರವು ನೀಡಲು ನಿರ್ಧರಿಸಲಾಗಿದೆ. ಹಣವನ್ನು ಬಾಲಕಿ ಹೆಸರಲ್ಲಿ ಠೇವಣಿ ಇಡಲಾಗುತ್ತದೆ. ಆಕೆಗೆ 18 ವರ್ಷ ತುಂಬಿದ ಬಳಿಕ ಹಣ ಕೈ ಸೇರಲಿದೆ' ಎಂದು ಸಚಿವರು ತಿಳಿಸಿದರು.

5 ದಶಕಗಳಲ್ಲಿ ವ್ಯಾಘ್ರ ಸಂರಕ್ಷಣೆಯ ಮಾದರಿ ಯೋಜನೆ; ಮಾನವ- ವನ್ಯಜೀವಿ ಸಂಘರ್ಷ ಸವಾಲು

ಬಂಡೀಪುರ ಹುಲಿ ಯೋಜನೆಗೆ 'ಸುವರ್ಣ ಸಂಭ್ರಮ'

• ಸೂರ್ಯನಾರಾಯಣ ವಿ.

ಚಾಮರಾಜನಗರ: ರಾಜ್ಯದ ಮೊದಲ ಹುಲಿ ಯೋಜನೆಗೆ (ಬಂಡೀಪುರ) ಈಗ ಸುವರ್ಣ ಮಹೋತ್ಸವದ ಸಂಭ್ರಮ. ಐದು ದಶಕಗಳಲ್ಲಿ ದೇಶದಲ್ಲೇ ಮಾದರಿ ಹುಲಿ ಯೋಜನೆಯಾಗಿ ಗುರುತಿಸಿಕೊಂಡಿದೆ.

ಅಳಿವಿನಂಚಿಗೆ ಸಾಗುತ್ತಿದ್ದ ಹುಲಿಗಳ ಸಂತತಿ ರಕ್ಷಣೆಗಾಗಿ ಇಂದಿರಾ ಗಾಂಧಿ ನೇತೃತ್ವದ ಕೇಂದ್ರ ಸರ್ಕಾರ 1972ರಲ್ಲಿ ಜಾರಿಗೊಳಿಸಿದ್ದ ವನ್ಯಜೀವಿ ಸಂರಕ್ಷಣಾ ಕಾಯ್ದೆ ಅಡಿ ದೇಶದಲ್ಲಿ 9 ಸಂರಕ್ಷಿತ ಪ್ರದೇಶಗಳನ್ನು ಹುಲಿ ಯೋಜನೆಗೆ ಸೇರ್ಪಡೆಗೊಳಿಸಲಾಗಿತ್ತು. ಅದರಲ್ಲಿ ಬಂಡೀಪುರವೂ ಒಂದು. 1973ರ ನ.16ರಂದು ಅಂದಿನ ಮುಖ್ಯಮಂತ್ರಿ ಡಿ.ದೇವರಾಜ ಅರಸು ಉದ್ಘಾಟಿಸಿದ್ದರು.

ಜೀವ ವೈವಿಧ್ಯ ತಾಣ: 'ಹುಲಿ ಯೋಜನೆ ಘೋಷಣೆಯಾದಾಗ ಬಂಡೀಪುರ ಅರಣ್ಯದಲ್ಲಿ 12 ಹುಲಿಗಳಿದ್ದವು. 2020ರ ಮಾಹಿತಿ ಪ್ರಕಾರ 143 ಹುಲಿಗಳಿವೆ. ಇದಲ್ಲದೇ 200 ಚಿರತೆಗಳು, 3,046 ಆನೆಗಳಿವೆ. ಹುಲಿ ಹಾಗೂ ಚಿರತೆಗಳ ಲೆಕ್ಕಾಚಾರದಲ್ಲಿ 2ನೇ ಸ್ಥಾನದಲ್ಲಿದ್ದೇವೆ. ಆನೆಗಳ ಸಂಖ್ಯೆಯಲ್ಲಿ ನಾವೇ ಮೊದಲ ಸ್ಥಾನ' ಎಂದು ಹುಲಿ ಯೋಜನೆ ನಿರ್ದೇಶಕ ಡಾ.ರಮೇಶ್ ಕುಮಾರ್ ತಿಳಿಸಿದರು.

ಕಾಡೆಮ್ಮೆ, ಜಿಂಕೆಗಳು ಸೇರಿದಂತೆ ನೂರಾರು ಪ್ರಾಣಿ ಪ್ರಭೇದಗಳು, 260ಕ್ಕೂ ಹೆಚ್ಚು ಪಕ್ಷಿಗಳಿಗೆ ಬಂಡೀಪುರ ಅರಣ್ಯ ಆಶ್ರಯ ನೀಡಿದೆ.

ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕು, ಮೈಸೂರು ಜಿಲ್ಲೆಯ ನಂಜನಗೂಡು, ಎಚ್.ಡಿ.ಕೋಟೆ ತಾಲ್ಲೂಕುಗಳಲ್ಲಿ ಹರಡಿಕೊಂಡಿರುವ ಸಂರಕ್ಷಿತ ಪ್ರದೇಶ 1,036 ಚದರ ಕಿ.ಮೀ ವಿಸ್ತೀರ್ಣವಿದೆ. ತಮಿಳುನಾಡಿನ ಮುದುಮಲೆ ಹುಲಿ ಸಂರಕ್ಷಿತ ಪ್ರದೇಶ, ಕೇರಳದ ವಯನಾಡು ಹುಲಿ ರಕ್ಷಿತಾರಣ್ಯ, ಮೈಸೂರು ಜಿಲ್ಲೆಯ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶಗಳಿಗೆ ಹೊಂದಿಕೊಂಡಿದೆ.


7ನೇ ಪುಟ ನೋಡಿ

ಬೇಟೆ ಕಲಿತ ಮೂರು ಹುಲಿ ಮರಿಗಳು

ಎಚ್.ಡಿ.ಕೋಟೆ (ಮೈಸೂರು ಜಿಲ್ಲೆ): ನಾಗರಹೊಳೆ ರಾಷ್ಟ್ರೀಯ ಉದ್ಯಾನ ವ್ಯಾಪ್ತಿಯ ಅಂತರಸಂತೆ ವನ್ಯಜೀವಿ ವಲಯ ವ್ಯಾಪ್ತಿಯ ಕಾಡಂಚಿನಲ್ಲಿ ಉರುಳಿಗೆ ಸಿಲುಕಿ ಹತ್ಯೆಯಾದ ಹೆಣ್ಣು ಹುಲಿಯ ಮೂರು ಮರಿಗಳು ಬೇಟೆಯಾಡಿ ಒಟ್ಟಿಗೆ ತಿನ್ನುತ್ತಿರುವ ದೃಶ್ಯ ಟ್ರ್ಯಾಪಿಂಗ್ ಕ್ಯಾಮೆರಾದಲ್ಲಿ ಸೆರೆಯಾಗಿದೆ.

'ಜಿಂಕೆಯನ್ನು ಯಾವುದೋ ಮಾಂಸಹಾರಿ ಪ್ರಾಣಿ ದಾಳಿ ಮಾಡಿ ಕೊಂದು ಸ್ವಲ್ಪ ಮಾಂಸ ತಿಂದಿರುವುದು ಮಂಗಳವಾರ ಕಂಡು ಬಂದಿತ್ತು. ಹೀಗಾಗಿ, ಆ ಕಳೇಬರದ ಸುತ್ತ ಟ್ರ್ಯಾಪಿಂಗ್ ಕ್ಯಾಮೆರಾಗಳನ್ನು ಅಳವಡಿಸಲಾಗಿತ್ತು'.

7ನೇ ಪುಟ ನೋಡಿ



ಅಂತರಸಂತೆ ವನ್ಯಜೀವಿ ವಲಯದ ದಮ್ಮನಕಟ್ಟೆ ಬೀಟ್‌ನಲ್ಲಿ ಹುಲಿ ಮರಿಗಳು ಕಾಡಿನಲ್ಲಿ ಬೇಟೆಯಾಡಿ ಜಿಂಕೆ ಮಾಂಸ ತಿನ್ನುತ್ತಿರುವ ದೃಶ್ಯ ಸೆರೆಯಾಗಿದೆ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ತಂತ್ರಜ್ಞಾನ ಲೋಕದ ಅನಾವರಣ: ಭಾಷೆ ಸಂಸ್ಕೃತಿ ಅಭಿವೃದ್ಧಿಗೆ ನೆರವಾಗುವ ಅನಿಮೇಷನ್ ಚಮತ್ಕಾರ

ಶತ್ರು ಮೇಲೆ ನಿಗಾವಹಿಸುವ ಗೋಡೆಯಲ್ಲಿನ ರೇಡಾರ್!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶತ್ರುಗಳ ಚಟುವಟಿಕೆ ಮೇಲೆ ನಿಗಾವಹಿಸುವ ಗೋಡೆಯಲ್ಲಿನ ರೇಡಾರ್, ಆರೋಗ್ಯ ರಕ್ಷಣೆಗೆ ಮಾಹಿತಿ ಒದಗಿಸುವ ಆ್ಯಪ್‌ಗಳು, ಅನಿಮೇಷನ್ ಮೂಲಕ ಧಾರಾವಾಹಿ ನಿರ್ಮಾಣ ಇಂತಹ ಹತ್ತಾರು ತಂತ್ರಜ್ಞಾನಗಳ ಲೋಕವೇ ‘ಬೆಂಗಳೂರು ಟೆಕ್ ಸಮ್ಮಿಟ್’ನಲ್ಲಿ ಅನಾವರಣಗೊಂಡಿದೆ.

‘ಟೆಕ್ ಸಮ್ಮಿಟ್’ ಅಂಗವಾಗಿ ಆಯೋಜಿಸಿರುವ ಪ್ರದರ್ಶನದಲ್ಲಿ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಅಭಿವೃದ್ಧಿಪಡಿಸಿರುವ ರೇಡಾರ್ ಗಮನಸೆಳೆಯಿತು. ಇದು ಗೋಡೆಗಳ ಹಿಂದೆ ಇರುವ ಮನುಷ್ಯರು ಮತ್ತು ಅವರ ಸ್ಥಳ, ಚಟುವಟಿಕೆಗಳನ್ನು ಸೆನ್ಸರ್ ಮೂಲಕ ಗುರುತಿಸುತ್ತದೆ. ಇದರಿಂದ, ಶತ್ರುಗಳ ಕೈಗೊಳ್ಳಬಹುದಾದ ದಾಳಿಯನ್ನು ಎದುರಿಸಲು ಸಜ್ಜಾಗುವ ಜತೆಗೆ ಪ್ರತಿ ದಾಳಿ ಸಹ ನಡೆಸಬಹುದಾಗಿದೆ ಎಂದು ಅಧಿಕಾರಿಗಳು ವಿವರಿಸಿದರು.

ಅವಶೇಷಗಳ ಅಡಿಯಲ್ಲಿ ಸಂತ್ರಸ್ತರು ಸಿಲುಕಿದಾಗ ರಕ್ಷಣಾ ಕಾರ್ಯ ನಡೆಸಲು ಸಹ ಇದು ನೆರವಾಗಲಿದೆ. ಹೃದಯ ಬಡಿತ ಮತ್ತು ಉಸಿರಾಟವನ್ನು ಪತ್ತೆ ಮಾಡುವ ಮೂಲಕ ಈ ರೇಡಾರ್ ಸಂತ್ರಸ್ತರು ಇರುವ ನಿಖರ ಸ್ಥಳವನ್ನು ಗುರುತಿಸಲಿದೆ ಎಂದು ತಿಳಿಸಿದರು.



ಡಿಆರ್‌ಡಿಒ ಅಭಿವೃದ್ಧಿಪಡಿಸಿದ ಗೋಡೆಯಲ್ಲಿ ಅಳವಡಿಸುವ ರೇಡಾರ್ – ಪ್ರಜಾವಾಣಿ ಚಿತ್ರ

25 ಬೆಂಗಳೂರು ಟೆಕ್ ಸಮ್ಮಿಟ್

ಅನಿಮೇಷನ್ ಲೋಕ ತೆರೆದಿಟ್ಟ ಯುವಕರು: ಸ್ಥಳೀಯ ಭಾಷೆ, ಸಂಸ್ಕೃತಿಗೆ ಆದ್ಯತೆ ನೀಡುವ ಉದ್ದೇಶದಿಂದ ಹುಬ್ಬಳ್ಳಿಯಲ್ಲಿ ಯುವಕರು ಆರಂಭಿಸಿರುವ ‘ಮೌಂಟೇನ್ ಫ್ಲವರ್’ ಕಂಪನಿ ಅನಿಮೇಷನ್ ಕ್ಷೇತ್ರದಲ್ಲಿ ತನ್ನದೇ ಆದ ಛಾಪು ಮೂಡಿಸಿದೆ.

ಹುಬ್ಬಳ್ಳಿಯ ರವಿ ಬೇವಿನಗಿಡದ ಈ ಕಂಪನಿಯ ಸಂಸ್ಥಾಪಕರು ಮತ್ತು ಸಿಇಒ. ರಜತ್ ಮತ್ತು ಚೈತ್ರಾ ಅವರು ಕಂಪನಿ ಮುನ್ನಡೆಸಲು ಕೈಜೋಡಿಸಿದ್ದಾರೆ. ಹಲವು ಸಿನಿಮಾ ಮತ್ತು ಧಾರಾವಾಹಿಗಳಿಗೆ ಅನಿಮೇಷನ್ ತಂತ್ರಜ್ಞಾನದ ನೆರವನ್ನು ಈ ಕಂಪನಿ ನೀಡಿದೆ.


‘ಇದು ಉತ್ತರ ಕರ್ನಾಟಕದ ಮೊದಲ ಅನಿಮೇಷನ್ ಪ್ರೊಡಕ್ಷನ್ ಸ್ಟುಡಿಯೊ. ಜೆರ್ಸಿ, ನಾನಿ ಸಿನಿಮಾಗಳಿಗೆ ನಾವೇ ಅನಿಮೇಷನ್ ತಂತ್ರಜ್ಞಾನ ನೆರವು ಒದಗಿಸಿದ್ದೇವೆ. ಈಗ ಸೋಮಾರಿ ರಾಮು, ನಾಟ್ಯ ಮಯೂರಿ, ಉಡಾಳ ಬಸ್ಯಾ ಧಾರವಾಹಿಗಳನ್ನು ನಿರ್ಮಿಸುತ್ತಿದೆ. ಇವುಗಳನ್ನು ಯೂಟ್ಯೂಬ್ ಮತ್ತು ಚಾನಲ್‌ಗಳ ಮೂಲಕ ಪ್ರದರ್ಶಿಸಲು ಉದ್ದೇಶಿಸಲಾಗಿದೆ’ ಎಂದು ಚೈತ್ರಾ ವಿವರಿಸಿದರು.

ತೆಂಗಿನ ಗರಿಗಳಲ್ಲಿ ಅರಳಿದ ಪೆನ್, ಸ್ಟ್ರಾ

ತೆಂಗಿನ ಒಣ ಗರಿಗಳನ್ನು ಬಳಸಿ ವಿಶಿಷ್ಟ ತಂತ್ರಜ್ಞಾನದ ಮೂಲಕ ತಯಾರಿಸಿದ ಪೆನ್ ಮತ್ತು ಸ್ಟ್ರಾಗಳು ಈಗ ಜನಪ್ರಿಯಗೊಳ್ಳುತ್ತಿವೆ. ಗ್ರಾಮೀಣ ಪ್ರದೇಶದ ಮಹಿಳೆಯರನ್ನೇ ಈ ಉದ್ಯಮದಲ್ಲಿ ತೊಡಗಿಸಿಕೊಳ್ಳಲಾಗಿದೆ.

‘ಸನ್‌ಬರ್ಡ್ ಸ್ಟ್ರಿಬ್ಬಲ್ಸ್’ ಈ ವಸ್ತುಗಳ ಉತ್ಪಾದನೆಯಲ್ಲಿ ತೊಡಗಿದೆ. 2018ರಿಂದ ಮೈಸೂರಿನಲ್ಲಿ ಘಟಕವನ್ನು ಆರಂಭಿಸಿದೆ. ತಮಿಳುನಾಡು, ಆಂಧ್ರಪ್ರದೇಶದಲ್ಲೂ ಈ ಕಂಪನಿಯ ಘಟಕಗಳಿವೆ. ಇಟಲಿ ಸೇರಿದಂತೆ ಹಲವು ದೇಶಗಳಿಗೆ ಈ ಉತ್ಪನ್ನಗಳನ್ನು ರಫ್ತು ಮಾಡಲಾಗುತ್ತಿದೆ.

‘ಲೋಕಲ್ ಬ್ರ್ಯಾಂಡ್ ಗ್ಲೋಬಲ್ ಆಗಬೇಕು ಎನ್ನುವುದು ನಮ್ಮ ಉದ್ದೇಶ. ಒಣಗರಿಗಳನ್ನು ಸಂಸ್ಕರಿಸಿ ಪೆನ್ ಮತ್ತು ಸ್ಟ್ರಾಗಳನ್ನು ತಯಾರಿಸಲಾಗುತ್ತಿದೆ. ಸಜೀವ್ ವರ್ಗೀಸ್ ಈ ತಂತ್ರಜ್ಞಾನ ಅಭಿವೃದ್ಧಿಪಡಿಸಿ ಕಂಪನಿ ಸ್ಥಾಪಿಸಿದ್ದಾರೆ. ಸ್ವಸಹಾಯ ಸಂಘದ ಮಹಿಳೆಯರು ಈ ಉದ್ಯೋಗದಲ್ಲಿ ತೊಡಗಿದ್ದಾರೆ. ಮೈಸೂರಿನ ಘಟಕಕ್ಕೆ ನಬಾರ್ಡ್ ನೆರವು ನೀಡಿದೆ’ ಎಂದು ಕಂಪನಿಯ ಸಹ ಸಂಸ್ಥಾಪಕ ಸಂದೀಪ್ ತಿಳಿಸಿದ್ದಾರೆ. ‘ಹೊಸದುರ್ಗ, ತುಮಕೂರು, ಅರಸಿಕೆರೆ ಸೇರಿ ಹಲವೆಡೆ ಘಟಕಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ರೈತರಿಗೂ ಆದಾಯ ಪಡೆಯಲು ಇದರಿಂದ ಅನುಕೂಲಗಳಾಗುತ್ತಿವೆ’ ಎಂದರು.



ಒಣ ತೆಂಗಿನ ಗರಿಗಳಿಂದ ತಯಾರಿಸಿ ಪೆನ್ ಮತ್ತು ಸ್ಟ್ರಾಗಳು.

ಆಕರ್ಷಣೆಯ ಸಂಚಾರಿ ತಾರಾಲಯ

ಗ್ರಾಮೀಣ ಪ್ರದೇಶದ ಮಕ್ಕಳಿಗೆ ಗ್ರಹಗಳು, ನಕ್ಷತ್ರಗಳ ಲೋಕವನ್ನು ಪರಿಚಯಿಸುವ ಉದ್ದೇಶದಿಂದ ಶೈಕ್ಷಣಿಕ ನವೋದ್ಯಮ ‘ತಾರೆ ಜಮೀನ ಪರ್’ ಸಂಸ್ಥೆ ರೂಪಿಸಿರುವ ಸಂಚಾರಿ ತಾರಾಲಯಕ್ಕೆ ಉತ್ತಮ ಪ್ರತಿಕ್ರಿಯೆ ದೊರೆತಿದೆ.

ಸಂಚಾರಿ ತಾರಾಲಯದ ಮೂಲಕ ಪ್ರತಿ ದಿನ ಸುಮಾರು 5000 ಮಕ್ಕಳು ಪ್ರಯೋಜನ ಪಡೆಯುತ್ತಿದ್ದಾರೆ. ಐದು ವರ್ಷಗಳಿಂದ ಸಂಚಾರಿ ತಾರಾಲಯಗಳು ಲಡಾಕ್‌ನಿಂದ ಕನ್ಯಾಕುಮಾರಿಯವರೆಗೆ ಸಂಚರಿಸಿವೆ. ಕರ್ನಾಟಕದಲ್ಲಿ ಕಲ್ಯಾಣ ಕರ್ನಾಟಕದಲ್ಲಿ ಸದ್ಯ ಏಳು ವಾಹನಗಳು ಹಾಗೂ ಉಳಿದೆಡೆ ನಾಲ್ಕು ವಾಹನಗಳನ್ನು ನಿಯೋಜಿಸಲಾಗಿದೆ ಎಂದು ಸಂಸ್ಥೆಯ ಸಿಇಒ ದಿನೇಶ್ ವಿವರಿಸಿದರು.

ಟೆಕ್ ಸಮ್ಮಿಟ್‌ನ ಇನ್ನಷ್ಟು ಸುದ್ದಿಗಳು 9

ಸುದ್ದಿ 2 ನಿಮಿಷ

ಕಲಾಕೃತಿಗಳ ಮಾರಿ ₹ 1.3 ಲಕ್ಷ ಸಂಗ್ರಹಿಸಿದ ಬಾಲಕಿ

ಬೆಂಗಳೂರು: ನಗರದ 9 ವರ್ಷದ ಬಾಲಕಿಯೊಬ್ಬಳು ತಾನು ರಚಿಸಿದ ಕಲಾಕೃತಿಗಳನ್ನು ಮಾರಾಟ ಮಾಡುವ ಮೂಲಕ ಬಡ ಮಕ್ಕಳಿಗೆ ನೆರವಾಗಿದ್ದಾಳೆ.

ಜೆ.ಪಿ.ನಗರದ ಕ್ಯಾಪಿಟಲ್ ಪಬ್ಲಿಕ್ ಸ್ಕೂಲ್‌ನಲ್ಲಿ ವ್ಯಾಸಂಗ ಮಾಡುತ್ತಿರುವ 5ನೇ ತರಗತಿ ಬಾಲಕಿ ಶ್ರುತಿ, ಪೇಟಿಂಗ್‌ಗಳ ಮಾರಾಟದಿಂದ ಸುಮಾರು ₹ 1.30 ಲಕ್ಷ ಹಣ ಸಂಗ್ರಹಿಸಿದ್ದಾರೆ. ಕೋವಿಡ್ ಕಾಣಿಸಿಕೊಂಡ ಬಳಿಕ ಮನೆಯಲ್ಲಿ ಇದ್ದ ಅವಳು, ಬಿಡುವಿನ ಅವಧಿಯಲ್ಲಿ ವಿವಿಧ ಮಾದರಿಯ ಕಲಾಕೃತಿ ರಚಿಸಿದ್ದಳು. 2021ರಲ್ಲಿ ಸರ್ಕಾರೇತರ ಸಂಸ್ಥೆಯೊಂದರ ನೆರವಿನಿಂದ ಕಲಾಕೃತಿಗಳನ್ನು ಮಾರಾಟ ಮಾಡಿದ ಅವಳು, ₹ 30 ಸಾವಿರ ಸಂಗ್ರಹಿಸಿದ್ದಳು. ಈ ಹಣವನ್ನು ಬಡ ಮಕ್ಕಳಿಗೆ ನೆರವಾಗುತ್ತಿರುವ ಆಶ್ರಮವೊಂದಕ್ಕೆ ನೀಡಿದ್ದಾಳೆ.

ರೋಟರಿ ಸಂಸ್ಥೆಯು ಅವಳ ಕಲಾಕೃತಿಗಳ ಪ್ರದರ್ಶನಕ್ಕೆ ವೇದಿಕೆ ಕಲ್ಪಿಸಿತ್ತು. 150ಕ್ಕೂ ಅಧಿಕ ಕಲಾಕೃತಿಗಳು ಪ್ರದರ್ಶನ ಕಂಡಿದ್ದವು. ಈ ವೇಳೆ ಮಾರಾಟವಾದ ಕಲಾಕೃತಿಗಳಿಂದ ₹ 1 ಲಕ್ಷ ಸಂಗ್ರಹವಾಗಿದೆ. ಅಂತರರಾಷ್ಟ್ರೀಯ ಮಕ್ಕಳ ದಿನಾಚರಣೆ ಪ್ರಯುಕ್ತ ನ.14ರಂದು ಈ ಹಣವನ್ನು ಕ್ಯಾನ್ಸರ್‌ಪೀಡಿತ ಮಕ್ಕಳ ಚಿಕಿತ್ಸೆಗಾಗಿ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಗೆ ಒದಗಿಸಲಾಗಿದೆ ಎಂದು ಆರ್ಟ್ ಫಾರ್ ಏಡ್ ಸಂಸ್ಥೆ ತಿಳಿಸಿದೆ.



ಶಾಂತರಾಜು ಬಿಡಿಎ ಕಾರ್ಯದರ್ಶಿ

ಬೆಂಗಳೂರು: ಕೆಎಎಸ್ ಅಧಿಕಾರಿ ವೈ.ಬಿ.ಶಾಂತರಾಜು ಅವರನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಕಾರ್ಯದರ್ಶಿ ಹುದ್ದೆಗೆ ಸರ್ಕಾರ ವರ್ಗಾಯಿಸಿದೆ.

ಮೊದಲು ಕಾರ್ಯದರ್ಶಿಯಾಗಿದ್ದ ಸಿ.ಎಲ್.ಆನಂದ್ ಅವರ ವಿರುದ್ಧ ಬದಲಿ ನಿವೇಶನ ಹಂಚಿಕೆ ಅಕ್ರಮದಲ್ಲಿ ಭಾಗಿಯಾಗಿದ್ದಾರೆ ಎಂಬ ಆರೋಪ ಕೇಳಿ ಬಂದಿತ್ತು. ಅವರನ್ನು ವರ್ಗಾವಣೆ ಮಾಡುವಂತೆ ಸುಪ್ರೀಂ ಕೋರ್ಟ್ ಸೂಚಿಸಿತ್ತು. ಶಾಂತರಾಜು ಅವರು ಪ್ರಾಧಿಕಾರದಲ್ಲೇ ಎಸ್ಟೇಟ್ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದರು. ನೂತನ ಎಸ್ಟೇಟ್ ಅಧಿಕಾರಿಯಾಗಿ ಹಿರಿಯ ಶ್ರೇಣಿ ಕೆಎಎಸ್ ಅಧಿಕಾರಿ ಆರ್.ಯಶೋಧರಾ ಅವರನ್ನು ನೇಮಿಸಲಾಗಿದೆ.

ನಗರದಲ್ಲಿ ಇಂದು

ರಸ್ತೆ ಅಪಘಾತ ತಡೆ ದಿನಾಚರಣೆ ಸಮಾರಂಭ: ನಡಿಗೆ ಉದ್ಘಾಟನೆ: ಸಂಯುಕ್ತಾ ಹೊರನಾಡು, ಉದ್ಘಾಟನೆ: ಕೆ. ಶ್ರೀನಿವಾಸ್, ಸಂಗಪ್ಪ, ಅಧ್ಯಕ್ಷತೆ: ಮುಲ್ಲೈ ಮುಹಿಲನ್, ಎಂ.ಎ.ಸಲೀಂ, ಗೋಪಾಲ್ ಹೊಸೂರ್, ಆಯೋಜನೆ: ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಸ್ಥಳ: ಕಂಠೀರವ ಕ್ರೀಡಾಂಗಣ

ವಾರ್ಷಿಕೋತ್ಸವ: ಗಣಪತಿ ಹೋಮ, ಲಕ್ಷ್ಮೀ ಹೋಮ, ನವಗ್ರಹ ಹೋಮ, ರಾಜಗಣಪತಿ ವಿಶೇಷ ಅಲಂಕಾರ, ಮಹಾ ದೀಪಾರಾಧನೆ, ಮಧ್ಯಾಹ್ನ 12.30ಕ್ಕೆ

ಅನ್ನದಾನ, ಆಯೋಜನೆ: ರಾಜಗಣಪತಿ ಭಕ್ತ ಸೇವಾ ಮಂಡಲಿ, ಕೆ.ಪಿ. ಅಗ್ರಹಾರ, ಬೆಳಿಗ್ಗೆ 9

ಬೆಂಗಳೂರು ನಗರ ಪೊಲೀಸ್ ವಾರ್ಷಿಕ ಕ್ರೀಡಾಕೂಟ: ಉದ್ಘಾಟನೆ: ರಾಘವೇಂದ್ರ ಔರಾದ್ಕರ್, ಆಯೋಜನೆ: ಪೊಲೀಸ್ ಇಲಾಖೆ, ಸ್ಥಳ: ಕವಾಯತು ಮೈದಾನ, ಸಿ.ಎ.ಆರ್ ಆಡುಗೋಡಿ, ಬೆಳಿಗ್ಗೆ 9

ಸುಸ್ಥಿರ ಅಭಿವೃದ್ಧಿಯೇ ಭವಿಷ್ಯ– ವಿಚಾರ ಸಂಕಿರಣ: ಅತಿಥಿಗಳು: ಶಾಲಿನಿ ರಜನೀಶ್, ಎಸ್. ಸೆಲ್ವಕುಮಾರ್, ಮಿಲಿ ಮಜುಂದಾರ್, ವಿಜಯ್ ಕೆ.ಸನಪ್, ಆಯೋಜನೆ: ಅಸೋಸಿಯೇಷನ್ ಆಫ್ ಕನ್‌ಸಲ್ಟಿಂಗ್ ಸಿವಿಲ್ ಎಂಜಿನಿಯರ್ಸ್, ಸ್ಥಳ: ನಿಮ್ಹಾನ್ಸ್ ಕನ್ವೆನ್ಷನ್ ಸೆಂಟರ್, ಬೆಳಿಗ್ಗೆ 9.30

ಬರ್ತ್ ರೈಟ್ ಮಹಡಿ ಉದ್ಘಾಟನೆ: ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಆಯೋಜನೆ ಮತ್ತು ಸ್ಥಳ: ರೈನ್ ಬೋ ಮಕ್ಕಳ ಆಸ್ಪತ್ರೆ, ಮಾರತ್ತಹಳ್ಳಿ, ಬೆಳಿಗ್ಗೆ 10



ಯದುವೀರ್

ಕನ್ನಡ ರಾಜ್ಯೋತ್ಸವ ಆಚರಣೆ: ಅತಿಥಿಗಳು: ಪ್ರೇಮ್ ಕುಮಾರ್, ಸಪ್ತಮಿ ಗೌಡ, ಸಾಧು ಕೋಕಿಲ, ಪ್ರಜ್ವಲ್ ದೇವರಾಜ್, ನಿಮಿಕಾ ರತ್ನಾಕರ್, ಲೇಖಾ ಚಂದ್ರ, ಸಿದ್ದು ಮೂಲಿಮನೆ, ಮೇಘಾ ಶೆಟ್ಟಿ, ರಚನಾ ಇಂದರ್, ಅಧ್ಯಕ್ಷತೆ: ಗಾಳಿಸ್ವಾಮಿ, ಸಿ.ಪಿ.ಎಸ್. ಪ್ರಕಾಶ್, ಆಯೋಜನೆ ಮತ್ತು ಸ್ಥಳ: ದಯಾನಂದ ಸಾಗರ್ ಕಾಲೇಜ್ ಆಫ್ ಎಂಜಿನಿಯರಿಂಗ್, ಶಾವಿಗೆ ಮಲ್ಲೇಶ್ವರ ಹಿಲ್ಸ್, ಕುಮಾರಸ್ವಾಮಿ ಲೇಔಟ್, ಬೆಳಿಗ್ಗೆ 10

ಮಾನಸಾ ಪ್ರಿಯಾ ಅವರ ಏಕವ್ಯಕ್ತಿ ಚಿತ್ರಗಳ ಪ್ರದರ್ಶನ: ಉದ್ಘಾಟನೆ: ಎಚ್.ಎನ್. ನಾಗಮೋಹನದಾಸ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಬೆಳಿಗ್ಗೆ 10

ನಾಡು–ನುಡಿ ಗೀತ ಗಾಯನ: ಉದ್ಘಾಟನೆ: ಅ. ದೇವೇಗೌಡ, ಅಧ್ಯಕ್ಷತೆ: ಕೆ. ಬಿ. ಲೋಕೇಶ್, ಅತಿಥಿಗಳು: ನೀಲಮ್ಮ, ಬಾನಂದೂರು ಕೆಂಪಯ್ಯ, ವ.ಚ. ಚನ್ನೇಗೌಡ, ರೇಣುಕಾ ಪ್ರಸನ್ನ, ಆಯೋಜನೆ: ರಂಗ ಸಂಸ್ಥಾನ, ಸ್ಥಳ: ಹೊಂಬೇಗೌಡ ಪದವಿ ಪೂರ್ವ ಕಾಲೇಜು, ಗಾಯಿತ್ರಿನಗರ, ಬೆಳಿಗ್ಗೆ 10.30

ಎಸ್. ಶಿವಮಲ್ಲು ಅವರ ಪ್ರಜಾಪ್ರಭುತ್ವದ ಬಲವರ್ಧನೆ ಪುಸ್ತಕ ಬಿಡುಗಡೆ: ಸಿದ್ದರಾಮಯ್ಯ, ಅತಿಥಿಗಳು: ಕೆ.ಆರ್. ರಮೇಶ್ ಕುಮಾರ್, ಪ್ರಿಯಾಂಕ್ ಖರ್ಗೆ, ಮೋಟಮ್ಮ, ಸಿ.ಎಸ್. ದ್ವಾರಕಾನಾಥ್, ಅಧ್ಯಕ್ಷತೆ: ಎಸ್. ಮರಿಸ್ವಾಮಿ, ಅತಿಥಿಗಳು: ಎ.ಆರ್. ಕೃಷ್ಣಮೂರ್ತಿ, ಬಿ.ಎನ್. ಉಮೇಶ್, ಎಂ. ಮಹದೇವ, ಸ್ಥಳ: ಜೆ.ಪಿ. ಸಭಾಂಗಣ, ಡಾ.ಬಿ.ಆರ್. ಅಂಬೇಡ್ಕರ್ ತಾಂತ್ರಿಕ ಮಹಾವಿದ್ಯಾಲಯ, ಬೆಳಿಗ್ಗೆ 11

ದಾಸರ ಪದಗಳ ಗಾಯನ: ಪ್ರಸ್ತುತಿ: ಸುಮಲತಾ ಮಂಜುನಾಥ್, ಕೀ–ಬೋರ್ಡ್: ಅಮಿತ್ ಶರ್ಮಾ, ತಬಲಾ: ನಾಗರಾಜ್, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಜಯನಗರ, 5ನೇ ಬಡಾವಣೆ, ಸಂಜೆ 7.30

ಅಂತರರಾಷ್ಟ್ರೀಯ ಸಮ್ಮೇಳನ: ವಿಷಯ: ಕೋವಿಡ್–19 ಮತ್ತು ನಗರಗಳು: ಕೋವಿಡ್–19 ಮತ್ತು ನಗರಗಳು: ಅಲ್ಪಾವಧಿಗೆ ಅಥವಾ ಶಾಶ್ವತವಾಗಿಯೇ ನಮ್ಮ ನಗರಗಳನ್ನು ಬದಲಾಯಿಸಿದೆಯೇ?, ಅತಿಥಿಗಳು: ಡಿ. ರಾಜಶೇಖರ್, ಕಲಾ ಶ್ರೀಧರ್, ಜಾನ್ ಬ್ರೂಕ್ನರ್, ಆಯೋಜನೆ ಮತ್ತು ಸ್ಥಳ: ಇನ್‌ಸ್ಟಿಟ್ಯೂಟ್ ಆಫ್ ಸೋಶಿಯಲ್ ಆ್ಯಂಡ್ ಎಕನಾಮಿಕ್ ಚೇಂಜ್, ಬೆಳಿಗ್ಗೆ 11

‘ರಮಣಶ್ರೀ ಶರಣ ಪ್ರಶಸ್ತಿ’ ಪ್ರದಾನ–2022, ಎಸ್.ಷಡಕ್ಷರಿ ಅವರ ‘ಕ್ಷಣ ಹೊತ್ತು ಆಣಿಮುತ್ತು ಭಾಗ 10 ಮತ್ತು 11’ ಪುಸ್ತಕಗಳ ಬಿಡುಗಡೆ: ಪ್ರಶಸ್ತಿ ಪ್ರದಾನ: ಬಸವರಾಜ ಬೊಮ್ಮಾಯಿ, ಪುಸ್ತಕ ಬಿಡುಗಡೆ: ವಿ. ಸೋಮಣ್ಣ, ಉಪಸ್ಥಿತಿ: ಗೊ.ರು. ಚನ್ನಬಸಪ್ಪ, ಮನು ಬಳಿಗಾರ್, ಸಿ. ಸೋಮಶೇಖರ್, ವಿಶ್ವೇಶ್ವರ ಭಟ್, ರವಿ ಹೆಗಡೆ, ಆಯೋಜನೆ: ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಸ್ಥಳ: ಹೋಟೆಲ್ ರಮಣಶ್ರೀ ರಿಚ್ಮಂಡ್, ರಿಚ್ಮಂಡ್ ಸರ್ಕಲ್, ಬೆಳಿಗ್ಗೆ 11.30

ನೃತ್ಯ ವೈವಿಧ್ಯ: ವಾಸಗಿ ಎಸ್.ಎಸ್., ಯಶಸ್ವಿನಿ, ಆಯೋಜನೆ ಮತ್ತು ಸ್ಥಳ: ಸಚಿವಾಲಯ ಕ್ಲಬ್, ಕಬ್ಬನ್ ಉದ್ಯಾನ, ಮಧ್ಯಾಹ್ನ 1.35

ಸುವರ್ಣ ಮಹೋತ್ಸವದ ವಿಶೇಷ ಉಪನ್ಯಾಸ ಮಾಲೆ–4: ವಿಷಯ: ಸ್ವಾತಂತ್ರ್ಯೋತ್ತರ ಕನ್ನಡ ವಿಮರ್ಶೆಯ ಆಯಾಮಗಳು: ಉಪನ್ಯಾಸಕರು: ಎಸ್. ಆರ್. ವಿಜಯಶಂಕರ, ಆಯೋಜನೆ ಮತ್ತು ಸ್ಥಳ: ಕನ್ನಡ ಸಂಘ, ಕ್ರೈಸ್ಟ್ ಡೀಮ್ಡ್ ಟು ಬಿ ಯೂನಿವರ್ಸಿಟಿ, ಹೊಸೂರು ರಸ್ತೆ, ಮಧ್ಯಾಹ್ನ 3.30

ಶಾಂತಕವಿಗಳ ‘ವಿಶ್ರಾಂತಿ’ ನಾಟಕ ಪ್ರದರ್ಶನ: ಅತಿಥಿಗಳು: ಜಿ.ಅಶ್ವತ್ಥನಾರಾಯಣ, ಬಿ.ವಿ. ರಾಜಾರಾಂ, ಭೀಮಸೇನ ಆರ್., ಮಹಾಂತೇಶ ಬೀಳಗಿ, ಈಶ್ವರ ಮಿರ್ಜಿ, ನಿರ್ದೇಶನ: ಪ್ರಕಾಶ್ ಗರುಡ, ಸಂಗೀತ: ರಾಘವ ಕಮ್ಮಾರ, ಪ್ರಸ್ತುತಿ: ಗೊಂಬೆಮನೆ ಧಾರವಾಡ, ಆಯೋಜನೆ: ಸಕ್ಕರಿ ಬಾಳಾಚಾರ್ಯ ಶಾಂತಕವಿ ಟ್ರಸ್ಟ್, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಸಂಜೆ 6.30

ಕನ್ನಡ ತಾಯಿ ಭುವನೇಶ್ವರಿಯ ಪುತ್ಥಳಿ ಅನಾವರಣ: ಸಾನ್ನಿಧ್ಯ: ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಪುತ್ಥಳಿ ಅನಾವರಣ: ಬಸವರಾಜ ಬೊಮ್ಮಾಯಿ, ಅತಿಥಿಗಳು: ಶಿವರಾಜ್ ವಿ. ಪಾಟೀಲ್, ವಿ. ಸುನಿಲ್ ಕುಮಾರ್, ಶಿವರಾಮ್ ಹೆಬ್ಬಾರ್, ಬಿ.ಝಡ್. ಜಮೀರ್ ಅಹ್ಮದ್ ಖಾನ್, ಎಂ.ಜಿ. ಹಿರೇಮಠ, ಸಂಧ್ಯಾ ಎಸ್.ಪೈ., ಆಲ್ಮತ್ ಕಿಟ್ಟೆಲ್, ಅಧ್ಯಕ್ಷತೆ: ಮಹೇಶ ಜೋಶಿ, ಆಯೋಜನೆ: ಕನ್ನಡ ಸಾಹಿತ್ಯ ಪರಿಷತ್ತು, ಸ್ಥಳ: ಕಸಾಪ ಆವರಣ, ಚಾಮರಾಜಪೇಟೆ, ಸಂಜೆ 6.30

ಬಿ.ಎ. ಮೊಹಿದ್ದೀನ್ ಸ್ಮಾರಕ ದತ್ತಿ ಉಪನ್ಯಾಸ ಮತ್ತು ಸಂವಾದ: ವಿಷಯ: ರಾಜ್ಯ ರಾಜಕಾರಣದಲ್ಲಿ ಮುಸ್ಲಿಮರು: ನಿನ್ನೆ–ಇಂದು–ನಾಳೆ, ಅಧ್ಯಕ್ಷತೆ: ಕೆ. ಆರ್. ರಮೇಶ್ ಕುಮಾರ್, ಉಪನ್ಯಾಸ: ಮುಜಾಫರ್ ಅಸ್ಸಾದಿ, ಪ್ರತಿಕ್ರಿಯೆ: ಬಿ.ಎಲ್. ಶಂಕರ್, ಅತ್ತರುಲ್ಲಾ ಶರೀಫ್, ಬಿ.ಎಂ. ಹನೀಫ್, ಉಪಸ್ಥಿತಿ: ಎ.ಕೆ. ಮುಶ್ತಾಕ್, ಆಯೋಜನೆ: ಪರಸ್ಪರ, ಸೆಂಟರ್ ಫಾರ್ ಸೆಕ್ಯುಲರ್ ಡೆಮಾಕ್ರಸಿ, ಸ್ಥಳ: ಸಾಲಾರ್ ಆಡಿಟೋರಿಯಂ, ‘ಡೈಲಿ ಸಾಲಾರ್’ ಬಿಲ್ಡಿಂಗ್, ಮೋದಿ ಮಸೀದಿ ಹತ್ತಿರ, ಚಿಕ್ಕ ಬಜಾರ್ ರಸ್ತೆ, ಟಸ್ಕರ್ ಟೌನ್, ಶಿವಾಜಿನಗರ, ಬೆಂಗಳೂರು ಸಂಜೆ 6.30

ನಾಳೆಯಿಂದ ಕರಕುಶಲ ವಸ್ತುಗಳ ಪ್ರದರ್ಶನ

ಬೆಂಗಳೂರು: ಟಿಲೋನಿಯಾದ ಬೇರ್‌ಫೂಟ್ ಕಾಲೇಜು ತನ್ನ ಸುವರ್ಣ ಮಹೋತ್ಸವದ ಪ್ರಯುಕ್ತ ಇದೇ 18ರಿಂದ 20ರವರೆಗೆ ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರದಲ್ಲಿ (ಬಿಐಸಿ) ಕರಕುಶಲ ವಸ್ತುಗಳ ಪ್ರದರ್ಶನ ಮತ್ತು ಮಾರಾಟ ಹಮ್ಮಿಕೊಂಡಿದೆ.

3 ದಿನಗಳ ಈ ಪ್ರದರ್ಶನವು ಬೆಳಿಗ್ಗೆ 11ರಿಂದ ರಾತ್ರಿ 8 ಗಂಟೆಯವರೆಗೆ ನಡೆಯಲಿದೆ. ಕುಶಲಕರ್ಮಿಗಳೊಂದಿಗೆ ಸಂವಹನ ನಡೆಸಲೂ ಇಲ್ಲಿ ಅವಕಾಶ ಇರಲಿದೆ. ಗೃಹೋಪಯೋಗಿ ವಸ್ತುಗಳು, ಕೈಮಗ್ಗ ವಸ್ತುಗಳು, ಬೊಂಬೆಗಳು, ವಿವಿಧ ಬಗೆಯ ಬ್ಯಾಗ್‌ಗಳು, ಮರದ ವಸ್ತುಗಳು ಸೇರಿ ಹಲವು ವೈವಿಧ್ಯಗಳು ಇರಲಿವೆ.


ವಿಚಾರಸಂಕಿರಣ, ಬೊಂಬೆಯಾಟ ಪ್ರದರ್ಶನ, ಛಾಯಾಚಿತ್ರಗಳ ಪ್ರದರ್ಶನಗಳೂ ಇರಲಿವೆ. 18ರಂದು ಸಂಜೆ 6 ಗಂಟೆಗೆ ‘ಉತ್ತಮ ಪ್ರಪಂಚಕ್ಕಾಗಿ ಕಾರ್ಯನಿರ್ವಹಣೆ’ ಎಂಬ ಶೀರ್ಷಿಕೆಯಡಿ ಸಂವಾದ ನಡೆಯಲಿದ್ದು, 20ರಂದು ಸಂಜೆ 6 ಗಂಟೆಗೆ ‘ಕರಕುಶಲದಲ್ಲಿ ರಾಜಕೀಯ’ ಎಂಬ ವಿಷಯದ ಮೇಲೆ ಸಂವಾದ ನಡೆಯಲಿದೆ. ಲೈಲಾ ತ್ಯಾಬ್ಜಿ, ಉರ್ಮಿಮ್ಮ ಹಾಗೂ ಅರುಣ್ ರಾಯ್ ಪಾಲ್ಗೊಳ್ಳಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ನಾಗೇಶ್ ಹೆಗಡೆ ಸೇರಿ ಎಂಟು ಮಂದಿಗೆ ‘ಸಂಸ್ಕೃತಿ ಸಿರಿ’ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಾ. ವೇಮಗಲ್ ನಾರಾಯಣಸ್ವಾಮಿ ಸಾಂಸ್ಕೃತಿಕ ಪ್ರತಿಷ್ಠಾನ ನೀಡುವ ‘ಸಂಸ್ಕೃತಿ ಸಿರಿ’ ಪ್ರಶಸ್ತಿಗೆ ವಿಜ್ಞಾನ ಲೇಖಕ ಹಾಗೂ ಪತ್ರಕರ್ತ ನಾಗೇಶ್ ಹೆಗಡೆ ಅವರು ಸೇರಿ ಎಂಟು ಮಂದಿ ಆಯ್ಕೆ ಆಗಿದ್ದಾರೆ.

ಚಲನಚಿತ್ರ ಗಾಯಕಿ ಕಸ್ತೂರಿ ಶಂಕರ್, ಕನ್ನಡಪರ ಹೋರಾಟಗಾರ ರಾಮಣ್ಣ ಕೋಡಿಹೊಸಹಳ್ಳಿ, ಕವಿ ಕೋಟಗಾನಹಳ್ಳಿ ರಾಮಯ್ಯ, ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನದ ಸಮ ಕಾರ್ಯದರ್ಶಿ ಕಡಿದಾಳ್ ಪ್ರಕಾಶ್, ಕಾಡುಮಲ್ಲೇಶ್ವರ ಗೆಳೆಯರ ಬಳಗದ ಸಂಸ್ಥಾಪನಾಧ್ಯಕ್ಷ ಬಿ.ಕೆ. ಶಿವರಾಂ, ವಾಗ್ಮಿ ಸುಧಾ ಬರಗೂರು ಹಾಗೂ ನೃತ್ಯ ಗುರು ಸುಪರ್ಣ ವೆಂಕಟೇಶ್ ಅವರು ‘ಸಂಸ್ಕೃತಿ ಸಿರಿ’ ಪ್ರಶಸ್ತಿಗೆ ಆಯ್ಕೆ ಆಗಿದ್ದಾರೆ.



ನಾಗೇಶ್ ಹೆಗಡೆ



ಕಸ್ತೂರಿ ಶಂಕರ್

ಪ್ರಶಸ್ತಿಯು ₹ 25 ಸಾವಿರ ನಗದು ಹಾಗೂ ಫಲಕವನ್ನು ಒಳಗೊಂಡಿದೆ. ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಇದೇ 20ರಂದು ಬೆಳಿಗ್ಗೆ 11.30ಕ್ಕೆ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ. ಉಪಲೋಕಾಯುಕ್ತ ಕೆ.ಎನ್. ಫಣೀಂದ್ರ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ನಿವೃತ್ತ ಐಎಎಸ್ ಅಧಿಕಾರಿ ಐ.ಎಂ. ವಿಠ್ಠಲಮೂರ್ತಿ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ ಎಂದು ಪ್ರತಿಷ್ಠಾನದ ಗೌರವ ಅಧ್ಯಕ್ಷ ಹಿ.ಚಿ. ಬೋರಲಿಂಗಯ್ಯ ತಿಳಿಸಿದ್ದಾರೆ.

ರಮಾಕುಮಾರಿ, ಬಾರ್ತಲೋಮಿಯೋಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಗೆಳೆಯರ ಬಳಗ ನೀಡುವ ‘ಕನ್ನಡ ಅರವಿಂದ ಪ್ರಶಸ್ತಿ’ಗೆ ಲೇಖಕಿ ಬಾ.ಹ. ರಮಾಕುಮಾರಿ ಹಾಗೂ ‘ಕನ್ನಡ ಚಿರಂಜೀವಿ ಪ್ರಶಸ್ತಿ’ಗೆ ಕನ್ನಡ ಪರ ಹೋರಾಟಗಾರ ಫಾ. ಬಾರ್ತಲೋಮಿಯೋ ಆಯ್ಕೆಯಾಗಿದ್ದಾರೆ.

ಡಿ.7ರಂದು ಶೇಷಾದ್ರಿಪುರ ಕಾಲೇಜಿನ ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ. ಇದೇ ವೇಳೆ ಕನ್ನಡ ಮಾಧ್ಯಮದಲ್ಲಿ ಓದಿ, ಅಧಿಕ ಅಂಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಗುವುದು. ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ. ಕೃಷ್ಣ ಅವರು ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದಾರೆ. ರಾಜ್ಯಸಭೆ ಸದಸ್ಯ ಎಲ್. ಹನುಮಂತಯ್ಯ ಹಾಗೂ ಜಾನಪದ ವಿದ್ವಾಂಸ ಗೊ.ರು. ಚನ್ನಬಸಪ್ಪ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಬಳಗದ ಸಂಚಾಲಕ ರಾ.ನಂ. ಚಂದ್ರಶೇಖರ ತಿಳಿಸಿದ್ದಾರೆ.

ಹೂದೋಟ...ಸಮಸ್ಯೆಗಳ ಇನ್ನಷ್ಟು ನೋಟ

ಸಸ್ಯಕಾಶಿಯಲ್ಲಿ ಸಮಸ್ಯೆಗಳ ರಾಶಿ ಇರುವುದಕ್ಕೆ ಜನರಿಂದ ಬಂದಿರುವ ಪ್ರತಿಕ್ರಿಯೆಗಳೇ ಸಾಕ್ಷಿ. ತೋಟಗಾರಿಕೆ ಸಚಿವ ಮುನಿರತ್ನ ಅವರು ಅಲ್ಲಿ 'ಜನಸ್ಪಂದನ' ನಡೆಸಬೇಕೆಂಬ ವಿನಂತಿಗೆ ಒಪ್ಪಿಗೆ ನೀಡಲಿಲ್ಲ. ಇದರಿಂದ ಜನರಿಗೆ ಅಹವಾಲು ಹೇಳಿಕೊಂಡು, ಅಲ್ಲಿಯೇ ಪರಿಹಾರ ಪಡೆಯುವ ಅವಕಾಶವೊಂದನ್ನು ತಪ್ಪಿಸಿದಂತೆ ಆಗಿದೆ. 'ಪ್ರಜಾವಾಣಿ' ಅಂತಹ ಜನದನಿಗೆ ಈ ಮೂಲಕ ವೇದಿಕೆ ಒದಗಿಸಿದೆ.

ಅನುದಾನವಿಲ್ಲದೆ ಸೊರಗುತ್ತಿದೆ ಲಾಲ್‌ಬಾಗ್

ಬೆಂಗಳೂರು: 'ಸಿಲಿಕಾನ್ ಸಿಟಿ'ಯ ಪ್ರೇಮಿಗಳ ನೆಚ್ಚಿನ ತಾಣ, ವಾಯುವಿಹಾರಿಗಳ ಸ್ವರ್ಗ ಲಾಲ್‌ಬಾಗ್‌ನಲ್ಲಿ ಸಾಲು ಸಾಲು ಸಮಸ್ಯೆಗಳಿದ್ದು, ಅನುದಾನದ ಮತ್ತು ಸಿಬ್ಬಂದಿಯ ಕೊರತೆಯೇ ಇದಕ್ಕೆ ಕಾರಣ ಎಂದು ವಾಯುವಿಹಾರಿಗಳೇ ತಿಳಿಸಿದ್ದಾರೆ.

'ಸರ್ಕಾರದ ಅನುದಾನದ ಕೊರತೆ ಮತ್ತು ತೋಟಗಾರಿಕೆ ಇಲಾಖೆ ಸಚಿವ ಮುನಿರತ್ನ ಅವರ ನಿರ್ಲಕ್ಷ್ಯದಿಂದ ಸಸ್ಯತೋಟ ಸೊರಗುತ್ತಿದೆ. ರಸ್ತೆ, ಪಾದಚಾರಿ ಮಾರ್ಗ, ದಾಸವಾಳ ವನದಲ್ಲಿ ಕೊಳಚೆ ನೀರು ತುಂಬಿಕೊಂಡಿದೆ' ಎಂದು ಸಿದ್ಧಾಪುರದ ನಿವಾಸಿ ಸುಬ್ರಹ್ಮಣ್ಯಸ್ವಾಮಿ ಆರೋಪಿಸಿದರು.

'240 ಎಕರೆ ಹರಡಿಕೊಂಡಿರುವ ಸಸ್ಯಕಾಶಿಯಲ್ಲಿ ಸತತ ಮಳೆಯಿಂದ ಅವ್ಯವಸ್ಥೆ ಸೃಷ್ಟಿಯಾಗಿದೆ. ಸರ್ಕಾರ ಅನುದಾನ ಬಿಡುಗಡೆಗೊಳಿಸಿ ಇದರ ಅಭಿವೃದ್ಧಿಗೆ ಸೂಕ್ತ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದರು.

'ಸತತವಾಗಿ ಸುರಿದ ಮಳೆಯಿಂದ ಲಾಲ್‌ಬಾಗ್‌ನ ಮೂಲಸೌಕರ್ಯಗಳ ಅಭಿವೃದ್ಧಿ ಕಾಮಗಾರಿಗಳು ಕುಂಟುತ್ತಾ ಸಾಗಿವೆ. ಅಧಿಕಾರಿಗಳು ಪರಿಶೀಲಿಸಿ ನಿರ್ವಹಣಾ ಕಾಮಗಾರಿ ಕೈಗೊಂಡಿದ್ದಾರೆ. ಲಾಲ್‌ಬಾಗ್ ಹಿಂದಿಗಿಂತಲೂ ಈಗ ಸ್ವಚ್ಛ, ಸುಂದರವಾಗಿ ಕಾಣುತ್ತಿದೆ' ಎಂದು ಸಿದ್ದಾಪುರದ ನಿವಾಸಿ ಸುರೇಶ್ ಎಸ್.ಎಂ. ಅಭಿಪ್ರಾಯ ವ್ಯಕ್ತಪಡಿಸಿದರು.

'ಲಾಲ್‌ಬಾಗ್ ಸಸ್ಯಕಾಶಿಯನ್ನು ನವದೆಹಲಿಯ ನೆಹರೂ ಪಾರ್ಕ್ ರೀತಿಯಲ್ಲಿ ಅಭಿವೃದ್ಧಿ ಮಾಡಬೇಕು. ಉದ್ಯಾನದಲ್ಲಿ ದೂಳು ಮತ್ತು ನೀರು ನಿರೋಧಕ ಸಿಂಥೆಟಿಕ್ ವಾಕಿಂಗ್ ಟ್ರ್ಯಾಕ್ ನಿರ್ಮಿಸಬೇಕು. ಇದರ ನಿರ್ವಹಣೆಯೂ ಸುಲಭವಾಗಿದೆ' ಎಂದು ಲಾಲ್‌ಬಾಗ್ ಹಾಪ್‌ಕಾಮ್ಸ್ ಅಧ್ಯಕ್ಷ ಎಂ ಬಾಬು ಸಲಹೆ ನೀಡಿದರು.




ನಗರದ ಲಾಲ್ ಬಾಗ್ ಆವರಣದಲ್ಲಿ ಸಮಸ್ಯೆಗಳನ್ನೊಳಗೊಂಡ ಸ್ಥಳದ ಒಂದು ನೋಟ ಪ್ರಜಾವಾಣಿ ಚಿತ್ರ/ ರಂಜು ಪಿ





ಲಾಲ್‌ಬಾಗ್ ಉದ್ಯಾನದಲ್ಲಿ ಮಳೆ ಬಂದರೆ ಸಮಸ್ಯೆಯಾಗುತ್ತದೆ. ಪಾದಚಾರಿ ಮಾರ್ಗಗಳಲ್ಲಿ ನೀರು ತುಂಬಿ ಕೆಸರು ಗದ್ದೆಯಾಗುತ್ತದೆ. ಪ್ಲಾಸ್ಟಿಕ್ ನಿಷೇಧಿಸಿ ಸ್ವಚ್ಛತೆಗೆ ಆದ್ಯತೆ ನೀಡಬೇಕು. ಮಕ್ಕಳಿಗೆ ಆಟವಾಡಲು ಉದ್ಯಾನವನ್ನು ನಿರ್ಮಿಸಬೇಕು.

ಮಧು ಬಸವೇಗೌಡ, ಬಿಟಿಎಂ ಬಡಾವಣೆ



ಲಾಲ್‌ಬಾಗ್ ಉದ್ಯಾನದ ಪಶ್ಚಿಮ ದ್ವಾರದ ಮೂಲಕ ಸಿದ್ಧಾಪುರಕ್ಕೆ ಸಂಪರ್ಕ ಕಲ್ಪಿಸುವ ಮಾರ್ಗದಲ್ಲಿ ಹುಲ್ಲು ಎತ್ತರಕ್ಕೆ ಮತ್ತು ದಟ್ಟವಾಗಿ ಬೆಳೆದಿದೆ. ಹಾಗೆಯೇ ರಸ್ತೆಯು ಮಳೆ ಬಂದಾಗ ಕೆಸರುಮಯವಾಗುತ್ತಿದ್ದು, ವೃದ್ಧರು ಮತ್ತು ಮಕ್ಕಳಿಗೆ ಓಡಾಡುವುದಕ್ಕೆ ಕಷ್ಟವಾಗುತ್ತದೆ. ರಾಷ್ಟ್ರೀಯ ವಿದ್ಯಾಲಯದವರೆಗೂ ದೀಪದ ವ್ಯವಸ್ಥೆಯು ಇಲ್ಲ.

ಸ್ವಾತಿ, ಸಿದ್ದೇಗೌಡ ರಸ್ತೆ, ದೊಡ್ಡ ಮಾವಳ್ಳಿ




ಲಾಲ್‌ಬಾಗ್ ಉದ್ಯಾನ ನೋಡಲು ಹೊಸಪೇಟೆಯಿಂದ ಬಂದಿದ್ದೇವೆ. ಆದರೆ ಉದ್ಯಾನದಲ್ಲಿ ಬಹಳ ಸಮಸ್ಯೆಗಳಿದ್ದು, ಇಲ್ಲಿರುವ ಗಿಡ-ಮರಗಳಿಗೆ ಹೆಸರುಗಳಿಲ್ಲ, ಸರಿಯಾದ ಮಾಹಿತಿ ಫಲಕಗಳಿಲ್ಲ. ಸಮರ್ಪಕ ನಿರ್ವಹಣೆಯಿಲ್ಲದೆ ಅಲ್ಲಲ್ಲಿ ತುಂಡಾಗಿ ಬಿದ್ದಿರುವ ವಿದ್ಯುತ್ ಕೇಬಲ್, ಪ್ಲಾಸ್ಟಿಕ್ ಬಾಟಲಿಗಳನ್ನು ತೆರವುಗೊಳಿಸಿ ಸ್ವಚ್ಛತೆ ಕಾಪಾಡಬೇಕು.

ಹೊನ್ನೂರ ಸ್ವಾಮಿ ಕಾರಿಗನೂರು, ಕಾನೂನು ವಿದ್ಯಾರ್ಥಿ, ಹೊಸೂರು ರಸ್ತೆ



ಲಾಲ್‌ಬಾಗ್‌ನಲ್ಲಿರುವ ಗುಲಾಬಿ ತೋಟ ಮಾದರಿಯಾಗಬೇಕಾಗಿತ್ತು. ನಿರ್ವಹಣೆಯ ಕೊರತೆಯಿಂದಾಗಿ ನಟವಾಣಿ (ಬೇಲಿ ಗಿಡ) ಬೆಳದ ಹಾಗೆ ಕಾಣುತ್ತಿದೆ. ಇದನ್ನು ಸರಿಪಡಿಸಿ ಉದ್ಯಾನದ ಸೌಂದರ್ಯವನ್ನು ಹೆಚ್ಚಿಸಬೇಕು.

ಜಿ.ಆರ್. ಕೇಶವರಾಜ್



ಲಾಲ್‌ಬಾಗ್‌ನಲ್ಲಿ ಮೊಬೈಲ್‌ನಲ್ಲಿ ಜೋರಾಗಿ ಸಂಗೀತ ಹಾಕುವುದನ್ನು ನಿಷೇಧಿಸಬೇಕು. ಸಂಗೀತ ಕೇಳಬೇಕಿದ್ದರೆ ಹೆಡ್‌ಫೋನ್ ಧರಿಸಿಯೇ ಕೇಳುವಂತೆ ಆದೇಶ ಹೊರಡಿಸಬೇಕು. ಇದರಿಂದ ಇನ್ನೊಬ್ಬರಿಗೆ ತೊಂದರೆಯಾಗುವುದು ತಪ್ಪುತ್ತದೆ. ಉದ್ಯಾನದಲ್ಲಿ ಒಂದೇ ಜಾಗೃತಿ ಫಲಕವನ್ನು ಅಳವಡಿಸಲಾಗಿದೆ. ವಾಯುವಿಹಾರಕ್ಕೆ ನೀಡಿರುವ ಸಮಯವನ್ನು ಹೆಚ್ಚಿಸಬೇಕು.

ಪ್ರಕಾಶ ಹೆಬ್ಬಳ್ಳಿ, ಕೃಷ್ಣಾ ರಾವ್ ಸಿಂಧ್ಯಾ ಬೀದಿ, ವಿ.ವಿ.ಪುರ, ಬಸವನಗುಡಿ,

ಲಾಲ್‌ಬಾಗ್‌ನಲ್ಲಿ ನಾಯಿಗಳ ಸಂಖ್ಯೆ ಹೆಚ್ಚಾಗಿದ್ದು, ಅವುಗಳನ್ನು ನಿಯಂತ್ರಿಸಲು ಸೂಕ್ತ ಕ್ರಮ ಕೈಗೊಳ್ಳಬೇಕು. ಉದ್ಯಾನದ ನಿರ್ವಹಣೆಗೆ ಹೆಚ್ಚಿನ ಸಿಬ್ಬಂದಿ ನೇಮಕ ಮಾಡಿಕೊಳ್ಳಬೇಕು. ಕ್ರೀಡಾ ಪರಿಕರಗಳನ್ನು ಉದ್ಯಾನದೊಳಗೆ ತರದಂತೆ ನಿಯಂತ್ರಿಸಬೇಕು. ಪ್ರಾಣಿ-ಪಕ್ಷಿಗಳಿಗೆ ಆಹಾರ ನೀಡುವುದನ್ನು ನಿಷೇಧಿಸಬೇಕು.

ಎನ್. ಅಮರೇಶ್, ವಿಶ್ವೇಶ್ವರ ಪುರಂ

ಲಾಲ್‌ಬಾಗ್‌ನಲ್ಲಿರುವ ಶೌಚಾಲಯಗಳಲ್ಲಿ ಸ್ವಚ್ಛತೆಗೆ ಆದ್ಯತೆ ನೀಡಬೇಕು. ಉದ್ಯಾನದಲ್ಲಿ ಪ್ಲಾಸ್ಟಿಕ್ ನಿಷೇಧ ಇರುವುದರಿಂದ ಇನ್ನಷ್ಟು ಕಡೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು.

ಅಮೃತ, ವಾಯುವಿಹಾರಿ

ಸಸ್ಯಕಾಶಿಯಲ್ಲಿನ ಒಳಿತುಗಳು...

ಲಾಲ್‌ಬಾಗ್ ಸಸ್ಯತೋಟದಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪಿಸಲಾಗಿದ್ದು, ಸಾರ್ವಜನಿಕರಿಗೆ ಹಾಗೂ ವಾಯುವಿಹಾರಿಗಳಿಗೆ ತುಂಬಾ ಅನುಕೂಲವಾಗಿದೆ.

ಕಲಾವತಿ, ಜಯನಗರ

ಕಳೆದ ಕೆಲ ತಿಂಗಳಿಂದ ಸತತವಾಗಿ ಸುರಿಯುತ್ತಿರುವ ಮಳೆಯಿಂದ ಉದ್ಯಾನದ ರಸ್ತೆಗಳು ಹಾಳಾಗಿದ್ದು, ಅಧಿಕಾರಿಗಳು ನಿರ್ವಹಣೆ ಕಾರ್ಯ ಕೈಗೊಂಡಿದ್ದಾರೆ. ಎಲ್ಲೆಡೆ ಶುದ್ಧ ಕುಡಿಯುವ ನೀರಿನ ಸೌಲಭ್ಯವಿದೆ. ಶೌಚಾಲಯಗಳನ್ನು ಸ್ವಚ್ಛವಾಗಿದ್ದು, ಬೀದಿ ದೀಪಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿವೆ.

ಗಾಯತ್ರಿ ಯು, ಸಿದ್ಧಾಪುರ ನಿವಾಸಿ.

ಈಜಿಪುರ ವಸತಿ ಸಮುಚ್ಚಯ ಕಾಮಗಾರಿ: ಸರ್ಕಾರಕ್ಕೆ ನೋಟಿಸ್

ಪ್ರಜಾವಾಣಿ ವಾರ್ತೆ

ಹೈಕೋರ್ಟ್ ಸುದ್ದಿ

ಬೆಂಗಳೂರು: 'ಕೋರಮಂಗಲದ ಈಜಿಪುರ ವ್ಯಾಪ್ತಿಯಲ್ಲಿ, ಆರ್ಥಿಕವಾಗಿ ದುರ್ಬಲರಾದ ವರ್ಗಗಳ ಜನರಿಗೆ ನೀಡಲು ಉದ್ದೇಶಿಸಿದ ವಸತಿ ಸಮುಚ್ಚಯ (ಅಪಾರ್ಟ್‌ಮೆಂಟ್) ನಿರ್ಮಾಣದಲ್ಲಿ ವಿಳಂಬ ಮಾಡಲಾಗುತ್ತಿದೆ' ಎಂದು ಆಕ್ಷೇಪಿಸಿದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಕುರಿತಂತೆ, 'ಕರ್ನಾಟಕ ಈಜಿಪುರ ನಿವಾಸಿಗಳ ಸಾಮಾಜಿಕ ಕಲ್ಯಾಣ ಸಂಘ' ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, 'ಈಜಿಪುರದಲ್ಲಿ ಆರ್ಥಿಕವಾಗಿ ಹಿಂದುಳಿದವರಿಗೆ 1,512 ಮನೆಗಳ ನಿರ್ಮಾಣಕ್ಕೆ ಉದ್ದೇಶಿಸಲಾಗಿದೆ. ಈ ಸಮುಚ್ಚಯ ನಿರ್ಮಾಣದ ಕಾಮಗಾರಿಯನ್ನು ಹೈಕೋರ್ಟ್ ಆದೇಶದಂತೆ ಆರಂಭಿಸಲಾಗಿದ್ದರೂ ಈವರೆಗೂ ಪೂರ್ಣಗೊಳಿಸಿಲ್ಲ. ಹಾಗಾಗಿ, ತ್ವರಿತಗತಿಯಲ್ಲಿ ಕಾಮಗಾರಿ ಪೂರ್ಣಗೊಳಿಸಲು ನಿರ್ದೇಶಿಸಬೇಕು. ಕಾಮಗಾರಿ ಪೂರ್ಣಗೊಳಿಸುವರೆಗೆ ವಸತಿ ಹಕ್ಕುದಾರರಿಗೆ ಮಾಸಿಕ ಬಾಡಿಗೆ ಹಣ ನೀಡಲು ಆದೇಶಿಸಬೇಕು' ಎಂದು ಕೋರಿದರು.

ದಾಖಲೆಗಳನ್ನು ಪರಿಶೀಲಿಸಿದ ನ್ಯಾಯಪೀಠ, 'ಕಾಮಗಾರಿ ವಿಳಂಬವಾಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿದೆ. ಮನೆಗಳಿಗಾಗಿ ನಿವಾಸಿಗಳು ಇನ್ನೂ ಎಷ್ಟು ವರ್ಷ ಕಾಯಬೇಕು' ಎಂದು ಖಾರವಾಗಿ ಪ್ರಶ್ನಿಸಿತಲ್ಲದೆ, 'ಅರ್ಜಿಗೆ ಸಂಬಂಧಿಸಿದಂತೆ ಆಕ್ಷೇಪಣೆ ಸಲ್ಲಿಸಿ' ಎಂದು ಪ್ರತಿವಾದಿಗಳಾದ ರಾಜ್ಯ ಸರ್ಕಾರದ ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ), ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ (ಬಿಡಿಎ) ಮತ್ತು ಗುತ್ತಿಗೆದಾರ ಕಂಪನಿ ಮೇವರಿಕ್ ಹೋಲ್ಡಿಂಗ್ಸ್ ಪ್ರೈವೇಟ್ ಲಿಮಿಟೆಡ್‌ಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು. ವಿಚಾರಣೆಯನ್ನು ಡಿಸೆಂಬರ್ 7ಕ್ಕೆ ಮುಂದೂಡಲಾಗಿದೆ.

ಓಲಾ, ಉಬರ್ ದರ ಹೆಚ್ಚಳ: ವಿಚಾರಣೆ ಮುಂದೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆ್ಯಪ್ ಮೂಲಕ ನೀಡಲಾಗುತ್ತಿರುವ ಆಟೊರಿಕ್ಷಾ ಸೇವೆಯ ದರ ಹೆಚ್ಚಳಕ್ಕೆ ಅನುಮತಿ ಕೋರಿ ಓಲಾ ಮತ್ತು ಉಬರ್ ಕಂಪನಿಗಳು ಸಲ್ಲಿಸಿರುವ ಮಧ್ಯಂತರ ಅರ್ಜಿಗೆ ಆಕ್ಷೇಪಣೆ ಸಲ್ಲಿಸುವ ಸಂಬಂಧ ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ಇದೇ 21ರವರೆಗೆ ಕಾಲಾವಕಾಶ ನೀಡಿದೆ.

'ಆ್ಯಪ್ ಆಧಾರಿತ ಓಲಾ ಮತ್ತು ಉಬರ್ ಆಟೊರಿಕ್ಷಾ ಸೇವೆ ಸ್ಥಗಿತಗೊಳಿಸಲು ರಾಜ್ಯ ಸರ್ಕಾರ ಹೊರಡಿಸಿರುವ ಆದೇಶ ರದ್ದುಪಡಿಸಬೇಕು' ಎಂದು ಕೋರಿ ಎಎನ್‌ಐ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್, ಉಬರ್ ಇಂಡಿಯಾ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಮತ್ತು ರೊಪ್ಪೆನ್ ಟ್ರಾನ್ಸ್‌ಪೋರ್ಟೇಶನ್ ಸರ್ವೀಸಸ್ ಸಲ್ಲಿಸಿದ್ದ ಪ್ರತ್ಯೇಕ ಅರ್ಜಿಗಳನ್ನು ನ್ಯಾಯಮೂರ್ತಿ ಸಿ.ಎಂ.ಪೂಣಚ್ಚ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ಇದೇ ವೇಳೆ, 'ಅರ್ಜಿದಾರ ಕಂಪನಿಗಳು ಆಟೊರಿಕ್ಷಾ ಸೇವೆಗೆ ದರ ನಿಗದಿಪಡಿಸಿ ಸರ್ಕಾರ 2021ರ ನವೆಂಬರ್ 6ರಂದು ಹೊರಡಿಸಿರುವ ಆದೇಶದಲ್ಲಿ ಸೂಚಿಸಿರುವ ದರದ ಜೊತೆಗೆ ಶೇ10ರಷ್ಟು ಹೆಚ್ಚುವರಿ ಹಣ ಮತ್ತು ಸೇವಾ ತೆರಿಗೆಯನ್ನು ಪಡೆಯಬೇಕು. ದರ ನಿಗದಿಪಡಿಸುವವರೆಗೆ ಅಗ್ರಿಗೇಟರ್ ಕಂಪನಿಗಳ ವಿರುದ್ಧ ಸರ್ಕಾರ ಬಲವಂತದ ಕ್ರಮ ಜರುಗಿಸಬಾರದು. ಆಟೊರಿಕ್ಷಾ ಸೇವೆ ಒದಗಿಸಲು ಪರವಾನಗಿ ಕೋರಿ ಅರ್ಜಿ ಸಲ್ಲಿಸಿದರೆ, ಅದನ್ನು ಕಾನೂನು ಪ್ರಕಾರ ಪರಿಗಣಿಸಬೇಕು' ಎಂದು ನಿರ್ದೇಶಿಸಿ ಈ ಹಿಂದೆ ಹೊರಡಿಸಿದ್ದ ಮಧ್ಯಂತರ ಆದೇಶವನ್ನು ಮುಂದಿನ ವಿಚಾರಣೆವರೆಗೂ ವಿಸ್ತರಿಸಿತು.

ಚುನಾವಣೆಗೆ ಸ್ಪರ್ಧೆ: ಟ್ರಂಪ್ ಘೋಷಣೆ

ವಾಷಿಂಗ್ಟನ್ (ಪಿಟಿಐ): 2024ರಲ್ಲಿ ನಡೆಯುವ ಅಮೆರಿಕದ ಅಧ್ಯಕ್ಷೀಯ ಚುನಾವಣೆಯಲ್ಲಿ ಸ್ಪರ್ಧಿಸುವುದಾಗಿ ಡೊನಾಲ್ಡ್ ಟ್ರಂಪ್ ಘೋಷಿಸಿದ್ದಾರೆ.

ಫ್ಲಾರಿಡಾದಲ್ಲಿನ ತಮ್ಮ ರೆಸಾರ್ಟ್‌ನಲ್ಲಿ ಈ ಕುರಿತು ಘೋಷಣೆ ಮಾಡಿದ ಅವರು, 'ಮುಂದಿನ ವರ್ಷ ನಡೆಯುವ ಚುನಾವಣೆಯಲ್ಲಿ ಬೈಡನ್ ಮತ್ತೆ ಗೆದ್ದು ಬರುವುದಿಲ್ಲ ಎಂದು ದೃಢವಾಗಿ ಹೇಳುತ್ತೇನೆ' ಎಂದರು.



ಮೈಸೂರು ರಸ್ತೆಯ ನಾಯಂಡನಹಳ್ಳಿ ಮೇಲ್ಸೇತುವೆ ಮೇಲೆ ಬುಧವಾರ ನಸುಕಿನಲ್ಲಿ ಮಂಜು ಮುಸುಕಿದ ಹೊತ್ತು –ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್.ಜಿ.

ಇಂದಿನಿಂದ ಅಯ್ಯಪ್ಪನ ದರ್ಶನ

ಪಥನಂತಿಟ್ಟ (ಕೇರಳ) (ಪಿಟಿಐ): ವಾರ್ಷಿಕ ಮಂಡಲಂ– ಮಕರವಿಲಕ್ಕು ಆರಂಭಕ್ಕೂ ಮುನ್ನಾ ದಿನವಾದ ಬುಧವಾರ ಸಂಜೆ ಶಬರಿಮಲೆ ಅಯ್ಯಪ್ಪ ದೇವಾಲಯದ ಬಾಗಿಲು ತೆರೆಯಲಾಗಿದ್ದು, ಈ ವರ್ಷ ಭಕ್ತರ ಸಂಖ್ಯೆಯಲ್ಲಿ ಶೇ 40–50ರಷ್ಟು ಹೆಚ್ಚಾಗುವ ನಿರೀಕ್ಷೆ ಇದೆ. ಈ ವರ್ಷ ಯಾವುದೇ ಕೋವಿಡ್ ನಿರ್ಬಂಧ ಇರುವುದಿಲ್ಲ.

41 ದಿನಗಳ ವಾರ್ಷಿಕ ಮಂಡಲ ಪೂಜೆ ಗುರುವಾರ ಆರಂಭವಾಗಲಿದ್ದು, ಡಿ.27ರಂದು ಮುಕ್ತಾಯಗೊಳ್ಳಲಿದೆ.

ನಿಧನ ವಾರ್ತೆ

ಬಿಸ್ವಾರೂಪ್ ಬ್ಯಾನರ್ಜಿ



ಬೆಂಗಳೂರು: ನಿವೃತ್ತ ಮೇಜರ್ ಜನರಲ್ ಬಿಸ್ವಾರೂಪ್ ಬ್ಯಾನರ್ಜಿ (85) ಅವರು ಬುಧವಾರ ನಗರದಲ್ಲಿ ನಿಧನರಾದರು.

ಇವರು 57 ಎಂಜಿನಿಯರ್ ರೆಜಿಮೆಂಟ್‌ನಲ್ಲಿ 4ನೇ ಕಮಾಂಡಿಂಗ್ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದರು. ವಿಶಿಷ್ಟ ಸೇವಾ ಪದಕ ಪಡೆದಿದ್ದ ಬಿಸ್ವಾರೂಪ್ ಅವರು, 1965 ಮತ್ತು 1971ರ ಯುದ್ಧಗಳಲ್ಲಿ ಭಾಗವಹಿಸಿದ್ದರು.

ಇವರಿಗೆ ಒಬ್ಬ ಪುತ್ರ, ಪುತ್ರಿ ಇದ್ದಾರೆ. ಪುತ್ರ ರಾಣಾ ಬ್ಯಾನರ್ಜಿ ಅವರು ಸಹ ಸೇನೆಯಲ್ಲಿ ಅಧಿಕಾರಿಯಾಗಿದ್ದಾರೆ.

ಸಂಕ್ಷಿಪ್ತ ಸುದ್ದಿ

ಬಿಡಿಎ, ಬಿಬಿಎಂಪಿ, ಜಲಮಂಡಳಿಗೆ ಬೆಸ್ಕಾಂ ನೋಟಿಸ್

ಬೆಂಗಳೂರು: ಕೋಟ್ಯಂತರ ರೂಪಾಯಿ ವಿದ್ಯುತ್ ಶುಲ್ಕ ಬಾಕಿ ಇರಿಸಿಕೊಂಡಿರುವ ಜಲಮಂಡಳಿ, ಬಿಬಿಎಂಪಿ, ತೋಟಗಾರಿಕೆ ಇಲಾಖೆ, ಬಿಡಿಎ, ನಗರಸಭೆ ಮತ್ತು ಗ್ರಾಮಪಂಚಾಯಿತಿಗಳಿಗೆ ಬೆಸ್ಕಾಂನ ಹೆಬ್ಬಾಳ ಮತ್ತು ಜಾಲಹಳ್ಳಿ ವಿಭಾಗಗಳ ಕಾರ್ಯನಿರ್ವಾಹಕ ಎಂಜಿನಿಯರ್‌ಗಳು ಪ್ರತ್ಯೇಕ ನೋಟಿಸ್ ಜಾರಿಗೊಳಿಸಿದ್ದಾರೆ.

ಬೆಸ್ಕಾಂನ ಹೆಬ್ಬಾಳ ವಿಭಾಗದ ವ್ಯಾಪ್ತಿಗೆ ಬರುವ ಉಪ ವಿಭಾಗಗಳಾದ ಗಂಗಾನಗರ, ಕಾವಲಭೈರಸಂದ್ರ, ಯಲಹಂಕ ಮತ್ತು ಸಹಕಾರನಗರ ಉಪ ವಿಭಾಗಗಳಿಗೆ ಜಲಮಂಡಳಿ, ಬಿಡಿಎ, ಬಿಬಿಎಂಪಿ, ತೋಟಗಾರಿಕೆ ಇಲಾಖೆ ಮತ್ತು ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುವ ನೀರು ಸರಬರಾಜು ಮತ್ತು ಬೀದಿ ದೀಪ ಸ್ಥಾವರಗಳ ವಿದ್ಯುತ್ ಬಾಕಿ ಸೆಪ್ಟೆಂಬರ್ ಅಂತ್ಯಕ್ಕೆ ₹131.18 ಕೋಟಿ ಆಗಿದ್ದು, ಶೀಘ್ರ ಬಾಕಿ ಪಾವತಿಸುವಂತೆ ಹೆಬ್ಬಾಳ ಕಾರ್ಯನಿರ್ವಾಹಕ ಎಂಜಿನಿಯರ್ ನೋಟಿಸ್ ಜಾರಿಗೊಳಿಸಿದ್ದಾರೆ.

ನಾಲ್ಕೂ ಉಪ ವಿಭಾಗಗಳಿಗೆ ವಿದ್ಯುತ್ ಶುಲ್ಕ ಬಾಕಿ ಇರಿಸಿಕೊಂಡಿರುವ ಸರ್ಕಾರಿ ಸಂಸ್ಥೆಗಳ ಪೈಕಿ ಜಲಮಂಡಳಿ ಅತಿ ಹೆಚ್ಚು ₹65.09 ಕೋಟಿ ಬಾಕಿ ಇರಿಸಿಕೊಂಡಿದ್ದು, ಬಿಬಿಎಂಪಿ ನೀರು ಸರಬರಾಜು ವಿಭಾಗ ₹54.53 ಕೋಟಿ ವಿದ್ಯುತ್ ಶುಲ್ಕ ಪಾವತಿಸಬೇಕಾಗಿದೆ.

ಜಾಲಹಳ್ಳಿ ವಿಭಾಗ: ಹಾಗೆಯೇ ಬೆಸ್ಕಾಂನ ಜಾಲಹಳ್ಳಿ ವಿಭಾಗ ವ್ಯಾಪ್ತಿಯ ಉಪ ವಿಭಾಗಗಳಾದ ಜಾಲಹಳ್ಳಿ (ಸಿ 3),ವಿದ್ಯಾರಣ್ಯಪುರ (ಸಿ-9), ಮತ್ತು ಸೋಲದೇವನಹಳ್ಳಿ (ಎನ್ -9) ಉಪ ವಿಭಾಗಗಳಿಗೆ ಜಲಮಂಡಳಿ, ಬಿಡಿಎ, ಬಿಬಿಎಂಪಿ, ತೋಟಗಾರಿಕೆ ಇಲಾಖೆ, ನಗರ ಸಭೆ ಮತ್ತು ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುವ ನೀರು ಸರಬರಾಜು ಮತ್ತು ಬೀದಿ ದ್ವೀಪ ಸ್ಥಾವರಗಳ ವಿದ್ಯುತ್ ಬಾಕಿ ಅಕ್ಟೋಬರ್ ಅಂತ್ಯಕ್ಕೆ ₹99.20 ಕೋಟಿ ಪಾವತಿಸಲು ಕೋರಿ ಜಾಲಹಳ್ಳಿ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ನವೆಂಬರ್ 16ರಂದು ನೋಟಿಸ್ ಜಾರಿಗೊಳಿಸಿದ್ದಾರೆ.

ವಿದ್ಯುತ್ ಬಾಕಿಯನ್ನು ಏಳು ದಿನಗಳ ಒಳಗೆ ಬೆಸ್ಕಾಂಗೆ ಪಾವತಿಸಲು ಸೂಚಿಸಲಾಗಿದೆ. ತಪ್ಪಿದಲ್ಲಿ ವಿದ್ಯುತ್ ಸಂಪರ್ಕ ಕಡಿತಗೊಳಿಸಲಾಗುವುದು ಎಂದು ಎಚ್ಚರಿಸಲಾಗಿದೆ.

ಗ್ರಂಥಾಲಯ ಕರಕ್ಕೆ ಬಿಬಿಎಂಪಿಗೆ ಸೂಚನೆ

ಬೆಂಗಳೂರು: ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ಪಾವತಿಸಬೇಕಿರುವ ಗ್ರಂಥಾಲಯ ಕರವನ್ನು ಮುಂದಿನ ನಾಲ್ಕು ವರ್ಷಗಳಲ್ಲಿ ಪಾವತಿ ಮಾಡಬೇಕೆಂದು ಬಿಬಿಎಂಪಿಗೆ ಸರ್ಕಾರ ಆದೇಶಿಸಿದೆ.

ಬಿಬಿಎಂಪಿ 2013–14ನೇ ಸಾಲಿನಿಂದ ಗ್ರಂಥಾಲಯ ಕರವನ್ನು ಬಾಕಿ ಉಳಿಸಿಕೊಂಡಿದೆ. 2021–22ನೇ ಸಾಲಿಗೆ ಈ ಮೊತ್ತ ₹397.37 ಕೋಟಿಯಾಗಿದೆ. ಇದನ್ನು ಕಾಲಮಿತಿಯಲ್ಲಿ ಪಾವತಿಸಬೇಕು. ಇದಕ್ಕಾಗಿ ರಾಷ್ಟ್ರೀಯ ಬ್ಯಾಂಕ್‌ನಲ್ಲಿ ಎಸ್ಕ್ರೋ ಖಾತೆಯನ್ನು ತೆಗೆದು ಗ್ರಂಥಾಲಯ ಖಾತೆಗೆ ವರ್ಗಾಯಿಸಬೇಕು ಎಂದು ಸೂಚಿಸಿದೆ.

2013–14ರಿಂದ 2021–22ನೇ ಸಾಲಿನವರೆಗೆ ಬಾಕಿರುವ ಇರುವ ಮೊತ್ತವನ್ನು 2022–23ನೇ ಸಾಲಿನಿಂದ 2025–26ನೇ ಸಾಲಿನ ಆರ್ಥಿಕ ವರ್ಷಗಳಲ್ಲಿ ವಾರ್ಷಿಕವಾಗಿ ಶೆ 25ರಂತೆ ಬಿಬಿಎಂಪಿ ಪಾವತಿಸಬೇಕು ಎಂದು ಆದೇಶದಲ್ಲಿ ವಿವರಿಸಲಾಗಿದೆ.

'108' ಸಿಬ್ಬಂದಿಗೆ ವೇತನ ಪಾವತಿ

ಬೆಂಗಳೂರು: ಸರ್ಕಾರದ '108-ಆರೋಗ್ಯ ಕವಚ' ಯೋಜನೆ ನಿರ್ವಹಿಸುತ್ತಿರುವ ಜಿವಿಕೆ–ಇಎಂಆರ್‌ಐ ಸಂಸ್ಥೆಯು ಬಾಕಿ ಉಳಿಸಿಕೊಂಡಿದ್ದ ಎರಡು ತಿಂಗಳ ವೇತನವನ್ನು ಬುಧವಾರ ಪಾವತಿಸಿದೆ. ಇದರಿಂದಾಗಿ ಸೇವೆಗೆ ಗೈರಾಗುವ ನಿರ್ಧಾರದಿಂದ ಸಿಬ್ಬಂದಿ ಹಿಂದೆ ಸರಿದಿದ್ದಾರೆ.

ಸಿಬ್ಬಂದಿ ವೇತನ ಪಾವತಿಗೆ ಗಡುವು ನೀಡಿ, ಬಳಿಕ ಸೇವೆಗೆ ಗೈರಾಗುವುದಾಗಿ ಎಚ್ಚರಿಸಿದ್ದರು. 3 ದಿನದೊಳಗೆ ವೇತನ ಪಾವತಿಸದಿದ್ದಲ್ಲಿ ಸಂಸ್ಥೆಯನ್ನು ಕಪ್ಪು ಪಟ್ಟಿಗೆ ಸೇರಿಸುವುದಾಗಿ ಆರೋಗ್ಯ ಇಲಾಖೆ ಆಯುಕ್ತ ಡಿ. ರಂದೀಪ್ ತಿಳಿಸಿದ್ದರು.

'ಸಂಸ್ಥೆಯು ಬಾಕಿ ಉಳಿಸಿಕೊಂಡಿದ್ದ ವೇತನವನ್ನು ಎಲ್ಲ ಸಿಬ್ಬಂದಿಗೆ ಪಾವತಿ ಮಾಡಿದೆ. ಆದ್ದರಿಂದ ಸೇವೆಗೆ ಗೈರಾಗುವ ನಿರ್ಧಾರದಿಂದ ಹಿಂದೆ ಸರಿದಿದ್ದೇವೆ' ಎಂದು 108 ನೌಕರರ ಸಂಘದ ರಾಜ್ಯ ಉಪಾಧ್ಯಕ್ಷ ಎನ್.ಎಚ್. ಪರಮಶಿವ ತಿಳಿಸಿದರು.

ಕೇಂದ್ರ ಸರ್ಕಾರಕ್ಕೆ 'ಸುಪ್ರೀಂ' ತರಾಟೆ

ದಕ್ಷಿಣ ಪಿನಾಕಿನಿ ನದಿ ನೀರು ಬಳಕೆ ವಿವಾದ: 4 ವಾರದಲ್ಲಿ ವರದಿ ಸಲ್ಲಿಕೆಗೆ ಸೂಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಪೆನ್ನಾರ್ (ದಕ್ಷಿಣ ಪಿನಾಕಿನಿ) ನದಿ ನೀರು ಹಂಚಿಕೆಗೆ ಸಂಬಂಧಿಸಿದಂತೆ ಕರ್ನಾಟಕ ಹಾಗೂ ತಮಿಳುನಾಡು ನಡುವಿನ ವಿವಾದವನ್ನು ಮಾತುಕತೆ (ಸಂಧಾನ) ಮೂಲಕ ಬಗೆಹರಿಸಲು ವಿಳಂಬ ಮಾಡುತ್ತಿರುವ ಕೇಂದ್ರ ಸರ್ಕಾರವನ್ನು ಸುಪ್ರೀಂ ಕೋರ್ಟ್ ಬುಧವಾರ ತರಾಟೆಗೆ ತೆಗೆದುಕೊಂಡಿದೆ.

ದಕ್ಷಿಣ ಪಿನಾಕಿನಿ ನದಿಯ ಕಣಿವೆಯಲ್ಲಿ ಕರ್ನಾಟಕ ಸರ್ಕಾರವು ಮಾರ್ಕಂಡೇಯ ನದಿಗೆ ಅಡ್ಡಲಾಗಿ ಚೆಕ್ ಡ್ಯಾಂ (ಕೋಲಾರ, ಬಂಗಾರಪೇಟೆ, ಮಾಲೂರಿನ ಹಲವು ಹಳ್ಳಿಗಳಿಗೆ ಹಾಗೂ ಪಟ್ಟಣಗಳಿಗೆ ಕುಡಿಯುವ ನೀರು ಪೂರೈಸುವ ಯೋಜನೆ), ಎಲೆಮಲ್ಲಪ್ಪ ಚೆಟ್ಟಿ ಕೆರೆಯಿಂದ ಹೊಸಕೋಟೆಯವರೆಗೆ ನೀರು ಹರಿಸುವ ಕಾಮಗಾರಿ, ಬ್ಯಾಲಹಳ್ಳಿ ಗ್ರಾಮದ ಹತ್ತಿರ ಪೊನ್ನೆಯಾರ್ ನದಿಯಿಂದ ನೀರು ಹರಿಸುವ ಕಾಮಗಾರಿಗಳನ್ನು ನಡೆಸಿದೆ.

ಪೆನ್ನಾರ್ ನದಿಯ ನೀರು ಬಳಸಿಕೊಳ್ಳುವ ಕರ್ನಾಟಕದ ಯೋಜನೆಗೆ ತಮಿಳುನಾಡು ಸರ್ಕಾರ ವಿರೋಧ ವ್ಯಕ್ತಪಡಿಸಿ, ಕರ್ನಾಟಕ ಸರ್ಕಾರ ಹಾಗೂ ಕೇಂದ್ರ ಸರ್ಕಾರದ ವಿರುದ್ಧ ಸುಪ್ರೀಂ ಕೋರ್ಟ್‌ನಲ್ಲಿ 2018ರಲ್ಲಿ ದಾವೆ ಹೂಡಿತ್ತು.

'ನ್ಯಾಯಾಧೀಕರಣ ಅಗತ್ಯವಿಲ್ಲ'

'ಈ ದಾವೆಗೆ ಸಂಬಂಧಿಸಿದಂತೆ ಕರ್ನಾಟಕವು ತನ್ನ ಲಿಖಿತ ಆಕ್ಷೇಪಣೆಗಳ ಹೇಳಿಕೆ ದಾಖಲಿಸಿದೆ. ಇದಕ್ಕೆ ಪ್ರತ್ಯುತ್ತರವಾಗಿ ತಮಿಳುನಾಡು ರಾಜ್ಯವು ಸಲ್ಲಿಸಿದ ಪ್ರತಿ ಹೇಳಿಕೆಗೆ ಕರ್ನಾಟಕವು ಮರು ಪ್ರತ್ಯುತ್ತರ ಸಲ್ಲಿಸಿದೆ.

ಈಗಾಗಲೇ, ಸಂಧಾನ ಸಮಿತಿಯು ಎರಡು ಸಭೆಗಳನ್ನು (2020ರ ಫೆಬ್ರುವರಿ 24 ಹಾಗೂ 2020ರ ಜುಲೈ 7) ನಡೆಸಿದೆ. ಈ ಪ್ರಕರಣದಲ್ಲಿ ನ್ಯಾಯಾಧೀಕರಣ ರಚನೆಯ ಅವಶ್ಯಕತೆ ಇಲ್ಲವೆಂದು ಕರ್ನಾಟಕವು ಈಗಾಗಲೇ ತನ್ನ ನಿಲುವನ್ನು ಪ್ರತಿಪಾದಿಸಿದೆ. ಈ ನಿಲುವನ್ನೇ ರಾಜ್ಯವು ಮುಂದುವರೆಸುತ್ತದೆ' ಎಂದು ಜಲಸಂಪನ್ಮೂಲ ಸಚಿವ ಗೋವಿಂದ ಎಂ. ಕಾರಜೋಳ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಈ ಪ್ರಕರಣದ ವಿಚಾರಣೆಯನ್ನು ನ್ಯಾಯಮೂರ್ತಿ ಎಂ.ಆರ್. ಶಾ ಅವರನ್ನು ಒಳಗೊಂಡ ದ್ವಿಸದಸ್ಯ ಪೀಠ ಬುಧವಾರ ನಡೆಸಿತು.

ನದಿ ನೀರು ಹಂಚಿಕೆಗೆ ನ್ಯಾಯಾಧೀಕರಣ ಸ್ಥಾಪಿಸಬೇಕು ಎಂದು ತಮಿಳುನಾಡು ಸರ್ಕಾರವು 2019ರ ನ. 30ರಂದು ಮನವಿ ಮಾಡಿದೆ. ಈ ವಿವಾದವನ್ನು ಮಾತುಕತೆ ಮೂಲಕ ಇತ್ಯರ್ಥಪಡಿಸಲು ಸಂಧಾನ ಸಮಿತಿ ರಚಿಸಲಾಗಿದೆ. ನ್ಯಾಯಾಧೀಕರಣ ರಚಿಸಲು ಸಮಿತಿಯು ತಾತ್ವಿಕ ಅನುಮೋದನೆ ನೀಡಿದೆ ಎಂದು ಕೇಂದ್ರ ಸರ್ಕಾರ ಹೇಳಿತು.

ಅಂತರ್ ರಾಜ್ಯ ನದಿ ನೀರು ವಿವಾದ ಬಗೆಹರಿಸಲು ನ್ಯಾಯಾಧೀಕರಣ ಸ್ಥಾಪನೆ ಮಾಡಬೇಕು ಎಂದು ತಮಿಳುನಾಡು ಸರ್ಕಾರ ಮನವಿ ಮಾಡಿದೆ. ಈ ವಿಷಯದಲ್ಲಿ ಕೇಂದ್ರ ಸರ್ಕಾರ ತನ್ನ ನಿಲುವು ಸ್ಪಷ್ಟಪಡಿಸಬೇಕು. ಈ ಸಂಬಂಧ ನಾಲ್ಕು ವಾರಗಳಲ್ಲಿ ಸ್ಥಿತಿಗತಿಯ ವರದಿ ಸಲ್ಲಿಸಬೇಕು ಎಂದು ನ್ಯಾಯಪೀಠವು ಕೇಂದ್ರಕ್ಕೆ ನಿರ್ದೇಶನ ನೀಡಿತು.

ಈ ಜಲ ವಿವಾದದಲ್ಲಿ ಸಂಧಾನ ಪ್ರಕ್ರಿಯೆ ಎಷ್ಟು ಸಮಯ ಮುಂದುವರಿಯುತ್ತದೆ ಎಂದು ನ್ಯಾಯಪೀಠವು ಕೇಂದ್ರ ಸರ್ಕಾರವನ್ನು ಪ್ರಶ್ನಿಸಿತು. ಸಂಧಾನ ಸಮಿತಿಯು 2020ರ ಜುಲೈ 7ರಂದು ಸಭೆ ನಡೆಸಿದ ಬಳಿಕ ಯಾವುದೇ ಬೆಳವಣಿಗೆ ಆಗಿಲ್ಲ ಎಂದು ತಮಿಳುನಾಡು ವಕೀಲರು ಗಮನ ಸೆಳೆದರು. ಆಗ ನ್ಯಾಯಪೀಠವು, 'ಇದು (ಮಾತುಕತೆ) 10 ವರ್ಷಗಳ ವರೆಗೆ ಮುಂದುವರಿಯಲು ಸಾಧ್ಯವಿಲ್ಲ' ಎಂದು ಹೇಳಿತು.

ಆಗ ಮಧ್ಯಪ್ರವೇಶಿಸಿದ ಕರ್ನಾಟಕ ಸರ್ಕಾರದ ಪರ ವಕೀಲ ಮೋಹನ್ ವಿ. ಕಾತರಕಿ, 'ಇದೊಂದು ಸಣ್ಣ ವಿಷಯವಾಗಿದ್ದು, ಮಾತುಕತೆಯ ಮೂಲಕವೇ ಬಗೆಹರಿಸಬಹುದು' ಎಂದರು.


1956ರ ಅಂತರ್ ರಾಜ್ಯ ನದಿ ನೀರು ವಿವಾದ ಕಾಯ್ದೆಯ ಸೆಕ್ಷನ್ 4 (1)ರ ಪ್ರಕಾರ, ಸಂಧಾನದ ಮೂಲಕ ಸಮಸ್ಯೆ ಬಗೆಹರಿಸಲು ಸಾಧ್ಯವಿಲ್ಲ ಎಂದು ಕೇಂದ್ರ ಸರ್ಕಾರಕ್ಕೆ ಮನವರಿಕೆಯಾದಲ್ಲಿ ಮಾತ್ರ ನ್ಯಾಯಾಧೀಕರಣವನ್ನು ರಚಿಸಬಹುದು ಎಂದು ಗಮನ ಸೆಳೆದರು.

ವಿವಾದ ಏನಿದೆ ಎಂಬುದನ್ನು ತಮಿಳುನಾಡು ಸರ್ಕಾರ ದೂರಿನಲ್ಲಿ ಬಹಿರಂಗಪಡಿಸಿಲ್ಲ. ಹೀಗಾಗಿ, ಕರ್ನಾಟಕ ಸರ್ಕಾರವು ನ್ಯಾಯಾಧೀಕರಣ ರಚನೆಯನ್ನು ವಿರೋಧಿಸುತ್ತದೆ ಎಂದು ಕಾತರಕಿ ಹೇಳಿದರು.

ಕೇಂದ್ರದ ಪರವಾಗಿ ಹಾಜರಾದ ಹೆಚ್ಚುವರಿ ಸಾಲಿಸಿಟರ್ ಜನರಲ್ ಐಶ್ವರ್ಯಾ ಭಾಟಿ, 'ತಮಿಳುನಾಡಿನ ದೂರನ್ನು ಸಂಧಾನ ಸಮಿತಿಗೆ ವಹಿಸಲಾಗಿದೆ' ಎಂದರು.

ವಿವಾದದಲ್ಲಿ ನಿಲುವು ಸ್ಪಷ್ಟಪಡಿಸಲು ನಾಲ್ಕು ವಾರಗಳ ಕಾಲಾವಕಾಶ ನೀಡಬೇಕು ಎಂದೂ ಕೋರಿದರು. ಬಳಿಕ ನ್ಯಾಯಪೀಠವು ವಿಚಾರಣೆಯನ್ನು ಡಿ. 14ಕ್ಕೆ ಮುಂದೂಡಿತು.

ಚಿಕಿತ್ಸೆಗೆ ಬಂದ ಮಹಿಳೆಯರಿಗೆ ಲೈಂಗಿಕ ಕಿರುಕುಳ



ವೆಂಕಟರಮಣ


ಬೆಂಗಳೂರು: ಆಯುರ್ವೇದ ಚಿಕಿತ್ಸೆ ನೀಡುವ ನೆಪದಲ್ಲಿ ಯುವತಿಯರು ಹಾಗೂ ಮಹಿಳೆಯರ ಬಟ್ಟೆ ತೆಗೆಸಿ ಅಶ್ಲೀಲ ದೃಶ್ಯ ಚಿತ್ರೀಕರಿಸಿ ಲೈಂಗಿಕ ಕಿರುಕುಳ ನೀಡುತ್ತಿದ್ದ ಆರೋಪಿಯನ್ನು ಸಿಸಿಬಿ ಮಹಿಳಾ ಸಂರಕ್ಷಣಾ ದಳದ ಪೊಲೀಸರು ಆಂಧ್ರಪ್ರದೇಶದ ಗುತ್ತಿಯ ತಾಡಪತ್ರಿಯಲ್ಲಿ ಬಂಧಿಸಿದ್ದಾರೆ.

ಮತ್ತೀಕೆರೆಯ ವೆಂಕಟರಮಣ (57) ಬಂಧಿತ ನಕಲಿ ವೈದ್ಯ. 'ಯಶವಂತಪುರ ಸಮೀಪದ ಮತ್ತೀಕೆರೆಯ ತನ್ನ ಮನೆಯ ಒಂದು ಕೊಠಡಿಯಲ್ಲಿ ಆರೋಪಿ ಅಕ್ಯೂಪಂಚರ್ ಚಿಕಿತ್ಸೆ ನೀಡುವುದಾಗಿ ಕ್ಲಿನಿಕ್ ಆರಂಭಿಸಿದ್ದ. ಚಿಕಿತ್ಸೆಗೆ ಬರುವ ಮಹಿಳೆಯರ ಬಟ್ಟೆ ತೆಗೆಸಿ ಅವರ ಖಾಸಗಿ ಅಂಗಾಂಗ ಮುಟ್ಟುವುದು ಹಾಗೂ ತಿಳಿಯದಂತೆ ಮೊಬೈಲ್‌ನಲ್ಲಿ ವಿಡಿಯೊ ಚಿತ್ರೀಕರಣ ಮಾಡಿಕೊಳ್ಳುತ್ತಿದ್ದ. ಈ ಸಂಬಂಧ ಯಶವಂತಪುರ, ಬಸವನಗುಡಿ ಹಾಗೂ ಸೈಬರ್ ಕ್ರೈಂ ಪೊಲೀಸ್ ಠಾಣೆಗಳಲ್ಲಿ ಪ್ರಕರಣ ದಾಖಲಾಗಿತ್ತು. ಬಳಿಕ ಆರೋಪಿ ಹೊರ ರಾಜ್ಯಕ್ಕೆ ಪರಾರಿಯಾಗಿದ್ದ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಮೆಜೆಸ್ಟಿಕ್ ಬಳಿ ಆಯುರ್ವೇದ ವೈದ್ಯರೊಬ್ಬರು ನಡೆಸಿಕೊಟ್ಟ ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದ. ಆರೋಪಿಗೆ ವೈದ್ಯರ ಪರಿಚಯವಾಗಿತ್ತು. ಇದನ್ನೇ ಬಂಡವಾಳ ಮಾಡಿಕೊಂಡಿದ್ದ ವೆಂಕಟರಮಣ, ಜಯನಗರದ 4ನೇ ಬ್ಲಾಕ್‌ನಲ್ಲಿ ಅಕ್ಯೂಪೈ ಇ.ಎಂ. ಇನ್‌ಸ್ಟಿಟ್ಯೂಟ್‌ನಲ್ಲಿ ಚಿಕಿತ್ಸೆ ತರಬೇತಿ ಪಡೆದುಕೊಂಡು ಪ್ರತ್ಯೇಕವಾಗಿ ಚಿಕಿತ್ಸೆ ನೀಡಲು ಆರಂಭಿಸಿದ್ದ. ತನ್ನ ಹೆಸರಿನ ಮುಂದೆ 'ಡಾ' ಎಂದೂ ಹಾಕಿಸಿಕೊಂಡಿದ್ದ. ನಾಲ್ಕು ವರ್ಷಗಳಿಂದ ಮತ್ತೀಕೆರೆಯ ಮನೆಯಲ್ಲಿ ಚಿಕಿತ್ಸೆ ನೀಡುತ್ತಿದ್ದ. ಚಿಕಿತ್ಸೆಗೆ ಬಂದ ಮಹಿಳೆಯರು, ಯುವತಿಯರ ವಿಡಿಯೊ ಚಿತ್ರೀಕರಿಸಿ ಲೈಂಗಿಕ ಕಿರುಕುಳ ನೀಡುತ್ತಿದ್ದ. ಮರ್ಯಾದೆಗೆ ಅಂಜಿದ್ದ ಕೆಲವರು ಈ ಹಿಂದೆ ದೂರು ನೀಡಿರಲಿಲ್ಲ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಎಚ್‌ಎಎಲ್ ವಿಮಾನ ನಿಲ್ದಾಣ ಪ್ರವೇಶಿಸಿದ್ದ ವ್ಯಕ್ತಿ ಬಂಧನ

ಪ್ರಜಾವಾಣಿ ವಾರ್ತೆ



ಮುಕುಂದ ಕೌಂದ್

ಬೆಂಗಳೂರು: ಎಚ್‌ಎಎಲ್ ವಿಮಾನ ನಿಲ್ದಾಣಕ್ಕೆ ಅತಿಕ್ರಮವಾಗಿ ಪ್ರವೇಶಿಸಿದ್ದ ಅಸ್ಸಾಂನ ಸೀನಿತ್‌ಪುರದ ನಿವಾಸಿ ಮುಕುಂದ ಕೌಂದ್ (36) ಎಂಬಾತನನ್ನು ಎಚ್‌ಎಎಲ್ ಪೊಲೀಸರು ಬಂಧಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರು ನಗರಕ್ಕೆ ಭೇಟಿ ನೀಡುವುದಕ್ಕೂ ಒಂದು ದಿನ ಮೊದಲು ಮಕುಂದ್ ವಿಮಾನ ನಿಲ್ದಾಣವನ್ನು ಪ್ರವೇಶಿಸಿದ್ದ.

'ಆರೋಪಿಯು ಗಾರೆ ಕೆಲಸ ಮಾಡಿಕೊಂಡಿದ್ದ. ಬೆಂಗಳೂರಿಗೆ ಬಂದು ಕೆಲಸ ಹುಡುಕುತ್ತಿದ್ದ. ನ.9ರಂದು ರಾತ್ರಿ 12.50ರ ಸುಮಾರಿಗೆ ಎಚ್‌ಎಎಲ್ ವಿಮಾನ ನಿಲ್ದಾಣ ಸೇವಾ ಕೇಂದ್ರ ಪ್ರವೇಶಿಸಿದ್ದ. ಅದೇ ವೇಳೆ ಶ್ವಾನದಳದ ಸಿಬ್ಬಂದಿ ಗಸ್ತು ತಿರುಗುತ್ತಿದ್ದರು. ಸೌರ ಫಲಕಗಳ ಅಡಿಯಲ್ಲಿ ಅವಿತುಕೊಂಡಿದ್ದನ್ನು ಗಮನಿಸಿ, ಆತನನ್ನು ಗಸ್ತು ಸಿಬ್ಬಂದಿ ವಶಕ್ಕೆ ಪಡೆದುಕೊಂಡಿದ್ದರು. ನಿಯಂತ್ರಣ ಕೊಠಡಿಗೆ ಕರೆದೊಯ್ದು ಸ್ಥಳದಲ್ಲಿದ್ದ ಸಿಸಿಟಿವಿ ಕ್ಯಾಮೆರಾ ಪರಿಶೀಲನೆ ನಡೆಸಿದಾಗ ಕೆಂಪಾಪುರ ರಸ್ತೆಯ ಶಿವನ ದೇವಾಲಯದ ಎದುರಿನ ವಾಚ್ ಟವರ್ ಸಂಖ್ಯೆ 3ರ ಬಳಿ ವಿಮಾನ ನಿಲ್ದಾಣದ ಗೋಡೆಯನ್ನು ಏರಲು ಪ್ರಯತ್ನಿಸಿದ್ದ. ಅದು ಸಾಧ್ಯವಾಗಿರಲಿಲ್ಲ. ಟ್ರಾಲಿ ಗೇಟ್ ಬಳಿ ಬಂದು ಎಚ್‌ಎಎಲ್ ಪ್ರವೇಶಿಸಿರುವುದು ದೃಶ್ಯಾವಳಿಯಿಂದ ಗೊತ್ತಾಗಿತ್ತು. ಕಳವು ಮಾಡುವ ಉದ್ದೇಶದಿಂದ ವಿಮಾನ ನಿಲ್ದಾಣಕ್ಕೆ ಆರೋಪಿ ಬಂದಿದ್ದ ಎಂಬುದು ಮೇಲ್ನೋಟಕ್ಕೆ ತಿಳಿದುಬಂದಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

12 ವರ್ಷಗಳ ಬಳಿಕ ಕೊಲೆ ಆರೋಪಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎಂ–ಸಿಸಿಟಿಎನ್‌ಎಸ್' ಎಂಬ ಮೊಬೈಲ್ ಆ್ಯಪ್ ನೆರವಿನಿಂದ 12 ವರ್ಷಗಳಿಂದ ತಲೆಮರೆಸಿಕೊಂಡಿದ್ದ ಕೊಲೆ ಆರೋಪಿ ರಮೇಶ್ ಎಂಬಾತನನ್ನು ಯಶವಂತಪುರ ಪೊಲೀಸರು ಬಂಧಿಸಿದ್ದಾರೆ.

'2005ರ ಆಗಸ್ಟ್ 29ರಂದು ತಾವರೆಕೆರೆ ಪೊಲೀಸ್ ಠಾಣಾ ವ್ಯಾಪ್ತಿಯ ತಿಗಳರಪಾಳ್ಯದ ಬಾಲಾಜಿ ನಗರದಲ್ಲಿ ಮನೆಯೊಂದಕ್ಕೆ ಬಣ್ಣ ಬಳಿಯಲು 12 ಮಂದಿ ಬಂದಿದ್ದರು. ಅವರೊಂದಿಗೆ ರಮೇಶ್ ಸಹ ಇದ್ದ. ಮನೆಯ ಮಾಲೀಕರೊಂದಿಗೆ ನಡೆದ ಗಲಾಟೆಯಲ್ಲಿ ಮಾಲೀಕರನ್ನೇ ಕೊಲೆ ಮಾಡಲಾಗಿತ್ತು. ಈ ಪ್ರಕರಣದಲ್ಲಿ ಎಲ್ಲರನ್ನೂ ಬಂಧಿಸಲಾಗಿತ್ತು. 2010ರಲ್ಲಿ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದ ರಮೇಶ್ ನ್ಯಾಯಾಲಯಕ್ಕೆ ಹಾಜರಾಗದೆ ತಲೆಮರೆಸಿಕೊಂಡಿದ್ದ. ನ್ಯಾಯಾಲಯವು ಆರೋಪಿ ವಿರುದ್ಧ ವಾರೆಂಟ್ ಹೊರಡಿಸಿತ್ತು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಎಂ–ಸಿಸಿಟಿಎನ್‌ಎಸ್' ಮೊಬೈಲ್ ಆ್ಯಪ್ ಮೂಲಕ ಬೆರಳು ಮುದ್ರೆ ಪರಿಶೀಲನೆಗೆ ಪುಟ್ಟದಾದ ಬೆರಳು ಮುದ್ರೆ ಪರಿಕರವನ್ನು ಎಲ್ಲ ಪೊಲೀಸ್ ಠಾಣೆಗಳಿಗೂ ನೀಡಲಾಗಿತ್ತು. ಈ ಪರಿಕರ ಬಳಸಿಕೊಂಡು ಮೊಬೈಲ್ ಅಪ್ಲಿಕೇಶನ್ ಮೂಲಕ ಅನುಮಾನಾಸ್ಪದ ವ್ಯಕ್ತಿಗಳ ಬೆರಳು ಮುದ್ರೆ ಪರಿಶೀಲಿಸಿದರೆ ಆ ವ್ಯಕ್ತಿ ಹಿಂದೆ ಯಾವುದಾದರೂ ಪ್ರಕರಣದಲ್ಲಿ ಭಾಗಿಯಾಗಿದ್ದರೆ ಅದರ ಮಾಹಿತಿ ತಿಳಿಯಲಿದೆ. ಇದೇ ತಂತ್ರಜ್ಞಾನ ಬಳಸಿಕೊಂಡು 12 ವರ್ಷಗಳ ಬಳಿಕ ಆರೋಪಿ ಬಂಧಿಸಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಯಶವಂತಪುರ ಪೊಲೀಸ್ ಠಾಣೆಯ ಬಿಕೆ ನಗರದ 1ನೇ ಮುಖ್ಯರಸ್ತೆಯಲ್ಲಿ ರಮೇಶ್ ಅನುಮಾನಾಸ್ಪದವಾಗಿ ಈಚೆಗೆ ಓಡಾಟ ನಡೆಸುತ್ತಿದ್ದ. ಆತನನ್ನು ವಶಕ್ಕೆ ಪಡೆದು ಆ್ಯಪ್ ಮೂಲಕ ಬೆರಳು ಮುದ್ರೆ ಪರಿಶೀಲಿಸಿದಾಗ ಆರೋಪಿಯ ಮಾಹಿತಿ ಪೊಲೀಸರ ದತ್ತಾಂಶದಲ್ಲಿ ಇರುವುದು ದೃಢಪಟ್ಟಿತ್ತು' ಎಂದು ಮೂಲಗಳು ತಿಳಿಸಿವೆ.

ಕೆರೆಯಲ್ಲಿ ಮಗುವಿನ ಶವ ಪತ್ತೆ: ತಂದೆಗಾಗಿ ಮುಂದುವರಿದ ಶೋಧ

ಕೋಲಾರ: ಬೆಂಗಳೂರಿನ ಯಲಹಂಕ ಬಳಿಯ ಬಾಗಲೂರಿನಿಂದ ನಾಪತ್ತೆಯಾಗಿದ್ದ ತಂದೆ-ಮಗುವಿನ ಪೈಕಿ ಮಗುವಿನ ಶವ ತಾಲ್ಲೂಕಿನ ಕೆಂದಟ್ಟಿ ಕೆರೆಯಲ್ಲಿ ಮಂಗಳವಾರ ರಾತ್ರಿ ಪತ್ತೆಯಾಗಿದೆ. ತಂದೆಗಾಗಿ ಪೊಲೀಸರು ತೀವ್ರ ಹುಡುಕಾಟ ನಡೆಸಿದ್ದಾರೆ.

ಗುಜರಾತ್ ಮೂಲದ ಮಾಜಿ ಐ.ಟಿ ಉದ್ಯೋಗಿ ರಾಹುಲ್ ಹಾಗೂ ಅವರ ಮಗು ಜಿಯಾ (ಎರಡೂವರೆ ವರ್ಷ) ಮಂಗಳವಾರ ಬೆಳಿಗ್ಗೆ ನಾಪತ್ತೆಯಾಗಿದ್ದರು.

ಹೆಂಡತಿಯ ಒಡವೆ ಅಡವಿಟ್ಟಿದ್ದ ರಾಹುಲ್ ಅವರು ಮನೆಯಲ್ಲಿ ಕಳ್ಳತನವಾಗಿದೆ ಎಂದು ಬಾಗಲೂರು ಪೊಲೀಸ್ ಠಾಣೆಗೆ ಸುಳ್ಳು ದೂರು ನೀಡಿದ್ದರು ಎನ್ನಲಾಗಿದೆ. ವಿಚಾರಣೆಗೆ ಠಾಣೆಗೆ ಬರುವಂತೆ ಪೊಲೀಸರು ಕರೆದಿದ್ದರು. ಮಗಳನ್ನು ಶಾಲೆಗೆ ಬಿಟ್ಟು ಠಾಣೆಗೆ ಹೋಗಿ ಬರುವುದಾಗಿ ಮನೆಯಲ್ಲಿ ಹೇಳಿದ್ದರು. ಬಳಿಕ ಸಂಪರ್ಕಕ್ಕೆ ಸಿಕ್ಕಿರಲಿಲ್ಲ.

ವಿಚಾರಣೆಗೆ ಹೆದರಿ ನಾಪತ್ತೆಯಾಗಿದ್ದ ಅವರಿಗಾಗಿ ಪೊಲೀಸರು ಹುಡುಕಾಟ ಆರಂಭಿಸಿದ್ದರು. ಮೊಬೈಲ್ ನೆಟ್‌ವರ್ಕ್ ಲೊಕೇಶನ್ ಆಧಾರದ ಮೇರೆಗೆ ಕೆಂದಟ್ಟಿ ಬಳಿಗೆ ಬಂದಾಗ ಜಿಯಾ ಶವ ಪತ್ತೆಯಾಯಿತು. ಐ–20 ನೀಲಿ ಬಣ್ಣದ ಕಾರು, ಅದರೊಳಗೆ ಪರ್ಸ್ ಹಾಗೂ ಮೊಬೈಲ್ ಸಿಕ್ಕಿದೆ. ಕುಟುಂಬದವರು ಮಗುವಿನ ಗುರುತು ಪತ್ತೆ ಮಾಡಿದ್ದಾರೆ.

₹ 1.30 ಕೋಟಿಯ ವಸ್ತು ಜಪ್ತಿ

ಬೆಂಗಳೂರು: ಒಂದು ತಿಂಗಳ ಅವಧಿಯಲ್ಲಿ ದಕ್ಷಿಣ ವಿಭಾಗದ ಪೊಲೀಸರು ₹ 1.30 ಕೋಟಿ ಮೌಲ್ಯದ ವಸ್ತುಗಳನ್ನು ಜಪ್ತಿ ಮಾಡಿದ್ದಾರೆ. 161 ಆರೋಪಿಗಳನ್ನು ಬಂಧಿಸಿ, 176 ಪ್ರಕರಣಗಳನ್ನು ಪತ್ತೆ ಹಚ್ಚಿದ್ದಾರೆ.

2 ಕೆ.ಜಿ. 676 ಗ್ರಾಂ ಚಿನ್ನಾಭರಣ, 134 ಬೈಕ್, 141 ಕೆ.ಜಿ ಗಾಂಜಾ, 1 ಕೆ.ಜಿ. ಎಂಡಿಎಂಎ, ₹ 3.83 ಲಕ್ಷ ಮೌಲ್ಯದ ವಿವಿಧ ಕಂಪನಿಯ 29 ಮೊಬೈಲ್ ವಶಕ್ಕೆ ಪಡೆದಿದ್ದಾರೆ.

ಕ್ರಿಕೆಟ್ ಬೆಟ್ಟಿಂಗ್ ನಡೆಸುತ್ತಿದ್ದವರನ್ನು ಬಂಧಿಸಿ, ₹ 28 ಲಕ್ಷ ಜಪ್ತಿ ಮಾಡಲಾಗಿದೆ ಎಂದು ಡಿಸಿಪಿ ಪಿ.ಕೃಷ್ಣಕಾಂತ್ ತಿಳಿಸಿದ್ದಾರೆ.

ಅಪರಾಧ ಸುದ್ದಿ

ತಹಶೀಲ್ದಾರ್ ವರ್ಷಾ ಮನೆಯಲ್ಲಿ ದಾಖಲೆ ವಶ

ಬೆಂಗಳೂರು: ಜಮೀನಿನ ಖಾತೆ ಬದಲಾವಣೆ ಮಾಡಲು ₹ 5 ಲಕ್ಷ ಲಂಚ ಪಡೆಯುವಾಗ ಬಂಧಿತರಾಗಿದ್ದ ಬೆಂಗಳೂರು ಉತ್ತರ ತಾಲ್ಲೂಕಿನ ವಿಶೇಷ ತಹಶೀಲ್ದಾರ್ ವರ್ಷಾ ಒಡೆಯರ್ ಮನೆ ಮೇಲೆ ದಾಳಿಮಾಡಿ, ಶೋಧ ನಡೆಸಿರುವ ಲೋಕಾಯುಕ್ತ ಪೊಲೀಸರು, ಹಲವು ದಾಖಲೆಗಳನ್ನು ವಶಪಡಿಸಿಕೊಂಡಿದ್ದಾರೆ.

ವರ್ಷಾ ಮತ್ತು ಅವರ ಪರವಾಗಿ ಲಂಚದ ಹಣ ಪಡೆದಿದ್ದ ಮಧ್ಯವರ್ತಿ ರಮೇಶ್ ಎಂಬುವವರನ್ನು ಲೋಕಾಯುಕ್ತ ಪೊಲೀಸ್ ವಿಭಾಗದ ಅಧಿಕಾರಿಗಳು ಮಂಗಳವಾರ ಸಂಜೆ ಬಂಧಿಸಿದ್ದರು.

ವರ್ಷಾ ಮತ್ತು ರಮೇಶ್ ಅವರನ್ನು 14 ದಿನಗಳವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ಲೋಕಾಯುಕ್ತ ವಿಶೇಷ ನ್ಯಾಯಾಲಯ ಆದೇಶಿಸಿದೆ.

ಬೆಂಗಳೂರು ನಗರ ಸಂಚಾರ ವಿಭಾಗದ 'ವಿಶೇಷ ಆಯುಕ್ತ' ಎಂ.ಅಬ್ದುಲ್ ಸಲೀಂ ಅಭಿಮತ

ದಟ್ಟಣೆ: ತಂತ್ರಜ್ಞಾನವೇ 'ರಾಮಬಾಣ'

• ಆದಿತ್ಯ ಕೆ.ಎ.

ಪ್ರಜಾವಾಣಿ ಸಂದರ್ಶನ

ಎಂ.ಅಬ್ದುಲ್ ಸಲೀಂ, ಎಡಿಜಿಪಿ



ಎಂ. ಅಬ್ದುಲ್

ಬೆಂಗಳೂರು: ಗುಂಡಿ ಬಿದ್ದ ರಸ್ತೆಗಳಿಂದ ಸಾವು–ನೋವು, ಫ್ಲೈಓವರ್‌ಗಳಲ್ಲಿ ಹೆಚ್ಚಿದ ಅಪಘಾತ ಪ್ರಕರಣಗಳು, ಟ್ರಾಫಿಕ್ ಸಿಗ್ನಲ್‌ಗಳಲ್ಲಿ ನಿತ್ಯ ವಾಹನ ಸವಾರರ ಪರದಾಟ, ಕೋವಿಡ್–19 ಸಾಂಕ್ರಾಮಿಕದ ಬಳಿಕ ವಾಹನ ಖರೀದಿಸುವವರ ಸಂಖ್ಯೆಯೂ ಹೆಚ್ಚಾಗಿದ್ದು, ಎಲ್ಲ ರಸ್ತೆಗಳಲ್ಲೂ ದಟ್ಟಣೆ... ಹೀಗೆ ಪೊಲೀಸರು ಹಾಗೂ ರಾಜಧಾನಿ ಜನರು ನಿತ್ಯವೂ ಹೊಸ ಸವಾಲುಗಳು ಹಾಗೂ ಸಮಸ್ಯೆ ಎದುರಿಸುತ್ತಿದ್ದಾರೆ. ಈ ಸಮಸ್ಯೆಗಳಿಗೆ ಪರಿಹಾರವೇ ಕಾಣಿಸುತ್ತಿಲ್ಲ ಎಂಬ ಕೊರಗು ಜನರದ್ದು.

'ಸಿಲಿಕಾನ್ ಸಿಟಿ'ಯಲ್ಲಿ ವಾಹನಗಳ ಸುಗಮ ಸಂಚಾರ ಹಾಗೂ ಸಂಚಾರ ನಿಯಮಗಳ ಜಾರಿಗೆ ಹೊಸ ಪ್ರಯೋಗಕ್ಕೆ ಸರ್ಕಾರವು ಮುಂದಾಗಿದ್ದು, ವಿಶೇಷ ಕಮಿಷನರ್ ಹುದ್ದೆ ಸೃಷ್ಟಿಸಿದೆ. ಈ ಹುದ್ದೆಗೆ ಎಡಿಜಿಪಿ ದರ್ಜೆಯ ಎಂ. ಅಬ್ದುಲ್ ಸಲೀಂ ಅವರನ್ನು ನೇಮಿಸಿದೆ. ವಿಶೇಷ ಆಯುಕ್ತರಾಗಿ ಅಧಿಕಾರ ವಹಿಸಿಕೊಂಡಿರುವ ಸಲೀಂ 'ಪ್ರಜಾವಾಣಿ'ಗೆ ನೀಡಿದ ಸಂದರ್ಶನದಲ್ಲಿ ವಾಹನ ದಟ್ಟಣೆ ನಿಯಂತ್ರಣಕ್ಕೆ ಹೊಸ ಮಾರ್ಗೋಪಾಯ, ತಂತ್ರಜ್ಞಾನದ ಬಳಕೆ ಕುರಿತು ಕುರಿತು ವಿವರಿಸಿದರು. ಈ ಹಿಂದೆ ಸಲೀಂ ಅವರು ಸಂಚಾರ ವಿಭಾಗದ ಜಂಟಿ ಆಯುಕ್ತರಾಗಿ ಕೆಲಸ ಮಾಡಿದ್ದರು.

• ನಗರದ ವಾಹನ ದಟ್ಟಣೆ ಹೇಗಿದೆ?

ಹಿಂದಿನ ವರ್ಷಕ್ಕೆ ಹೋಲಿಸಿದರೆ ಈಗ ಟ್ರಾಫಿಕ್ ಸಮಸ್ಯೆ ತೀವ್ರವಾಗಿ ಕಾಡುತ್ತಿದೆ. ಈಗಿನ ಸ್ಥಿತಿಯಲ್ಲಿ ಸಂಚಾರ ನಿಯಂತ್ರಣ ಸುಲಭ ಅಲ್ಲ. ನೋಂದಣಿಯಾದ ವಾಹನಗಳ ಸಂಖ್ಯೆಯೇ ನಗರದಲ್ಲಿ 1 ಕೋಟಿಯಷ್ಟಿದೆ. ಕಚೇರಿ ಹಾಗೂ ಶಾಲಾ, ಕಾಲೇಜುಗಳಿಗೆ ತೆರಳುವ ವೇಳೆ ರಸ್ತೆಯಲ್ಲಿ ಅಂದಾಜು 25 ಲಕ್ಷ ವಾಹನಗಳು ಇರುತ್ತವೆ.

• ಸಂಚಾರ ಪೊಲೀಸ್ ಸಿಬ್ಬಂದಿ ಕೊರತೆ ಇದೆಯೇ?

44 ಸಂಚಾರ ಪೊಲೀಸ್ ಠಾಣೆಗಳಿದ್ದು, ಸದ್ಯಕ್ಕೆ ಸಿಬ್ಬಂದಿಯ ಕೊರತೆ ಇಲ್ಲ.

• ವಿಶೇಷ ಆಯುಕ್ತರ ನೇಮಕದ ಉದ್ದೇಶ ಏನು? ನೀವು ಯಾರಿಗೆ ವರದಿ ಮಾಡಿಕೊಳ್ಳುತ್ತೀರಿ?

ವಿಶೇಷ ಆಯುಕ್ತ ಹಾಗೂ ಜಂಟಿ ಸಂಚಾರ ವಿಭಾಗದ ಆಯುಕ್ತರ ಹುದ್ದೆ ನೀಡಲಾಗಿದೆ. ಸಂಚಾರ ಸುಧಾರಣೆಯೇ ಈ ಹುದ್ದೆಗಳ ಮುಖ್ಯ ಉದ್ದೇಶ. ಈ ವಿಭಾಗವನ್ನು ಸರ್ಕಾರ ಬಲ ಪಡಿಸುವ ಕೆಲಸಕ್ಕೆ ಮುಂದಾಗಿದೆ. ನಾನು ನಗರ ಪೊಲೀಸ್ ಆಯುಕ್ತರಿಗೆ ವರದಿ ಮಾಡಿಕೊಳ್ಳುತ್ತೇನೆ. ಮುಖ್ಯ ಕಾರ್ಯದರ್ಶಿ ನೇತೃತ್ವದಲ್ಲಿ ಉನ್ನತ ಮಟ್ಟದ ಸಮಿತಿಯಿದ್ದು, ಸಂಚಾರ ವ್ಯವಸ್ಥೆ ಸುಧಾರಣೆಗೆ ಆಗಾಗ್ಗೆ ಸಭೆ ನಡೆಸುತ್ತಿದೆ. ಎಲ್ಲರ ಸಲಹೆ ಕ್ರೋಢೀಕರಿಸಿ ನೂತನ ಯೋಜನೆ, ಏಕಮುಖ ಸಂಚಾರ ವ್ಯವಸ್ಥೆ ಅನುಷ್ಠಾನಕ್ಕೆ ತರಲಾಗುವುದು.

• ಹೊಸ ಸವಾಲುಗಳು ಯಾವುವು?

ರಸ್ತೆಗಳಲ್ಲಿಯೇ ಜನರು ಹೆಚ್ಚಿನ ಸಮಯ ಕಳೆಯುವಂತಾಗಿದೆ. ಈ ಅವಧಿ ಕಡಿಮೆ ಮಾಡಲು ಪ್ರಯತ್ನಿಸುತ್ತೇನೆ. ಸುಗಮ ಸಂಚಾರಕ್ಕೆ ಆದ್ಯತೆ ಇರಲಿದೆ. ಮೊದಲು ಸಮಸ್ಯೆಗಳ ಅಧ್ಯಯನ ನಡೆಸುತ್ತೇನೆ. ಆಗಲೇ ಹೆಬ್ಬಾಳ ಮತ್ತಿತರ ಫ್ಲೈಓವರ್ ಪರಿಶೀಲನೆ ನಡೆಸಿದ್ದೇನೆ. ಬಿಬಿಎಂಪಿಯೂ ರಸ್ತೆ ಗುಂಡಿ ಮುಚ್ಚುವ ಕೆಲಸ ಆರಂಭಿಸಿದೆ. ಉಳಿದಿರುವ ಗುಂಡಿ ಗುರುತಿಸಿ ಬಿಬಿಎಂಪಿಗೆ ವರದಿ ಸಲ್ಲಿಸಲಾಗುವುದು.

• ಹೊಸ ಯೋಜನೆಗಳ ಬಗ್ಗೆ ತಿಳಿಸಿ

ಸದ್ಯಕ್ಕೆ ಹೊಸ ಯೋಜನೆಗಳ ಕುರಿತು ಬಹಿರಂಗಪಡಿಸಲು ಸಾಧ್ಯ ಇಲ್ಲ. ಇಲಾಖೆ ಅಧಿಕಾರಿಗಳ ಜೊತೆಗೆ ಚರ್ಚಿಸಿ ಮಾಹಿತಿ ನೀಡುತ್ತೇನೆ.

ಸಂಪರ್ಕರಹಿತ ವ್ಯವಸ್ಥೆ

• ಟ್ರಾಫಿಕ್ ಪೊಲೀಸರು ಕಂಡಕಂಡಲ್ಲಿ ದಂಡ ಹಾಕುತ್ತಿದ್ದಾರೆ ಎಂಬ ಆರೋಪವಿದೆ ಅಲ್ಲವೇ?

ತಂತ್ರಜ್ಞಾನ ಬಳಸಿಕೊಂಡು ಪೊಲೀಸ್ ಹಾಗೂ ಸಾರ್ವಜನಿಕರ ನಡುವೆ ಸಂಪರ್ಕರಹಿತ ವ್ಯವಸ್ಥೆ ಜಾರಿಗೆ ತರಲಾಗುವುದು. ಸಂಪರ್ಕರಹಿತ ಕೇಸ್‌ಗಳಿಗೆ ಆದ್ಯತೆ ನೀಡುತ್ತೇನೆ. ನಿಯಮ ಜಾರಿಯಲ್ಲಿ ಪಾರದರ್ಶಕತೆ ಇರಲಿದೆ. ಪೊಲೀಸರ ಮೇಲೆ ಸಾರ್ವಜನಿಕರಿಗೆ ಮೊದಲು ನಂಬಿಕೆ ಬರಬೇಕು.

ಟೋಯಿಂಗ್ ಪ್ರಸ್ತಾವ ಇಲ್ಲ

• ಟೋಯಿಂಗ್ ಪ್ರಸ್ತಾವ ಇಲಾಖೆ ಮುಂದೆ ಇದೆಯೇ?

ಟೋಯಿಂಗ್ ಬಗೆಗೆ ಯಾವ ಪ್ರಸ್ತಾವವೂ ಇಲ್ಲ. ಪೊಲೀಸರು ಇರುವುದು ದಂಡ ವಸೂಲಿಗೆ ಅಲ್ಲ. ಸುಗಮ ಸಂಚಾರ ವ್ಯವಸ್ಥೆ ಕಲ್ಪಿಸುವುದೇ ನಮ್ಮ ಉದ್ದೇಶ.

'ಬದುಕುಳಿದ ವ್ಯಕ್ತಿಗೆ ಪರಿಹಾರ ನಿರಾಕರಣೆ ಸಮರ್ಥನೀಯವಲ್ಲ'

ನವದೆಹಲಿ (ಪಿಟಿಐ): ಅಪಘಾತ ಪ್ರಕರಣಗಳಲ್ಲಿ ಗಂಭೀರ ಗಾಯಗೊಂಡು ಬದುಕುಳಿದ ವ್ಯಕ್ತಿ ಭವಿಷ್ಯದಲ್ಲಿ ಎದುರಾಗುವ ಶಾಶ್ವತ ಅಂಗವೈಕಲ್ಯದ ಸಾಧ್ಯತೆಗೆ ಪರಿಹಾರ ಕೊಡುವುದನ್ನು ನಿರಾಕರಿಸಲಾಗುವುದು ಎಂಬುದನ್ನು ಸಮರ್ಥಿಸಲಾಗದು ಎಂದು ಸುಪ್ರೀಂಕೋರ್ಟ್ ಬುಧವಾರ ಹೇಳಿದೆ.

ನ್ಯಾಯಾಲಯದಿಂದ ಪರಿಹಾರ ನಿರ್ಧರಿಸುವ ಪ್ರಕ್ರಿಯೆಯು ಮೂಲಭೂತವಾಗಿ ತುಂಬಾ ಕಠಿಣ ಸವಾಲು ಮತ್ತು ಇದು ಪರಿಪೂರ್ಣ ವಿಜ್ಞಾನವಾಗಲು ಸಾಧ್ಯವಿಲ್ಲ. ಗಾಯ ಮತ್ತು ಅಂಗವೈಕಲ್ಯಕ್ಕೆ ಪರಿಪೂರ್ಣವಾದ ಪರಿಹಾರ ನಿಗದಿಪಡಿಸುವುದು ಅಷ್ಟು ಸುಲಭವಲ್ಲ ಎಂದು ನ್ಯಾಯಾಲಯ ಹೇಳಿದೆ.

ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಜೆ.ಬಿ. ಪಾರ್ದೀವಾಲಾ ಅವರಿದ್ದ ಪೀಠವು, ಕರ್ನಾಟಕದಲ್ಲಿ 2012ರ ಜುಲೈನಲ್ಲಿ ರಸ್ತೆ ಅಪಘಾತದಲ್ಲಿ ಶೇ 45 ಶಾಶ್ವತ ಅಂಗವೈಕಲ್ಯಕ್ಕೆ ಒಳಗಾದ ವ್ಯಕ್ತಿಗೆ ನೀಡಬೇಕಾದ ಪರಿಹಾರ ಮೊತ್ತವನ್ನು ₹21,78,-600ಕ್ಕೆ ಹೆಚ್ಚಿಸಿದೆ.

ಬೆಳಗಾವಿಯ ಮೋಟಾರು ಅಪಘಾತಗಳ ಪರಿಹಾರ ನ್ಯಾಯಮಂಡಳಿ ನೀಡಿದ್ದ ಪರಿಹಾರವನ್ನು ₹3,13,-800ರಿಂದ ₹ 9,26,800ಕ್ಕೆ ಹೆಚ್ಚಿಸಿ 2018ರ ಏಪ್ರಿಲ್‌ನಲ್ಲಿ ಕರ್ನಾಟಕ ಹೈಕೋರ್ಟ್ ತೀರ್ಪಿನ ವಿರುದ್ಧ ಸಿದ್ರಾಮ್ ಎಂಬುವವರು ಸಲ್ಲಿಸಿದ್ದ ಮೇಲ್ಮನವಿ ಅರ್ಜಿ ಆಲಿಸಿದ ಸುಪ್ರೀಂಕೋರ್ಟ್ ಈ ಮಹತ್ವದ ತೀರ್ಪು ನೀಡಿದೆ. ಹೈಕೋರ್ಟ್ ತೀರ್ಪು ಪ್ರಶ್ನಿಸಿ, ಪರಿಹಾರ ಮೊತ್ತ ಹೆಚ್ಚಿಸುವಂತೆಯೂ ಮೇಲ್ಮನವಿಯಲ್ಲಿ ಅರ್ಜಿದಾರರು ಕೋರಿದ್ದರು.

ಸುದ್ದಿ 2 ನಿಮಿಷ

ರೆಕ್ಟರ್ ಕೊಲೆ ಪ್ರಕರಣ: ಕರ್ನಾಟಕ ಸರ್ಕಾರದ ಅರ್ಜಿ ವಜಾ

ನವದೆಹಲಿ: ಬೆಂಗಳೂರಿನ ಮಲ್ಲೇಶ್ವರದಲ್ಲಿ 2013ರಲ್ಲಿ ನಡೆದ ಸಂತ ಪೀಟರ್ ಪಾಂಟಿಫಿಕಲ್ ಸೆಮಿನರಿಯ ರೆಕ್ಟರ್ ಕೆ.ಜೆ. ಥಾಮಸ್ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕನ್ನಡ ಕ್ರೈಸ್ತ ಕಾರ್ಯಕರ್ತರ ಗುಂಪಿನ ವಿರುದ್ಧ ದಾಖಲಾಗಿದ್ದ ಕ್ರಿಮಿನಲ್ ಮೊಕದ್ದಮೆಯನ್ನು ರದ್ದುಗೊಳಿಸಿದ್ದ ಆದೇಶ ಪ್ರಶ್ನಿಸಿ ಕರ್ನಾಟಕ ಸರ್ಕಾರ ಸಲ್ಲಿಸಿದ್ದ ಮೇಲ್ಮನವಿಯನ್ನು ಸುಪ್ರೀಂ ಕೋರ್ಟ್ ಬುಧವಾರ ವಜಾಗೊಳಿಸಿದೆ.

ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಹಾಗೂ ಜೆ.ಕೆ. ಮಾಹೇಶ್ವರಿ ಅವರನ್ನು ಒಳಗೊಂಡ ನ್ಯಾಯಪೀಠ, ಬೆಂಗಳೂರಿನ ಸಂತ ಪೀಟರ್ ಪಾಂಟಿಫಿಕಲ್ ಸೆಮಿನರಿ ಸಲ್ಲಿಸಿದ್ದ ಪ್ರತ್ಯೇಕ ಅರ್ಜಿಯನ್ನು ಸಹ ವಜಾಗೊಳಿಸಿದೆ.

ಕರ್ನಾಟಕ ಸರ್ಕಾರದ ಪರವಾಗಿ ಹೆಚ್ಚುವರಿ ಅಡ್ವೊಕೇಟ್ ಜನರಲ್ ನಿಖಿಲ್ ಗೋಯೆಲ್, ಸೆಮಿನರಿ ಪರವಾಗಿ ಹಿರಿಯ ವಕೀಲ ಸಿದ್ಧಾರ್ಥ ಲೂತ್ರಾ, ಆರೋಪಿಗಳ ಪರವಾಗಿ ವಕೀಲರಾದ ಎಸ್.ನಾಗಮುತ್ತು ಹಾಗೂ ಸಂಜಯ್ ಎಂ.ನುಲಿ ವಾದ ಮಂಡಿಸಿದರು. ಸರ್ಕಾರದ ಪರ ವಕೀಲರು, 'ಆರೋಪಿಗಳ ವಿರುದ್ಧದ ಮೊಕದ್ದಮೆ ರದ್ದುಗೊಳಿಸುವುದರಿಂದ ಮುಖ್ಯ ದೋಷಾರೋಪ ಪಟ್ಟಿಯಲ್ಲಿ ಉಲ್ಲೇಖಗೊಂಡಿರುವ ಇತರ ಐದು ಆರೋಪಿಗಳ ಪ್ರಕರಣದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಲಿದೆ' ಎಂದರು. 'ಪ್ರಕರಣದ ವಿಚಾರಣೆ ವೇಳೆ ಇವರು ಪ್ರಬಲ ಸಾಕ್ಷಿಗಳಾದ ಪಾಲರಾಜ್, ಫಾದರ್ ಜಾನ್ ಅಬ್ರಾಹಾ, ರೆವೆರೆಂಡ್ ಪ್ರೊಫೆಸರ್ ಜಾನ್ ಬಾಸ್ಕೊ ಮತ್ತಿತರ ಹೇಳಿಕೆಗಳ ಪರಿಗಣಿಸಿರುವುದು ಸರಿಯಲ್ಲ' ಎಂದು ವಾದಿಸಿದರು.

ಚರ್ಚ್ ಪರ ವಾದ ಮಂಡಿಸಿದ ವಕೀಲರು, 'ಪ್ರಕರಣ ಏಳರಿಂದ 12ನೇ ಆರೋಪಿಗಳು ಹತ್ಯೆಗೂ ಎರಡು ದಿನ ಮೊದಲು ಬೃಹತ್ ರ್ಯಾಲಿಯಲ್ಲಿ ಪಾಲ್ಗೊಂಡು ಚರ್ಚ್‌ನಿಂದ ಕನ್ನಡೇತರರನ್ನು ಹೊರಹಾಕುವ ಕುರಿತು ಭಾಷಣಗಳನ್ನು ಮಾಡಿದ್ದರು. ಜತೆಗೆ, ಈ ಸಮಯದಲ್ಲಿ ಬೈಬಲ್ ಅನ್ನು ಉಲ್ಲೇಖಿಸಿದ್ದ ಅವರು, ಸಂಪೂರ್ಣ ದೇಶ ನಾಶವಾಗುವುದಕ್ಕಿಂತ ಒಬ್ಬ ವ್ಯಕ್ತಿ ಸಾಯುವುದು ಉತ್ತಮ ಎಂಬುದಾಗಿ ಹೇಳಿದ್ದರು ಎಂದು ಸಾಕ್ಷಿಗಳು ಈಗಾಗಲೇ ಹೇಳಿಕೆ ನೀಡಿದ್ದಾರೆ' ಎಂದರು.

ಸುಳ್ಳು ದೂರು ದಾಖಲಿಸಿದ ರೂಪದರ್ಶಿ

ಬೆಂಗಳೂರು: ನಟಿ ಹಾಗೂ ರೂಪದರ್ಶಿಯೊಬ್ಬರು ಹೆಣ್ಣೂರು ಪೊಲೀಸ್ ಠಾಣೆಯಲ್ಲಿ ರ್‍ಯಾಪಿಡೊ ಬೈಕ್ ಚಾಲಕನ ವಿರುದ್ಧ ಸುಳ್ಳು ದೂರು ದಾಖಲಿಸಿದ್ದು ತನಿಖೆಯಿಂದ ತಿಳಿದುಬಂದಿದೆ.

ಅ.30ರಂದು ರಾತ್ರಿ 10.30ರ ವೇಳೆಯಲ್ಲಿ ರ್‍ಯಾಪಿಡೊ ಬೈಕ್ ಚಾಲಕನಿಂದ ಲೈಂಗಿಕ ಕಿರುಕುಳವಾಗಿದೆ. ರ್‍ಯಾಪಿಡೊ ಬೈಕ್ ಬುಕ್ ಮಾಡಿಕೊಂಡು ಬರುವಾಗ ಚಾಲಕ ಅಸಭ್ಯವಾಗಿ ವರ್ತಿಸಿ ದೇಹದ ಅಂಗಾಂಗ ಮುಟ್ಟಿದ್ದ ಎಂದು ದೂರಿದ್ದರು. ಇದರ ತನಿಖೆ ಆರಂಭಿಸಿದ್ದ ಪೊಲೀಸರಿಗೆ ಸುಳ್ಳು ದೂರು ಎಂದು ದೃಢಪಟ್ಟಿದೆ.

'ಯುವತಿ ದೂರಿದಂತೆ ಯಾವುದೇ ಘಟನೆ ನಡೆದಿಲ್ಲ. ಆ ದಿನ ರಾತ್ರಿ ರ್‍ಯಾಪಿಡೊ ಬೈಕ್ ಅನ್ನು ನಟಿ ಬುಕ್ ಮಾಡಿದ್ದರು. ಕೆಲವೇ ಕ್ಷಣಗಳಲ್ಲಿ ಬುಕ್ಕಿಂಗ್ ಕ್ಯಾನ್ಸಲ್ ಮಾಡಿದ್ದರು. ಚಾಲಕ ಅಲ್ಲಿಗೆ ಬಂದಿದ್ದಾನೆ ಎಂಬುದಕ್ಕೆ ಯಾವ ಪುರಾವೆಯೂ ಇಲ್ಲ. ಯಾವ ಕಾರಣಕ್ಕೆ ಈ ರೀತಿ ದೂರು ನೀಡಿದ್ದಾರೆ ಎಂಬುದು ಗೊತ್ತಾಗಿಲ್ಲ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಬನ್ನೇರುಘಟ್ಟ:ಆರೋಪಿಗಳ ಬಂಧನ

ಆನೇಕಲ್: ನಾಲ್ಕು ತಿಂಗಳ ಹಿಂದೆ (ಆ.19 ರಂದು) ಮೂರು ವರ್ಷದ ಬಾಲಕಿ ಅಪಹರಣಕ್ಕೆ ಯತ್ನಿಸಿ ಕೊನೆಗೆ ಆಕೆಯನ್ನು ಬನ್ನೇರುಘಟ್ಟ ಸಮೀಪದ ಕಲ್ಕೆರೆ ಅರಣ್ಯ ಪ್ರದೇಶದಲ್ಲಿ ಬಿಟ್ಟು ಪರಾರಿಯಾಗಿದ್ದ ಇಬ್ಬರು ಆರೋಪಿಗಳನ್ನು ಬನ್ನೇರುಘಟ್ಟ ಪೊಲೀಸರು ಬಂಧಿಸಿದ್ದಾರೆ.

ಎಂ.ಶರವಣ, ಆರ್.ಪ್ರಶಾಂತ್ ಬಂಧಿತ ಆರೋಪಿಗಳು. ಬಾಲಕಿಯ ಅಪಹರಣದ ಬಗ್ಗೆ ಕಲ್ಕೆರೆಯ ಮಂಜುನಾಥ ರೆಡ್ಡಿ ಅವರು ಬನ್ನೇರುಘಟ್ಟ ಪೊಲೀಸ್ ಠಾಣೆಯಲ್ಲಿ ಆ.19ರಂದು ದೂರು ನೀಡಿದ್ದರು. ತಲೆ ಮರೆಯಿಸಿಕೊಂಡಿದ್ದ ಆರೋಪಿ ಶರವಣನನ್ನು ಪೊಲೀಸರು ಮೂಡಿಗೆರೆ ತಾಲ್ಲೂಕು ಕೃಷ್ಣಾಪುರದಲ್ಲಿ ಬಂಧಿಸಿದ್ದಾರೆ. ಮತ್ತೊಬ್ಬ ಆರೋಪಿ ಪ್ರಶಾಂತ್‌ನನ್ನು ಬಿಳೇಕಳ್ಳಿಯಲ್ಲಿ ಕಳೆದ ವಾರ ಬಂಧಿಸಲಾಗಿದೆ ಎಂದು ಬೆಂಗಳೂರು ಗ್ರಾಮಾಂತರ ಎಸ್.ಪಿ ಮಲ್ಲಿಕಾರ್ಜುನ ಬಾಲದಂಡಿ ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಬನ್ನಂಜೆ ರಾಜನ ಸಹಚರನ ಜಾಮೀನು ಅರ್ಜಿ ವಜಾ

ಬೆಂಗಳೂರು: ಉದ್ಯಮಿಯೊಬ್ಬರ ಪುತ್ರನ ಅಪಹರಣ ಮಾಡಿ ಕೊಲೆ ಮಾಡುವ ಬೆದರಿಕೆ ಒಡ್ಡಿದ್ದ ಆರೋಪಕ್ಕೆ ಸಂಬಂಧಿಸಿದಂತೆ ಭೂಗತ ಪಾತಕಿ ಬನ್ನಂಜೆ ರಾಜನ ಸಹಚರ ಶಶಿಕುಮಾರ್ ಅಲಿಯಾಸ್ ಶಶಿ ಪೂಜಾರಿಗೆ ಜಾಮೀನು ನೀಡಲು ಹೈಕೋರ್ಟ್ ನಿರಾಕರಿಸಿದೆ.

ಈ ಸಂಬಂಧ ಶಶಿ ಪೂಜಾರಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ವಜಾಗೊಳಿಸಿ, 'ಆರೋಪಿಯ ವಿರುದ್ಧ ಕರ್ನಾಟಕ ಅಸಂಘಟಿತ ಅಪರಾಧ ನಿಯಂತ್ರಣ ಕಾಯ್ದೆ (ಕೋಕಾ) ಅನ್ವಯವಾಗುತ್ತದೆ' ಎಂದು ಆದೇಶಿಸಿದೆ.

ಪ್ರಕರಣವೇನು?: 2019ರ ಮಾರ್ಚ್‌ನಲ್ಲಿ ಉಡುಪಿ ಜಿಲ್ಲೆಯ ಬ್ರಹ್ಮಾವರದಲ್ಲಿ, 'ಉದ್ಯಮಿಯೊಬ್ಬರ ಪುತ್ರನನ್ನು ಅಪಹರಿಸಿ ಕೊಲೆ ಮಾಡುವ ಬೆದರಿಕೆ ಒಡ್ಡಲಾಗಿದೆ' ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಪ್ರಕರಣ ದಾಖಲಾಗಿತ್ತು.

ಈ ಸಂಬಂಧ ಉಡುಪಿ ಪೊಲೀಸರು ಶಶಿ ಪೂಜಾರಿಯನ್ನು 2019ರ ಮಾರ್ಚ್ 21ರಂದು ಬಂಧಿಸಿದ್ದರು. ತನಿಖೆ ನಡೆಸಿ ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಶಶಿ ಪೂಜಾರಿಯನ್ನು ಎರಡನೇ ಆರೋಪಿಯನ್ನಾಗಿ ಮತ್ತು ಬನ್ನಂಜೆ ರಾಜನನ್ನು ಮೊದಲನೇ ಆರೋಪಿಯನ್ನಾಗಿ ಹೆಸರಿಸಲಾಗಿತ್ತು.



ಜೆ.ಪಿ. ನಗರದ 8ನೇ ಹಂತ 2ನೇ ಬ್ಲಾಕ್ ಕೊತ್ತನೂರಿನಲ್ಲಿ ಅಕ್ರಮ ಶೆಡ್‌ಗಳನ್ನು ಬಿಡಿಎ ಬುಧವಾರ ತೆರವು ಮಾಡಿತು

ಅಕ್ರಮ ಶೆಡ್ ತೆರವು

ಬೆಂಗಳೂರು: ಜೆ.ಪಿ. ನಗರದ ಕೊತ್ತನೂರು ವ್ಯಾಪ್ತಿಯಲ್ಲಿ ಒತ್ತುವರಿ ಮಾಡಿಕೊಂಡಿದ್ದ ಒಂದು ಎಕರೆ 8 ಗುಂಟೆ ಪ್ರದೇಶವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ತನ್ನ ವಶಕ್ಕೆ ಪಡೆದುಕೊಂಡಿದೆ.

ಜೆ.ಪಿ. ನಗರದ 8ನೇ ಹಂತ 2ನೇ ಬ್ಲಾಕ್ ಕೊತ್ತನೂರ್ ವ್ಯಾಪ್ತಿಯ ಸರ್ವೇ ನಂಬರ್ 21/3ರಲ್ಲಿ ಅತಿಕ್ರಮವಾಗಿ ನಿರ್ಮಾಣ ಮಾಡಿದ್ದ 4 ಶೆಡ್‌ಗಳನ್ನು ಹಾಗೂ ನಿರ್ಮಾಣ ಹಂತದಲ್ಲಿದ್ದ ಒಂದು ಕಟ್ಟಡವನ್ನು ಬಿಡಿಎ ಜಾಗೃತ ದಳದ ಪೊಲೀಸ್ ವರಿಷ್ಠಾಧಿಕಾರಿ ನೇತೃತ್ವದಲ್ಲಿ ನೆಲಸಮಗೊಳಿಸಲಾಯಿತು.

ಈ ಸಂದರ್ಭದಲ್ಲಿ ಬಿಡಿಎ ಜಾಗೃತ ದಳದ ಪೊಲೀಸ್ ವರಿಷ್ಠಾಧಿಕಾರಿ ನಂಜುಂಡೇಗೌಡ, ಇನ್‌ಸ್ಪೆಕ್ಟರ್ ಶ್ರೀನಿವಾಸ, ಎಂಜಿನಿಯರ್ ಅಧಿಕಾರಿ ಮಲ್ಲಿಕಾರ್ಜುನ ಸ್ವಾಮಿ, ಎಂಜಿನಿಯರ್ ಸುರೇಶ್ ಮತ್ತು ಅಶೋಕ್ ಉಪಸ್ಥಿತರಿದ್ದರು.

ಕ್ಯಾಶಿಯರ್ ಆತ್ಮಹತ್ಯೆ

ಬೆಂಗಳೂರು: ಕೌಟುಂಬಿಕ ಕಲಹದಿಂದ ಬೇಸತ್ತು ಶ್ರೀನಗರದ ಆವಲಹಳ್ಳಿಯಲ್ಲಿ ಅಣ್ಣಯ್ಯ ಎಂಬುವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮಂಡ್ಯದವರಾದ ಅಣ್ಣಯ್ಯ ನಗರದ ಬಾರ್‌ವೊಂದರಲ್ಲಿ ಕ್ಯಾಶಿಯರ್ ಆಗಿದ್ದರು.

'ಅಣ್ಣಯ್ಯ 5 ವರ್ಷಗಳ ಹಿಂದೆ ಮದುವೆ ಆಗಿದ್ದು, ದುಡಿಮೆ ವಿಚಾರಕ್ಕೆ ಮನೆಯಲ್ಲಿ ಗಲಾಟೆ ನಡೆಯುತ್ತಿತ್ತು. ಇದರಿಂದ ಬೇಸತ್ತು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬ ಶಂಕೆ ಇದೆ. 'ಜೀವನದಲ್ಲಿ ನೆಮ್ಮದಿ ಇಲ್ಲ' ಎಂದು ಬರೆದಿಟ್ಟಿರುವ ಡೆತ್‌ನೋಟ್ ಸಿಕ್ಕಿದೆ ಎಂದು ಪೊಲೀಸ್ ಮೂಲಗಳು ಹೇಳಿದೆ.

ಊಟಿ ರಸ್ತೆಯ ನಿಲ್ದಾಣ ಅಕ್ರಮ: ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ

ತಂಗುದಾಣ ತೆರವಿಗೆ ನೋಟಿಸ್

ಪ್ರಜಾವಾಣಿ ವಾರ್ತೆ



ಮೈಸೂರಿನ ಊಟಿ ರಸ್ತೆಯಲ್ಲಿ ಜೆಎಸ್‌ಎಸ್ ಕಾಲೇಜು ಬಳಿ ನಿರ್ಮಿಸಿರುವ ನಿಲ್ದಾಣಕ್ಕೆ 'ಜೆಎಸ್‌ಎಸ್ ಕಾಲೇಜು ಬಸ್ ನಿಲ್ದಾಣ' ಎಂದು ಫಲಕ ಹಾಕಲಾಗಿದೆ

ಮೈಸೂರು: 'ಗುಂಬಜ್' ಮಾದರಿಯ ವಿನ್ಯಾಸದಿಂದ ವಿವಾದಕ್ಕೆ ಕಾರಣವಾಗಿರುವ ಇಲ್ಲಿನ ಊಟಿ ರಸ್ತೆಯ ಜೆಎಸ್‌ಎಸ್ ಕಾಲೇಜು ಬಳಿಯ ಬಸ್ ನಿಲ್ದಾಣವನ್ನು ಅಕ್ರಮವಾಗಿ ನಿರ್ಮಿಸಿರುವುದರಿಂದ ಏಳು ದಿನದೊಳಗೆ ತೆರವುಗೊಳಿಸಬೇಕು' ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಯೋಜನಾ ನಿರ್ದೇಶಕರು ಮಹಾನಗರ ಪಾಲಿಕೆ ಆಯುಕ್ತರು ಹಾಗೂ ಕೆಆರ್‌ಐಡಿಎಲ್ ಕಾರ್ಯನಿರ್ವಾಹಕ ಎಂಜಿನಿಯರ್‌ಗೆ ಮಂಗಳವಾರ ನೋಟಿಸ್ ಜಾರಿಗೊಳಿಸಿದ್ದಾರೆ.

'ಹೆದ್ದಾರಿಯಲ್ಲಿ ನಿರ್ಮಿಸುತ್ತಿರುವ ನಿಲ್ದಾಣದ ಕಾಮಗಾರಿ ಸ್ಥಗಿತಗೊಳಿಸುವಂತೆ ಎನ್‌ಎಚ್‌ಎಐ ಎಂಜಿನಿಯರ್‌ಗಳು ಈ ಹಿಂದೆ ಹಲವು ಬಾರಿ ಸೂಚಿಸಿದ್ದರು. ಆದರೂ ನಿರ್ಮಿಸಲಾಗಿದೆ. ಈಗ ಈ ನಿಲ್ದಾಣದ ವಿನ್ಯಾಸದ ವಿಚಾರ ಧಾರ್ಮಿಕ ವಿವಾದದ ಸ್ವರೂಪ ಪಡೆದುಕೊಂಡಿದೆ. ಇದನ್ನು ಗಂಭೀರವಾಗಿ ಪರಿಗಣಿಸಿ ಎನ್‌ಎಚ್‌ಎಐ ಕಾಯ್ದೆ ಅನ್ವಯ ಈ ನೋಟಿಸ್ ಜಾರಿಗೊಳಿಸಲಾಗಿದೆ' ಎಂದು ತಿಳಿಸಲಾಗಿದೆ.

'ಹೆದ್ದಾರಿಗೆ ಸೇರಿದ ಜಾಗವನ್ನು ಅಕ್ರಮವಾಗಿ ಒತ್ತುವರಿ ಮಾಡಿ, ನಿಲ್ದಾಣ ನಿರ್ಮಿಸಿರುವುದು ಸ್ಥಳ ಪರಿಶೀಲನೆ ವೇಳೆ ಕಂಡು ಬಂದಿದೆ. ಆದ್ದರಿಂದ, ನೋಟಿಸ್ ಜಾರಿಯಾದ ಏಳು ದಿನಗಳಲ್ಲಿ ಕಟ್ಟಡವನ್ನು ತೆರವುಗೊಳಿಸಬೇಕು. 3 ದಿನದಲ್ಲಿ ವಿವರಣೆ ನೀಡಬೇಕು' ಎಂದು ಎನ್‌ಎಚ್‌ಎಐನ ರಾಮನಗರ ವಿಭಾಗದ ಯೋಜನಾ ನಿರ್ದೇಶಕರು ನೋಟಿಸ್‌ನಲ್ಲಿ ತಿಳಿಸಿದ್ದಾರೆ.

'ಒಂದು ವೇಳೆ ಈ ಬಗ್ಗೆ ಯಾವುದೇ ನಿರ್ಧಾರ ಕೈಗೊಳ್ಳದಿದ್ದರೆ, ಎನ್‌ಎಚ್‌ಎಐ ಕಾಯ್ದೆಯಡಿ ದಂಡ ವಿಧಿಸಲಾಗುವುದು' ಎಂದು ಎಚ್ಚರಿಕೆ ನೀಡಲಾಗಿದೆ.

ಕಾಂಗ್ರೆಸ್ ಟೀಕೆ: ಬಸ್ ನಿಲ್ದಾಣದ ವಿಚಾರದಲ್ಲಿ ಶಾಸಕ ಎಸ್.ಎ.ರಾಮದಾಸ್–ಸಂಸದ ಪ್ರತಾಪ ಸಿಂಹ ನಡುವೆ ನಡೆದಿರುವ ಶೀತಲ ಸಮರವನ್ನು ಕಾಂಗ್ರೆಸ್ ಸರಣಿ ಟ್ವೀಟ್‌ಗಳ ಮೂಲಕ ಟೀಕಿಸಿದೆ.

'ಪ್ರಜಾವಾಣಿ' ವರದಿಯನ್ನು ಉಲ್ಲೇಖಿಸಿ ಟ್ವೀಟ್ ಮಾಡಿದ್ದು, 'ಬಿಜೆಪಿ ವರ್ಸಸ್ ಬಿಜೆಪಿ ಕಿಚ್ಚು ಎಷ್ಟಿದೆ ಎನ್ನಲು ಪ್ರತಾಪ ಹಾಗೂ ರಾಮದಾಸ್ ನಡುವಿನ ಕಾಳಗವೇ ಸಾಕ್ಷಿ. ಶಾಸಕರು ಕಟ್ಟಿದ ನಿಲ್ದಾಣವನ್ನು ಸಂಸದ ಒಡೆಯಲು ಹೊರಟಿದ್ದಾರೆ' ಎಂದು ಪಕ್ಷ ವ್ಯಂಗ್ಯವಾಡಿದೆ.

ಪಾಲಿಕೆಯಿಂದ ಎನ್‌ಒಸಿ ಪಡೆದ ಬಳಿಕವೇ ಸರ್ಕಾರದ ಹಣದಲ್ಲಿ ಸಾರ್ವಜನಿಕರ ಉಪಯೋಗಕ್ಕಾಗಿ ಬಸ್ ನಿಲ್ದಾಣ ನಿರ್ಮಿಸಲಾಗಿದೆ. ಯಾವುದೇ ಒತ್ತುವರಿಯಾಗಿಲ್ಲ.
ತಿಪ್ಪೇಶ್, ಕೆಆರ್‌ಐಡಿಎಲ್ ಎಂಜಿನಿಯರ್

ಜಾತಿ ಗೊತ್ತಿಲ್ಲದ ಅನಾಥ ಮಕ್ಕಳ ಶೈಕ್ಷಣಿಕ ಹಾಗೂ ಉದ್ಯೋಗದ ಕಾಳಜಿ

15 ದಿನಗಳಲ್ಲಿ ಸರ್ಕಾರಕ್ಕೆ ವರದಿ ಸಲ್ಲಿಕೆ: ಹೆಗ್ಡೆ

ಗದಗ: 'ಜಾತಿ ಗೊತ್ತಿಲ್ಲದ ಅನಾಥ ಮಕ್ಕಳ ಶೈಕ್ಷಣಿಕ ಮತ್ತು ಉದ್ಯೋಗದ ಬಗ್ಗೆ ಹಿಂದುಳಿದ ವರ್ಗಗಳ ಆಯೋಗ ಕಾಳಜಿ ವಹಿಸಿದ್ದು, ಎಲ್ಲರಂತೆ ಅವರಿಗೂ ಅವಕಾಶ ಕಲ್ಪಿಸುವ ಉದ್ದೇಶದಿಂದ ವರದಿ ತಯಾರಿಸಿದೆ. ಇನ್ನು 15 ದಿನಗಳಲ್ಲಿ ಅದನ್ನು ಸರ್ಕಾರಕ್ಕೆ ಸಲ್ಲಿಸಲಾಗುವುದು' ಎಂದು ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಜಯಪ್ರಕಾಶ್ ಹೆಗ್ಡೆ ಅವರು ತಿಳಿಸಿದರು.

ಜಿಲ್ಲಾಧಿಕಾರಿ ಕಚೇರಿಯಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, 'ಅನಾಥ ಮಕ್ಕಳಿಗೆ ಈವರೆಗೆ ಯಾವ ಮೀಸಲಾತಿಯೂ ಇಲ್ಲ. ಅವರನ್ನು ಯಾವ ಪ್ರವರ್ಗಕ್ಕೂ ಸೇರಿಸಿಲ್ಲ. ಹಾಗಾಗಿ, ಅನಾಥ ಮಕ್ಕಳ ಬಗ್ಗೆ ಆಯೋಗ ವಿಶೇಷ ಆಸ್ಥೆ ವಹಿಸಿದೆ. ಈ ಸಂಬಂಧ ರಾಜ್ಯದಲ್ಲಿರುವ ಅನಾಥ ಮಕ್ಕಳ ಸಂಖ್ಯೆ ಹಾಗೂ ಮಾಹಿತಿಯನ್ನು ಸಂಗ್ರಹಿಸಲಾಗಿದೆ' ಎಂದು ಅವರು ತಿಳಿಸಿದರು.



ಜಯಪ್ರಕಾಶ್ ಹೆಗ್ಡೆ

'ಕೋವಿಡ್–19 ನಿಂದ ತಂದೆ, ತಾಯಿಗಳನ್ನು ಕಳೆದುಕೊಂಡ ಮಕ್ಕಳು ಕೂಡ ಬಾಲಮಂದಿರದಲ್ಲಿ ಇದ್ದಾರೆ. ಆದರೆ, ಅವರಿಗೆ ತಮ್ಮ ಜಾತಿ ಯಾವುದೆಂಬುದು ತಿಳಿದಿದೆ. ಬಿಟ್ಟು ಹೋದ ಮಕ್ಕಳ ಜಾತಿ ಯಾವುದೆಂಬುದು ಯಾರಿಗೂ ಗೊತ್ತಿರುವುದಿಲ್ಲ. ಅಂತಹ ಮಕ್ಕಳಲ್ಲಿ ಅನೇಕರು ಬಾಲಮಂದಿರದಲ್ಲೇ ಶಿಕ್ಷಣ ಪಡೆದು 18 ವರ್ಷಗಳನ್ನು ಪೂರೈಸಿದ ನಂತರ ಮುಂದೇನು? ಎಂಬ ಪ್ರಶ್ನೆ ಮೂಡುತ್ತದೆ. ಹಾಗಾಗಿ, ಅವರಿಗೂ ಒಂದು ವ್ಯವಸ್ಥೆ ಕಲ್ಪಿಸುವ ಉದ್ದೇಶದಿಂದ ವರದಿ ತಯಾರಿಸಲಾಗಿದ್ದು, ಅದು ಭಾಗಶಃ ಮುಗಿಯುವ ಹಂತಕ್ಕೆ ಬಂದಿದೆ' ಎಂದು ತಿಳಿಸಿದರು.

'ಅನಾಥ ಮಕ್ಕಳಿಗೆ ಬೇರೆ ಬೇರೆ ರಾಜ್ಯಗಳಲ್ಲಿ ಯಾವ ರೀತಿಯ ಅವಕಾಶ ಕಲ್ಪಿಸಿದ್ದಾರೆ ಎಂಬುದನ್ನು ಅಧ್ಯಯನ ಮಾಡಲು ತೆಲಂಗಾಣ ಮತ್ತು ಮಹಾರಾಷ್ಟ್ರ ರಾಜ್ಯಗಳಿಗೆ ಹೋಗಿ ಬಂದಿದ್ದೇವೆ. ಕೆಲವು ರಾಜ್ಯಗಳ ವರದಿಯನ್ನು ಅಧ್ಯಯನ ಮಾಡಿದ್ದೇವೆ. ಅನಾಥ ಮಕ್ಕಳಿಗೆ ಇಂತಹ ಪ್ರವರ್ಗದಲ್ಲಿ ಶೇಕಡ ಇಂತಿಷ್ಟೇ ಮೀಸಲಾತಿ ಕೊಡಬೇಕು ಎಂದು ನಿರ್ದಿಷ್ಟವಾಗಿ ವರದಿಯಲ್ಲಿ ಬರೆಯಲಾಗುವುದು. ಈ ಮೂಲಕ ಅವರಿಗೆ ನ್ಯಾಯ ಒದಗಿಸಲಾಗುವುದು' ಎಂದು ಅವರು ತಿಳಿಸಿದರು.

ಮೂಲ ಕಾಂಗ್ರೆಸಿಗರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಿ– ಮುನಿಯಪ್ಪ

ಬೆಂಗಳೂರು: 'ಕೋಲಾರ ಕ್ಷೇತ್ರದಲ್ಲಿ ಮೂಲ ಕಾಂಗ್ರೆಸ್ ನಾಯಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದಿದ್ದರೆ ಗೆಲುವು ಕಷ್ಟ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರಿಗೆ ಕಾಂಗ್ರೆಸ್ ಮುಖಂಡ ಕೆ.ಎಚ್. ಮುನಿಯಪ್ಪ ಎಚ್ಚರಿಕೆ ನೀಡಿದ್ದಾರೆ.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಕೋಲಾರ ಕಾಂಗ್ರೆಸ್‌ನಲ್ಲಿ ಸಮಸ್ಯೆ ಇದೆ. ಅದನ್ನು ಸರಿಪಡಿಸಿಕೊಂಡು ಕೋಲಾರಕ್ಕೆ ಬಂದರೆ ಅನುಕೂಲ. ಕಳೆದ ಚುನಾವಣೆಯಲ್ಲಿ ಬಿಜೆಪಿ ಪರ ಕೆಲಸ ಮಾಡಿದವರನ್ನು ನಂಬಿಕೊಂಡು ಬಂದರೆ ಗೆಲುವು ಕಷ್ಟವಾಗಬಹುದು ಎಂದು ಸಿದ್ದರಾಮಯ್ಯ ಅವರಿಗೆ ಹೇಳಿದ್ದೇನೆ' ಎಂದರು.

'ಸಿದ್ದರಾಮಯ್ಯ ಅವರನ್ನು ಸೋಲಿಸಲು ಕಾಂಗ್ರೆಸ್ ನಲ್ಲಿ ಯಾರೂ ಸಂಚು ಮಾಡುತ್ತಿಲ್ಲ. ಆದರೆ, ಅವರು ಕಾಂಗ್ರೆಸ್ ನಿಷ್ಠರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ಕಳೆದ ಬಾರಿ ಬಿಜೆಪಿಗೆ ಕೆಲಸ ಮಾಡಿದವರ ಮುಂದಾಳತ್ವದಲ್ಲಿ ಚುನಾವಣೆ ಎದುರಿಸಿದರೆ ಗೆಲುವು ಕಷ್ಟ' ಎಂದರು.

ಕೋಲಾರಕ್ಕೆ ಸಿದ್ದರಾಮಯ್ಯ ಹೋಗಿದ್ದಾಗ ಗೈರಾದ ಬಗ್ಗೆ ಪ್ರತಿಕ್ರಿಯಿಸಿದ ಮುನಿಯಪ್ಪ, 'ಗುಜರಾತ್‌ನಲ್ಲಿ ಚುನಾವಣಾ ಕೆಲಸ ಇತ್ತು. ಅವರ ಜೊತೆ ಮಾತಾಡಿದ್ದೇನೆ' ಎಂದರು.

ದೇವನಹಳ್ಳಿ ಕ್ಷೇತ್ರದಿಂದ ಸ್ಪರ್ಧಿಸಲು ಬಯಸಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಹೈಕಮಾಂಡ್ ಹೇಳಿದರೆ ಸ್ಪರ್ಧಿಸುತ್ತೇನೆ' ಎಂದರು.

ಸ್ಪರ್ಧಾ ವಾಣಿ





ಬ್ಯಾಂಕಿಂಗ್ ಕ್ಷೇತ್ರದಲ್ಲಿ ಸ್ಪೆಷಲ್ ಆಫೀಸರ್ಸ್ ಹುದ್ದೆಗಳು

ಮೂರು ಹಂತಗಳ ಪರೀಕ್ಷೆ

ಬ್ಯಾಂಕಿಂಗ್ ಕ್ಷೇತ್ರದಲ್ಲಿ 'ಸ್ಪೆಷಲ್ ಆಫೀಸರ್ಸ್' ಹುದ್ದೆಗಳ ನೇಮಕಾತಿಗಾಗಿ ಅರ್ಜಿ ಆಹ್ವಾನಿಸಿದ್ದು, ಆಯ್ಕೆ ಪ್ರಕ್ರಿಯೆಯಲ್ಲಿ ನಡೆಯುವ ಪರೀಕ್ಷೆಗಳ ಕುರಿತ ಪೂರ್ಣ ವಿವರ ಇಲ್ಲಿದೆ.

ಆರ್.ಕೆ. ಬಾಲಚಂದ್ರ

ಬ್ಯಾಂಕಿಂಗ್ ಕ್ಷೇತ್ರದಲ್ಲಿ ಮಾಹಿತಿ ತಂತ್ರಜ್ಞಾನ (ಐ.ಟಿ.), ಕಾನೂನು, ಮಾರುಕಟ್ಟೆ ಸೇರಿದಂತೆ ವಿವಿಧ ವಿಭಾಗಗಳಿಗೆ ವಿಶೇಷ ಅಧಿಕಾರಿಗಳನ್ನು (ಸ್ಪೆಷಲ್ ಆಫೀಸರ್ಸ್) ನೇಮಕ ಮಾಡಿಕೊಳ್ಳುವ ಪ್ರಕ್ರಿಯೆ ಆರಂಭವಾಗಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಕಳೆದ ಸಂಚಿಕೆಯಲ್ಲಿ 'ಸ್ಪೆಷಲ್ ಆಫೀಸರ್ಸ್' ಹುದ್ದೆಗಳ ಭರ್ತಿಗಾಗಿ, ದೇಶದ 11 ಬ್ಯಾಂಕ್‌ಗಳು ಅರ್ಜಿ ಆಹ್ವಾನಿಸಿರುವ ಕುರಿತು ಮಾಹಿತಿ ನೀಡಲಾಗಿತ್ತು. ಅರ್ಜಿ ಸಲ್ಲಿಕೆ, ಆಯ್ಕೆಯ ವಿಧಾನಗಳ ಬಗ್ಗೆಯೂ ವಿವರಿಸಲಾಗಿತ್ತು.

ಈ ಸಂಚಿಕೆಯಲ್ಲಿ ನೇಮಕಾತಿಯ ವಿವಿಧ ಹಂತಗಳು, ಪರೀಕ್ಷೆಗಳು, ಪ್ರಶ್ನೆ ಪತ್ರಿಕೆಗಳು, ಅಂಕಗಳು ಹಾಗೂ ನೇಮಕಾತಿ ಪ್ರಕ್ರಿಯೆ ಹೇಗೆ ನಡೆಯುತ್ತದೆ ಎಂಬುದರ ಬಗ್ಗೆ ಮಾಹಿತಿ ನೀಡಲಾಗುತ್ತಿದೆ.

ಒಟ್ಟು ಮೂರು ಹಂತಗಳಲ್ಲಿ ಪರೀಕ್ಷೆಗಳು ನಡೆಯುತ್ತವೆ. ಪೂರ್ವಭಾವಿ ಪರೀಕ್ಷೆ, ಮುಖ್ಯ ಪರೀಕ್ಷೆ ಮತ್ತು ಸಂದರ್ಶನ, ಇವೇ ಆ ಹಂತಗಳು.

ಪೂರ್ವಭಾವಿ ಪರೀಕ್ಷೆ

ಇದು 2 ಗಂಟೆ ಅವಧಿಯ ಪರೀಕ್ಷೆ. ಮೂರು ವಿವಿಧ ವಿಷಯಗಳ ಮೇಲೆ ಪ್ರಶ್ನೆ ಪತ್ರಿಕೆಗಳಿರುತ್ತವೆ. ಪ್ರತಿ ಪತ್ರಿಕೆಗೂ 40 ನಿಮಿಷಗಳು ಸಿಗುತ್ತವೆ. ಮೂರು ಪತ್ರಿಕೆಗಳಲ್ಲಿ 125 ಅಂಕಗಳಿಗೆ 150 ಪ್ರಶ್ನೆಗಳನ್ನು ಕೇಳಲಾಗುತ್ತದೆ. ಇದರಲ್ಲಿ ಇಂಗ್ಲಿಷ್ ಭಾಷೆಗೆ 50, ಕ್ವಾಂಟಿಟೇಟಿವ್ ಅಪ್ಟಿಟ್ಯೂಡ್ ಪರೀಕ್ಷೆಗೆ 50 ಹಾಗೂ ರೀಸನಿಂಗ್ ಎಬಿಲಿಟಿ ಪರೀಕ್ಷೆಗೆ 50 ಪ್ರಶ್ನೆಗಳಿರಲಿವೆ. (ಇದು ರಾಜ್‌ಭಾಷಾ ಅಧಿಕಾರಿ ಹಾಗೂ ಲಾ ಆಫೀಸರ್ ಹುದ್ದೆಗಳಿಗೆ ಹೊರತಾಗಿ, ಇವೆರಡೂ ಹುದ್ದೆಗಳಿಗೆ ಕ್ವಾಂಟಿಟೇಟಿವ್ ಅಪ್ಟಿಟ್ಯೂಡ್ ಪರೀಕ್ಷೆಗೆ ಬದಲಾಗಿ ಬ್ಯಾಂಕಿಂಗ್ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಜನರಲ್ ಅವೇರ್‌ನೆಸ್ ವಿಷಯಕ್ಕೆ ಸಂಬಂಧಿಸಿದಂತೆ 50 ಪ್ರಶ್ನೆಗಳಿರಲಿವೆ). ಪ್ರತಿ ಪರೀಕ್ಷೆಯಲ್ಲೂ ಕನಿಷ್ಠ ಅಂಕ ಗಳಿಸಬೇಕೆಂಬ ನಿಯಮವಿದೆ. ಅದರೆ ಒಟ್ಟಾರೆ ಹೆಚ್ಚು ಅಂಕಗಳಿಸುವುದು ಮುಖ್ಯ.

ಈ ಪರೀಕ್ಷೆಯಲ್ಲಿ ಉತ್ತೀರ್ಣರಾದವರು ಮುಂದಿನ ಹಂತದ ಅಂದರೆ ಮುಖ್ಯ ಪರೀಕ್ಷೆಗೆ ಅರ್ಹತೆ ಪಡೆಯುತ್ತಾರೆ. ಮುಖ್ಯ ಪರೀಕ್ಷೆಯು ಬೆಂಗಳೂರು ಹಾಗೂ ಹುಬ್ಬಳ್ಳಿಯಲ್ಲಿ ಮಾತ್ರ ನಡೆಯಲಿದ್ದು, ನಿಗದಿತ ದಿನದಂದು ಆನ್ ಲೈನ್‌ನಲ್ಲಿಯೇ ಪರೀಕ್ಷೆ ನಡೆಯಲಿದೆ.

ಮುಖ್ಯ ಪರೀಕ್ಷೆ

ಮುಖ್ಯ ಪರೀಕ್ಷೆಯು ವೃತ್ತಿಪರ ಜ್ಞಾನಕ್ಕೆ ಸಂಭಂದಿಸಿದ್ದಾಗಿದೆ. 45 ನಿಮಿಷಗಳ ಅವಧಿಯ ಪರೀಕ್ಷೆ ಇದು. ಇದರಲ್ಲಿ 60 ಅಂಕಗಳಿಗೆ 60 ಪ್ರಶ್ನೆಗಳನ್ನು ಕೇಳಲಾಗುತ್ತದೆ. ರಾಜ್‌ಭಾಷಾ ಅಧಿಕಾರಿಗಳ ಹುದ್ದೆಗಳಿಗೆ ಎರಡು ಹಂತಗಳಲ್ಲಿ ಡಿಸ್ಕ್ರಿಪ್ಟಿವ್ ಮಾದರಿಯ ಪರೀಕ್ಷೆಗಳು ನಡೆಯಲಿವೆ. ಒಂದು ವೃತ್ತಿಪರ ಜ್ಞಾನಕ್ಕೆ ಸಂಬಂಧಿಸಿದ 45 ಪ್ರಶ್ನೆಗಳಿರುತ್ತವೆ. ಇವು ವಸ್ತುನಿಷ್ಠ ಪರೀಕ್ಷೆಯ (ಆಬ್ಜೆಕ್ಟಿವ್) ಮಾದರಿಯಲ್ಲಿರುತ್ತವೆ. ಇದೇ ವಿಷಯಕ್ಕೆ ಸಂಬಂಧಿಸಿದ ಇನ್ನೊಂದು ವಿವರಣಾತ್ಮಕ(ಡಿಸ್ಕ್ರಿಪ್ಟಿವ್) ಪತ್ರಿಕೆಯ ಮಾದರಿಯಲ್ಲಿ ಎರಡು ಪ್ರಶ್ನೆಗಳಿರುತ್ತವೆ. ಎರಡೂ ಪರೀಕ್ಷೆಗೆ ತಲಾ 30 ನಿಮಿಷಗಳಂತೆ, ಒಂದು ಗಂಟೆಯ ಅವಧಿ ನೀಡಲಾಗಿರುತ್ತದೆ. ಅಭ್ಯರ್ಥಿಗಳು ಕಂಪ್ಯೂಟರ್‌ನಲ್ಲಿಯೇ ಉತ್ತರವನ್ನು ಬರೆಯಬೇಕು.

ಒಂದಿಷ್ಟು ಬದಲಾವಣೆ

ಈ ಬಾರಿ ಮುಖ್ಯ ಪರೀಕ್ಷೆಯಲ್ಲಿ ಒಂದಿಷ್ಟು ಬದಲಾವಣೆ ಮಾಡಲಾಗಿದ್ದು, ಅಭ್ಯರ್ಥಿಗಳು ವೃತ್ತಿಪರ ಜ್ಞಾನಕ್ಕೆ ಸಂಬಂಧಿಸಿದ ಪರೀಕ್ಷೆ ಬರೆಯಬೇಕು (ಸ್ಪೆಷಲಿಸ್ಟ್ ಹುದ್ದೆಗಳಾಗಿರುವುದರಿಂದ).

ಇಂಗ್ಲಿಷ್ ಭಾಷೆ ಹೊರತುಪಡಿಸಿ ಮತ್ತೆಲ್ಲಾ ಪ್ರಶ್ನೆಗಳು ಇಂಗ್ಲಿಷ್ ಮತ್ತು ಹಿಂದಿಯಲ್ಲಿ ಇರುತ್ತವೆ. ತಪ್ಪು ಉತ್ತರ ಗುರುತಿಸಿದರೆ, ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಳಲ್ಲಿ ಆಯಾ ವಿಷಯಕ್ಕೆ ಪ್ರತಿ ಪ್ರಶ್ನೆಗೆ ನಿಗದಿ ಪಡಿಸಿದ ಅಂಕದ 0.25 ಅಂಕವನ್ನು ಋಣಾತ್ಮಕ ಮೌಲ್ಯಮಾಪನದ ನಿಯಮದಂತೆ ಗಳಿಸಿದ ಅಂಕದಿಂದ ಕಳೆಯಲಾಗುತ್ತದೆ.

ಮೂರನೇ ಹಂತಕ್ಕೆ ಅರ್ಹತೆ

ಮುಖ್ಯ ಪರೀಕ್ಷೆಗಳಲ್ಲಿ ಬ್ಯಾಂಕ್ ನಿಗದಿಪಡಿಸಿದಷ್ಟು ಅಂಕ ಪಡೆದವರು ಮಾತ್ರ ಮೂರನೇ ಹಂತಕ್ಕೆ ಅರ್ಹರಾಗುತ್ತಾರೆ. ಇವುಗಳಿಗೆ ಬೇಕಾಗುವ ಕನಿಷ್ಠ ಅರ್ಹತಾ ಅಂಕಗಳನ್ನು ಬ್ಯಾಂಕ್ ನಿರ್ಧರಿಸುತ್ತದೆ.

ಮೂರನೇ ಹಂತದಲ್ಲಿ ಬ್ಯಾಂಕ್, ಆಯ್ಕೆಯಾದ ಅಭ್ಯರ್ಥಿಗಳ ಸಂದರ್ಶನ (100 ಅಂಕಗಳು) ನಡೆಸಲಿದೆ. ಸಂದರ್ಶನದ ಸಂದರ್ಭದಲ್ಲಿ ಒಬಿಸಿ ವರ್ಗದ ಅಡಿಯಲ್ಲಿ 3ನೇ ಹಂತಕ್ಕೆ ಅರ್ಹತೆ ಪಡೆದ ಅಭ್ಯರ್ಥಿಗಳು ಒಬಿಸಿ ಪ್ರಮಾಣಪತ್ರವನ್ನು 'ಕೆನೆರಹಿತ ಪದರ'('Non-Creamy layer') ಷರತ್ತು ಒಳಗೊಂಡಿರುವುದನ್ನು ಸಲ್ಲಿಸಬೇಕಾಗುತ್ತದೆ. ಒಬಿಸಿ ಎಂದು ನೋಂದಾಯಿಸಿಕೊಂಡಿರುವ ಆದರೆ ('Non-Creamy layer')'ಕೆನೆರಹಿತ ಪದರ' ಪ್ರಮಾಣಪತ್ರವನ್ನು ಸಲ್ಲಿಸದಿದ್ದಲ್ಲಿ ಅವರನ್ನು ಸಾಮಾನ್ಯ ವರ್ಗದ ಅಡಿಯಲ್ಲಿ ಸಂದರ್ಶನಕ್ಕೆ ಅವಕಾಶ ನೀಡಲಾಗುವುದಿಲ್ಲ.

ಆರ್ಥಿಕ ದುರ್ಬಲ ವರ್ಗದ(EWS) ಅಡಿಯಲ್ಲಿ 3ನೇ ಹಂತಕ್ಕೆ ಅರ್ಹತೆ ಪಡೆದ ಅಭ್ಯರ್ಥಿಗಳು ಆರ್ಥಿಕ ವರ್ಷದ ಒಟ್ಟು ವಾರ್ಷಿಕ ಆದಾಯದ ಆಧಾರದ ಮೇಲೆ EWS ಪ್ರಮಾಣಪತ್ರವನ್ನು ಸಲ್ಲಿಸಬೇಕು. ಪ್ರಮಾಣಪತ್ರ ಸಲ್ಲಿಸದಿದ್ದಲ್ಲಿ ಅಂತಹವರನ್ನು ಸಾಮಾನ್ಯ ವರ್ಗದ ಅಡಿಯಲ್ಲಿ ಸಂದರ್ಶನಕ್ಕೆ ಅವಕಾಶ ನೀಡಲಾಗುವುದಿಲ್ಲ.

ಆಯ್ಕೆ ಪಟ್ಟಿ

ಅಂತಿಮ ಸುತ್ತಿಗೆ ಆಯ್ಕೆಯಾದ ಅಭ್ಯರ್ಥಿಗಳು 2ನೇ ಹಂತಕ್ಕೆ ಪ್ರತ್ಯೇಕವಾಗಿ ಅರ್ಹತೆ ಪಡೆದಿರಬೇಕು. ಮುಖ್ಯ ಪರೀಕ್ಷೆಯಲ್ಲಿ ಪಡೆದ ಅಂಕಗಳು (ಹಂತ- 2), ವಸ್ತುನಿಷ್ಠ ಪರೀಕ್ಷೆ ಮತ್ತು ವಿವರಣಾತ್ಮಕ ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ಹಾಗೂ 3ನೇ ಹಂತದಲ್ಲಿ ಪಡೆದ ಅಂಕಗಳಿಗೆ ಸೇರಿಸಲಾಗುತ್ತದೆ. ಅರ್ಹತೆ ಪಟ್ಟಿಗೆ ಪ್ರಾಥಮಿಕ ಪರೀಕ್ಷೆಯಲ್ಲಿ (ಹಂತ -1) ಪಡೆದ ಅಂಕಗಳನ್ನು ಪರಿಗಣಿಸುವುದಿಲ್ಲ.

ಅಭ್ಯರ್ಥಿಗಳು 2ನೇ ಹಂತದಲ್ಲಿ ಪಡೆದಿರುವ ಅಂಕಗಳಲ್ಲಿ (60 ಅಂಕಗಳನ್ನು 100 ಕ್ಕೆ ಪರಿವರ್ತನೆ ಮಾಡಿ) ಶೇ 80 ಅಂಕಗಳು ಮತ್ತು 3ನೇ ಹಂತದಲ್ಲಿ ಪಡೆದ ಅಂಕಗಳಲ್ಲಿ (100 ಅಂಕಗಳಲ್ಲಿ) ಶೇ 20 ಅಂಕಗಳನ್ನು ಸೇರಿಸಿ (100 ರಲ್ಲಿ) ಪರಿವರ್ತಿತ ಅಂಕಗಳನ್ನು ಒಟ್ಟು ಸೇರಿಸಿ ನಂತರ ಅಂತಿಮ ಅರ್ಹತಾ ಪಟ್ಟಿಯನ್ನು ತಯಾರಿಸಲಾಗುತ್ತದೆ.

ಹಂತ- 2 ಮತ್ತು ಹಂತ- 3 ರಲ್ಲಿ ಉನ್ನತ ಶ್ರೇಣಿಯನ್ನು ಪಡೆದ ಅಭ್ಯರ್ಥಿಗಳನ್ನು ಮಾತ್ರ ಆಯ್ಕೆ ಮಾಡಲಾಗುವುದು.

ಕಳೆದ ಸಂಚಿಕೆಯ ಲೇಖನಕ್ಕೆ https://www.prajavani.net/education-career/career/need-special-officers-for-bank-987161.html ಲಿಂಕ್ ನೋಡಿ. ನೇಮಕಾತಿ ಕುರಿತ ಅಧಿಸೂಚನೆಗಾಗಿ https://bit.ly/3frUh70 ಮಾಹಿತಿ ಹಾಗೂ ಅರ್ಜಿ ಸಲ್ಲಿಕೆಗೆ www.ibps.in ಭೇಟಿ ನೀಡಬಹುದು.

(ಲೇಖಕರು: ಬ್ಯಾಂಕಿಂಗ್ ಮತ್ತು ವ್ಯಕ್ತಿತ್ವ ವಿಕಸನ ತರಬೇತುದಾರರು, ವೃತ್ತಿ ಮಾರ್ಗದರ್ಶಕರು, ಮಡಿಕೇರಿ)

ಆರ್ಥಿಕ ದುರ್ಬಲ ವರ್ಗಗಳಿಗೆ ಮೀಸಲಾತಿ(ಇಡಬ್ಲ್ಯುಎಸ್)

ಯು.ಟಿ. ಆಯಿಶ ಫರ್ಝಾನ

ಆರ್ಥಿಕ ದುರ್ಬಲ ವರ್ಗದವರಿಗೆ(Economically Weaker Section-EWS) ಶಿಕ್ಷಣ ಮತ್ತು ಸರ್ಕಾರಿ ಉದ್ಯೋಗ ನೇಮಕಾತಿಯಲ್ಲಿ ಶೇ 10 ರಷ್ಟು ಮೀಸಲಾತಿ ನೀಡುವ ಸಂವಿಧಾನದ 103ನೇ ತಿದ್ದುಪಡಿಯನ್ನು ಸುಪ್ರೀಂ ಕೋರ್ಟ್ ಎತ್ತಿಹಿಡಿದು ಬಹುಮತದ ತೀರ್ಪು ನೀಡಿದೆ. ಬಹುಮತದ ತೀರ್ಪು ತಿದ್ದುಪಡಿಯ ಪರವಾಗೇ ಇದ್ದ ಕಾರಣ, ತಿದ್ದುಪಡಿ ಪ್ರಶ್ನಿಸಿ ಸಲ್ಲಿಸಲಾಗಿದ್ದ 40ಕ್ಕೂ ಹೆಚ್ಚು ಅರ್ಜಿಗಳನ್ನು ವಜಾ ಮಾಡಲಾಗಿದೆ.

ಇಡಬ್ಲ್ಯುಎಸ್ ಮೀಸಲಾತಿ

ದೇಶದಲ್ಲಿ 70 ವರ್ಷಗಳಿಂದಲೂ ಮೀಸಲಾತಿ ಪರ-ವಿರೋಧದ ಚರ್ಚೆ ನಿರಂತರವಾಗಿ ನಡೆಯುತ್ತಾ ಬಂದಿದೆ. ಹಿಂದುಳಿದ ಜಾತಿಗಳಿಗೆ ಮೀಸಲಾತಿ ನೀಡುವ ಮಂಡಲ್ ವರದಿ ಜಾರಿಯಾದಾಗ ಅದನ್ನು ವಿರೋಧಿಸಿ ದೊಡ್ಡ ಹೋರಾಟ ನಡೆದಿತ್ತು.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರವು 2019ರ ಲೋಕಸಭಾ ಚುನಾವಣೆಗೂ ಮೊದಲು ಸಂವಿಧಾನ ತಿದ್ದುಪಡಿಯ ಮೂಲಕ ಆರ್ಥಿಕವಾಗಿ ದುರ್ಬಲರಾದ ಮೇಲ್ಜಾತಿ ಎಂದು ಕರೆಯಲ್ಪಡುವ ಸಮುದಾಯಗಳಿಗೆ (EWS) ಉದ್ಯೋಗ ಮತ್ತು ಶಿಕ್ಷಣದಲ್ಲಿ ಶೇ 10ರಷ್ಟು ಮೀಸಲಾತಿ ನೀಡುವುದಾಗಿ ಘೋಷಿಸಿತ್ತು.

> ಯಪಿಎಸ್‌ಸಿ -ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ- 2, ಕೆಪಿಎಸ್‌ಸಿ -ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ-2 ಮತ್ತು ಇತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಗತ್ಯವಿರುವ ಪ್ರಚಲಿತ ಮಾಹಿತಿ ಇಲ್ಲಿದೆ

ಮಾನದಂಡವೇನು ?

ಈ ಆರ್ಥಿಕವಾಗಿ ಹಿಂದುಳಿದ ಬಡವರು ಯಾರು ಎಂಬ ಪ್ರಶ್ನೆಗೆ '₹8 ಲಕ್ಷಕ್ಕಿಂತ ಕಡಿಮೆ ವಾರ್ಷಿಕ ಆದಾಯ ಮತ್ತು 5 ಎಕರೆಗಿಂತ ಕಡಿಮೆ ಜಮೀನು ಮತ್ತು 1000 ಚದರ ಅಡಿಗಿಂತ ಕಡಿಮೆ ವಿಸ್ತೀರ್ಣದ ಮನೆ ಹೊಂದಿರಬೇಕು' ಎಂಬ ಮಾನದಂಡವನ್ನು ಕೇಂದ್ರ ಸರ್ಕಾರ ನಿಗದಿ ಮಾಡಿದೆ.

ಇದು ಸಂವಿಧಾನದ ಮೂಲ ಆಶಯಗಳಿಗೆ ವಿರುದ್ಧವಾಗಿದೆ ಎಂದು ಆರೋಪಿಸಿ ನ್ಯಾಯಾಲಯದಲ್ಲಿ ನೂರಾರು ಅರ್ಜಿಗಳು ಸಲ್ಲಿಕೆಯಾಗಿದ್ದವು. ಈಗ ಅವೆಲ್ಲವನ್ನೂ ವಜಾಗೊಳಿಸಲಾಗಿದೆ.

ಈ ಮೀಸಲಾತಿ ಜಾರಿಗೊಳಿಸುವಾಗ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಮೀಸಲಾತಿ ಪಟ್ಟಿಯಲ್ಲಿ ವ್ಯತ್ಯಾಸಗಳು ಇರುವುದರಿಂದ ಅದಕ್ಕೆ ಅನುಗುಣವಾಗಿಯೇ ಮೀಸಲಾತಿಯಲ್ಲೂ ವ್ಯತ್ಯಾಸಗಳು ಉಂಟಾಗುತ್ತವೆ.

ಸಾಂವಿಧಾನಿಕ ತಿದ್ದುಪಡಿ

ಸಂಸತ್ತಿನಲ್ಲಿ ಅಂಗೀಕಾರವಾದ ಮೂಲ ಸಂವಿಧಾನ ತಿದ್ದುಪಡಿ ಮಸೂದೆಯ (THE CONSTITUTION (ONE HUNDRED AND TWENTY-FOURTH AMENDMENT) BILL, 2019) ಪ್ರಕಾರ ಇದು ನಮ್ಮ ಸಂವಿಧಾನಕ್ಕೆ ಮಾಡುತ್ತಿರುವ 103ನೇ ತಿದ್ದುಪಡಿ. ಈ ಮೂಲಕ ಸಂವಿಧಾನದ 15ನೇ ವಿಧಿಯಲ್ಲಿ ಈಗಾಗಲೇ 5 ಅನುಚ್ಛೇದ(clause)ಗಳಿದ್ದು ಅದರಲ್ಲಿ ಈಗ 6ನೇ ಅನುಚ್ಛೇದವನ್ನು ಸೇರಿಸಲಾಗಿದೆ. ಜೊತೆಗೆ ಸಂವಿಧಾನದ 16ನೇ ವಿಧಿಗೂ ತಿದ್ದುಪಡಿ ಮಾಡಲಾಗಿದೆ. ಅದರ ಸಾರಾಂಶ ಹೀಗಿದೆ;

ಆ ಪ್ರಕಾರ 4 ಮತ್ತು 5ನೇ ಅನುಚ್ಛೇದಗಳಲ್ಲಿರುವ ಸಮುದಾಯಗಳನ್ನು ಹೊರತುಪಡಿಸಿ ಉಳಿದವರಿಗೆ ಉದ್ಯೋಗ ಮತ್ತು ಶಿಕ್ಷಣದಲ್ಲಿ ಶೇ 10ರಷ್ಟು ಮೀಸಲಾತಿ ನೀಡುವ ಪ್ರಸ್ತಾಪವಿದೆ.

4 ಮತ್ತು 5ನೇ ಅನುಚ್ಛೇದಗಳಲ್ಲಿರುವ ಸಮುದಾಯಗಳನ್ನು ಹೊರತುಪಡಿಸಿದ ಸಮುದಾಯಗಳೆಂದರೆ, ಅನುಸೂಚಿತ ಜಾತಿಗಳು (Scheduled castes - SCs), ಅನುಸೂಚಿತ ಬುಡಕಟ್ಟುಗಳು ((Scheduled Tribes -STs) ಮತ್ತು ಹಿಂದುಳಿದ ವರ್ಗಗಳು (Other Backword Castes -OBCs). ಈ ಮೂರು ವಿಭಾಗಗಳ ಸಮುದಾಯಗಳನ್ನು ಹೊರತುಪಡಿಸಿ ಉಳಿದವರಿಗೆ ಈ ಶೇ 10 ಮೀಸಲಾತಿ ಸೌಲಭ್ಯ ದೊರಕಲಿದೆ.

ಕರ್ನಾಟಕದಲ್ಲಿ ಈ ಮೀಸಲಾತಿ ಹೇಗೆ ಅನ್ವಯಿಸುತ್ತದೆ ?

ಪ್ರಸಕ್ತ ಸುಪ್ರೀಂ ಕೋರ್ಟ್ ತೀರ್ಪಿನಲ್ಲಿ, 'ಇದುವರೆಗೆ ಯಾವ ಜಾತಿಯ ಜನರು ಯಾವುದೇ ಬಗೆಯ ಮೀಸಲಾತಿಯ ಪಟ್ಟಿಯಲ್ಲಿ ಸೇರ್ಪಟ್ಟಿಲ್ಲವೋ ಅಂತಹ ಜಾತಿಯ ಆರ್ಥಿಕವಾಗಿ ಹಿಂದುಳಿದವರಿಗೆ ಈ ಶೇ10 ಮೀಸಲಾತಿಯು ಅನ್ವಯಿಸುತ್ತದೆ' ಎಂದು ತಿಳಿಸಲಾಗಿದೆ.

ಈ ಮೀಸಲಾತಿಯ ಅಡಿಯಲ್ಲಿ ಸೌಲಭ್ಯ ಪಡೆಯುವ ಜಾತಿಗಳು ಒಂದೊಂದು ರಾಜ್ಯದಲ್ಲಿ ಒಂದೊಂದು ರೀತಿಯಾಗಿವೆ.

ಕರ್ನಾಟಕದಲ್ಲಿ ಈ ಮೀಸಲಾತಿಗೆ ಅರ್ಹರಾಗಿರುವ ಕೆಲವು ಜಾತಿಗಳಿದ್ದು ಅವು ಪ್ರಧಾನವಾಗಿ ಬ್ರಾಹ್ಮಣರು,ಆರ್ಯವೈಶ್ಯರು, ನಾಯರ್ ಮತ್ತು ಮೊದಲಿಯಾರ್ ಮತ್ತು ಕೆಲ ಸಣ್ಣ ಸಮೂಹಗಳು ಮಾತ್ರ. ರಾಜ್ಯದ ಜನಸಂಖ್ಯೆಯಲ್ಲಿ ಈ ಎಲ್ಲಾ ಜಾತಿಗಳ ಶೇಕಡಾವಾರು ಪ್ರಮಾಣ ಶೇಕಡಾ 5 ನ್ನೂ ಮೀರುವುದಿಲ್ಲ.

ಮೀಸಲಾತಿ ಒಂದು ಹಿನ್ನೋಟ

ಮಂಡಲ್ ಆಯೋಗದ ನಂತರ ದೇಶದಾದ್ಯಂತ ಮೀಸಲಾತಿ ವಿರುದ್ಧ ಗಲಭೆಗಳು ನಡೆದಿದ್ದು 2006ರಲ್ಲಿ.

ಅಂದಿನ ಯುಪಿಎ ಸರ್ಕಾರ ಹಿಂದುಳಿದ ವರ್ಗಗಳಿಗೆ ಉನ್ನತ ಶಿಕ್ಷಣದಲ್ಲಿ ಶೇ 27 ಮೀಸಲಾತಿ ನೀಡುವ ಕಾಯ್ದೆ ತರಲು ಹೊರಟಾಗ ಮತ್ತೆ ಟೀಕೆಗಳು ಕೇಳಿ ಬಂದಿದ್ದವು.

ದೇಶದ ಜನಸಂಖ್ಯೆಯಲ್ಲಿ ಶೇ 70ರಷ್ಟಿರುವ ಹಿಂದುಳಿದ ಜಾತಿಗಳಿಗೆ ಶೇ 27 ಮೀಸಲಾತಿ ನೀಡುವುದು 'ಪ್ರತಿಭೆಗೆ ಮಾಡುವ ಅನ್ಯಾಯ' ಎಂಬ ಮಾತುಗಳು ಕೇಳಿಬಂದಿದ್ದವು.

ವಿವಾದಗಳು ಮತ್ತು ಗೊಂದಲಗಳು

ದೇಶದ ಜನಸಂಖ್ಯೆಯ ಶೇ 90ರಷ್ಟು ಸಮುದಾಯಗಳಿಗೆ ಮೀಸಲಾತಿಯನ್ನು ಶೇ 50ಕ್ಕೆ ಮಾತ್ರ ಮಿತಿಗೊಳಿಸಿರುವ ಸುಪ್ರೀಂ ಕೋರ್ಟ್ ತೀರ್ಪಿನ ಬಗ್ಗೆಯೂ ಆಕ್ಷೇಪಗಳಿವೆ. ಈಗ ಇಡಬ್ಲ್ಯೂಎಸ್‌ಗೆ ಶೇ 10ರಷ್ಟು ಮೀಸಲಾತಿ ನೀಡಿದ ನಂತರ ಸುಪ್ರೀಂ ಕೋರ್ಟ್ ತೀರ್ಪಿನ ಉಲ್ಲಂಘನೆಯಾಗುವುದಿಲ್ಲವೇ? ಎಂಬ ಪ್ರಶ್ನೆಯೂ ಕೇಳಿಬಂದಿತ್ತು. ಈ ಪ್ರಶ್ನೆಗೆ ಇತ್ತೀಚೆಗೆ ಉತ್ತರಿಸಿದ್ದ ಕೇಂದ್ರ ಕಾನೂನು ಸಚಿವ ರವಿಶಂಕರ್ ಪ್ರಸಾದ್ 'ಸುಪ್ರೀಂ ತೀರ್ಪಿನ ಉಲ್ಲಂಘನೆಯಾಗುವುದಿಲ್ಲ'ಎಂದು ಹೇಳಿದ್ದರು. ಮೀಸಲಾತಿಯ ಪ್ರಮಾಣ ಶೇ 50ಕ್ಕಿಂತ ಹೆಚ್ಚಿರಬಾರದು ಎಂದು ಸಂವಿಧಾನವೇನೂ ಹೇಳಿಲ್ಲ, ಅದನ್ನು ಹೇಳಿದ್ದು ಕೋರ್ಟ್ ಎಂಬುದು ಅವರ ವಾದ.

ಅಲ್ಲದೇ ಸುಪ್ರೀಂ ಕೋರ್ಟ್ ಹೇಳಿದ್ದು 'ಹಿಂದುಳಿದ ವರ್ಗಗಳಿಗೆ (ಎಸ್.ಸಿ, ಎಸ್.ಟಿ ಮತ್ತು ಒಬಿಸಿ) ನೀಡಲಾಗುವ ಮೀಸಲಾತಿ ಪ್ರಮಾಣ ಶೇ 50ಕ್ಕಿಂತ ಹೆಚ್ಚಿರಬಾರದು ಎಂದಿದೆ. ಈಗ ನೀಡುತ್ತಿರುವ ಶೇ 10 ರಷ್ಟು ಮೀಸಲಾತಿ ಅವರಿಗಲ್ಲ. ಅದು ಮುಂದುವರೆದವರಿಗಾಗಿ, ಮುಂದುವರೆದ ಸಮುದಾಯಗಳ ಬಡವರಿಗಾಗಿ. ಹಾಗಾಗಿ, ಅದು ಸುಪ್ರೀಂ ಕೋರ್ಟ್‌ನ ತೀರ್ಪು ಉಲ್ಲಂಘನೆಯಾಗುವುದಿಲ್ಲ' ಎಂದೂ ಕೆಲವರು ವಾದಿಸುತ್ತಾರೆ.

ಕರ್ನಾಟಕದಲ್ಲಿ ಮೀಸಲಾತಿ

ಈ ಕಾನೂನಿನ ಪ್ರಕಾರ ಮೀಸಲಾತಿ ಘೋಷಣೆಯಾದಲ್ಲಿ ಮೀಸಲಾತಿಯ ಪ್ರಮಾಣ ಶೇ 66 ಹಾಗೂ ಜನರಲ್ ಕೆಟಗರಿಯ ಪ್ರಮಾಣ ಶೇ 34 ಆದಂತೆ ಆಗುತ್ತದೆ.ಈಗ ಶೇ 66ರಷ್ಟು ಮೀಸಲಾತಿಯಲ್ಲಿ ಯಾವ ಸಮುದಾಯಕ್ಕೆ ಎಷ್ಟು ಸಿಗುತ್ತದೆ ಎಂದು ನಾವು ಕಂಡುಕೊಳ್ಳಬೇಕು. ಒಂದು ರಾಜ್ಯದ ಉದಾಹರಣೆ ತೆಗೆದುಕೊಂಡರೆ ಈ ವಿಷಯವನ್ನು ಇನ್ನಷ್ಟು ಸುಲಭವಾಗಿ ಅರ್ಥೈಸಿಕೊಳ್ಳಬಹುದು. ಒಂದೊಮ್ಮೆ ಕರ್ನಾಟಕದಲ್ಲಿ ಈ ಮೀಸಲಾತಿ ಜಾರಿಯಾದರೆ, ಅದರ ಹಂಚಿಕೆ ಪ್ರಮಾಣ ಈ ಕೆಳಕಂಡಂತಿರುತ್ತದೆ.

ಜಾತಿ	ಹಾಲಿ ಮೀಸಲಾತಿ ಪ್ರಮಾಣ (ಶೇಕಡಾವಾರು)	ಕರ್ನಾಟಕದಲ್ಲಿ EWS ಮೀಸಲಾತಿ ಅನ್ವಯವಾದರೆ(ಶೇಕಡಾವಾರು)
ಎಸ್.ಸಿ	17	17
ಎಸ್.ಟಿ	7	7
ಒಬಿಸಿ *	32	32
ಇಡಬ್ಲ್ಯುಎಸ್		10
ಒಟ್ಟು	56 + ಜನರಲ್ ಕೆಟಗರಿ 44	66 + ಜನರಲ್ ಕೆಟಗರಿ 34

*ಒಬಿಸಿ (ಪ್ರವರ್ಗ 1, ಶೇ 4 + ಪ್ರವರ್ಗ 2ಎ, ಶೇ 15 + ಪ್ರವರ್ಗ 2ಬಿ, ಶೇ 4 + ಪ್ರವರ್ಗ 3ಎ, ಶೇ 4 + ಪ್ರವರ್ಗ 3ಬಿ, ಶೇ 5 = ಶೇ 32)

ಪರೀಕ್ಷೆಯ ಯಶಸ್ಸಿಗೆ ಸೃಜನಶೀಲ ಸಂವಹನ

ಪರೀಕ್ಷೆಗಳಲ್ಲಿ ಸಂವಹನ ಕೌಶಲ ಭಾಗ–5

ಡಾ. ನಿರಂಜನ ವಾನಳ್ಳಿ

> ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಸಂವಹನದ ದೃಷ್ಟಿಯಿಂದ ಉತ್ತರಗಳು ಅಭ್ಯರ್ಥಿಯ ಸೃಜನ ಶೀಲತೆಯನ್ನು ಎತ್ತಿ ತೋರಿಸುವಂತಿರಬೇಕು. ಉತ್ತರಗಳು ಸಮರ್ಥವಾಗಿ ಸಂವಹನ ಗೊಳ್ಳುವಂತಿದ್ದರೆ, ಅಷ್ಟೇ ಸಾಕು.


ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಸಂವಹನದ ದೃಷ್ಟಿಯಿಂದ ಉತ್ತರಗಳು ಹೇಗಿರಬೇಕು ಎಂಬ ಪ್ರಶ್ನೆಗೆ ಅವು ನಿಮ್ಮ ಸೃಜನಶೀಲತೆಯನ್ನು ಎತ್ತಿ ತೋರಿಸುವಂತಿರಬೇಕು ಎಂಬುದೇ ಸರಿಯಾದ ಉತ್ತರವೇನೊ.

ಯಾವುದೇ ಪರೀಕ್ಷೆಗಳಲ್ಲಿ ಉತ್ತರಗಳನ್ನು ಬರೆಯುವವರು ಸಾಮಾನ್ಯವಾಗಿ ಒಂದು ಚೌಕಟ್ಟಿಗೆ ಬದ್ಧರಾಗಿ ರುತ್ತಾರೆ. ಎಲ್ಲಾ ಉತ್ತರಗಳಲ್ಲೂ ಇದನ್ನೇ ನೋಡುವಾಗ ಪರೀಕ್ಷಕನಿಗೆ ರೇಜಿಗೆಯಾಗುತ್ತದೆ. ಕೆಲವರು ಮೊದಲಿಗೆ ಪ್ರಶ್ನೆಯನ್ನೂ ಬರೆದು 'ಉತ್ತರ' ಎಂಬ ಶೀರ್ಷಿಕೆ ಕೊಟ್ಟು ಉತ್ತರ ಆರಂಭಿಸುತ್ತಾರೆ! ಇದು ಅನಗತ್ಯ ಮಾತ್ರವಲ್ಲ ಜಾಗ ಮತ್ತು ಸಮಯದ ದಂಡ. ಸಾವಿರಾರು ಉತ್ತರ ಪತ್ರಿಕೆಗಳನ್ನು ತಿದ್ದುವವರಿಗೆ ಮೊದಲ ನೋಟಕ್ಕೇ ಇದು ಸಾಮಾನ್ಯ ಉತ್ತರ ಎನಿಸಿಬಿಡುತ್ತದೆ. ಆಗ ನಿಮಗೆ ಸಾಮಾನ್ಯ ಅಂದರೆ ಮಧ್ಯಮ ಅಂಕಗಳು ಮಾತ್ರ ಬರುತ್ತವೆ. ಕೆಲವರು 'ಪೀಠಿಕೆ' ಎಂದು ಬರೆದು ಉತ್ತರ ಆರಂಭಿಸುತ್ತಾರೆ ನಂತರ 'ವಿವರಣೆ' ಎನ್ನುತ್ತಾರೆ ಕೊನೆಗೆ 'ಉಪಸಂಹಾರ'ವೂ ಇರುತ್ತದೆ. ಉತ್ತರದಲ್ಲಿ ಈ ವಿಭಜನೆಗಳೇ ನಿಮ್ಮ ಮಟ್ಟವನ್ನು ಜರ್ರನೆ ಹೈಸ್ಕೂಲು ಮಟ್ಟಕ್ಕೆ ಇಳಿಸಿಬಿಡುತ್ತವೆ. ಉತ್ತರಗಳಲ್ಲಿ ಪೀಠಿಕೆ, ಮುಕ್ತಾಯ ಎಲ್ಲವೂ ನೀವು ಬಯಸುವಂತೇ ಇರಲಿ. ಆದರೆ ಅವುಗಳನ್ನು ಪ್ರತ್ಯೇಕವಾಗಿಸಿ ಹೇಳುವ ಅಗತ್ಯವಿದೆಯೇ?

ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಗೆಲ್ಲುವ ಉಪಾಯವೆಂದರೆ ತೀರಾ ಕಡಿಮೆ ಸಮಯ ಇರುವಾಗಲೂ ನಿಮ್ಮ ಉತ್ತರಗಳಲ್ಲಿ ಸೃಜನಶೀಲತೆಯ ಹೊಳಹು ಕೊಡುವುದು. ಅಂದರೆ ಇತರರು ಸಾಮಾನ್ಯವಾಗಿ ಬರೆಯುವ ರೀತಿಯಿಂದ ಹಾಗೂ ಯೋಚನಾ ಸರಣಿಗಿಂತ ಭಿನ್ನವಾಗಿ, ಅನನ್ಯವಾಗಿ ತೋರಿಸಿಕೊಳ್ಳುವುದು. ಆಗ ನಿಮಗೆ ಇತರರಿಗಿಂತ ಹೆಚ್ಚು ಅಂಕಗಳು ಬರುವ ಸಾಧ್ಯತೆ ಹೆಚ್ಚು.

ಪುನರುಕ್ತಿ ತಪ್ಪಿಸಿ

ನಿಮ್ಮ ಉತ್ತರಗಳು ಈ ತಪ್ಪುಗಳನ್ನು ಮಾಡದಿರುವುದು ಒಳಿತು. ಉದಾಹರಣೆಗೆ ಒಳ್ಳೆಯ ಬರವಣಿಗೆ ಯಲ್ಲಿ ಪುನರುಕ್ತಿ ಇರುವುದಿಲ್ಲ. ಪುನರುಕ್ತಿ ಅಂದರೆ ಬರೆದಿದ್ದನ್ನೇ ಬರೆಯುವುದು. ಸಂವಹನದಲ್ಲಿ ಒಂದು ಪ್ಯಾರಾದಲ್ಲಿ ಒಮ್ಮೆ ಬಳಸಿದ ಪದವನ್ನು ಮತ್ತೆ ಮತ್ತೆ ಬಳಸುವುದು ಒಳ್ಳೆಯದಲ್ಲ ಎನ್ನುತ್ತೇವೆ. ನಮಗೆ ಗೊತ್ತಿಲ್ಲದೇ ಭಾಷಣದಲ್ಲೂ ಬರವಣಿಗೆಯಲ್ಲೂ ಒಂದೇ ಪದವನ್ನು ಹಲವು ಬಾರಿ ಬಳಸುವುದನ್ನು ರೂಢಿ ಮಾಡಿಕೊಂಡಿರುತ್ತೇವೆ. ಇಲ್ಲೊಬ್ಬರು 'ಅಷ್ಟೇ ಅಲ್ಲದೇ' ಎಂಬುದನ್ನು ಪ್ರತಿವಾಕ್ಯಕ್ಕೂ ಸೇರಿಸುತ್ತಾರೆ. ಈ ಪುನರುಕ್ತಿ ತಲೆ ಚಿಟ್ಟುಹಿಡಿಸಿಬಿಡುತ್ತದೆ. 'ಮತ್ತು' ಅಥವಾ 'ಹಾಗೂ' - ಎರಡು ವಾಕ್ಯಗಳನ್ನು ಜೋಡಿಸುವ ಪದಗಳು. ಇವುಗಳ ಅತಿಬಳಕೆ ಕೂಡಾ ಅಪಾಯಕಾರಿ. ಕೆಲವರು ಮತ್ತು, ಮತ್ತು ಎನ್ನುತ್ತಾ ವಾಕ್ಯಗಳನ್ನು ದೀರ್ಘ ಮಾಡುತ್ತಾ ಹೋಗುತ್ತಾರೆ. ಒಂದು ಪ್ಯಾರಾದಲ್ಲಿ ಒಂದೇ ವಾಕ್ಯವಿರಬೇಕು ಎಂದು ಹಟತೊಟ್ಟವರಂತೆ ಬರೆಯುತ್ತಾರೆ. ಇದು ಬರವಣಿಗೆಯ ಅಂದ ಕೆಡಿಸುತ್ತದೆ. ನೀವು ಬರೆದದ್ದು ಓದಬಹುದು ಆದರೆ ಅರ್ಥ ಮಾಡಿಕೊಳ್ಳುವುದು ಕಷ್ಟ ಎಂಬ ಪರಿಸ್ಥಿತಿ ನಿರ್ಮಾಣಮಾಡುತ್ತದೆ.



ಪಾಂಡಿತ್ಯದ ಶಬ್ದ ಬೇಡ

ಇನ್ನು ಕೆಲವರಿಗೆ ದೊಡ್ಡ ದೊಡ್ಡ ಶಬ್ದಗಳನ್ನು ಬಳಸುವ ಚಟ. ಇವನ್ನು ಯಾವ ಶಬ್ದಕೋಶದಿಂದ ಹುಡುಕಿ ತಂದರೋ ಎಂದು ಆಶ್ಚರ್ಯವಾಗುತ್ತದೆ. ಎಷ್ಟೋ ಬಾರಿ ಅವುಗಳಿಗೆ ಅಲ್ಲಿ ಅರ್ಥವೇ ಇರುವುದಿಲ್ಲ. ಅನಗತ್ಯ ವಾಗಿ ಒಂದು ಪದವನ್ನೂ ಬಳಸದಿರುವುದು ಭಾಷೆಯನ್ನು ಚುರುಕಾಗಿಸುತ್ತದೆ. ಸಂವಹನದ ಸಾಧ್ಯತೆಯನ್ನು ಹೆಚ್ಚಿಸುತ್ತದೆ. ಪರೀಕ್ಷೆಯಲ್ಲಿ ಗಡಿಬಿಡಿಯಲ್ಲಿ ಉತ್ತರ ಬರೆಯುವಾಗಲೂ ಅನಗತ್ಯವಾಗಿ ದೀರ್ಘವಾಗಿಸದ ಎಚ್ಚರಿಕೆ ಬೇಕು. ಸುಮ್ಮನೇ ಪುಟ ತುಂಬಿಸಲು ಏನೇನೋ ಬರೆದಿದ್ದಾರೆ ಎಂಬ ಅಭಿಪ್ರಾಯ ಮೌಲ್ಯಮಾಪಕರಲ್ಲಿ ಸುಳಿಯಬಾರದು. ಉತ್ತರಗಳು ಆದಷ್ಟು ಹ್ರಸ್ವವಾಗಿರಬೇಕು ಎಂಬುದು ನಿಜ. ಆದರೆ ಎಂಬುದು ಸಂವಹನದ ಮೂಲ ತತ್ವಗಳಲ್ಲಿ ಒಂದು. ಹ್ರಸ್ವವಾಗಿಸುವ ಹುಚ್ಚಿನಲ್ಲಿ ಸ್ಪಷ್ಟತೆಯನ್ನು ಬಲಿಕೊಡಬಾರದು.

ಅಂಡರ್‌ಲೈನ್ ಅನಗತ್ಯ

ಉತ್ತರಪತ್ರಿಕೆಗಳಲ್ಲಿ ಮೌಲ್ಯಮಾಪಕನಿಗೆ ಇರಿಸುಮುರಿಸು ಉಂಟುಮಾಡುವುದು ಎಲ್ಲಾ ವಾಕ್ಯಗಳನ್ನು ಅಂಡರ್‌ಲೈನ್ ಮಾಡುವ ಹುಚ್ಚು. ಯಾವುದೋ ವಿಶೇಷ ವಾಕ್ಯವಿದ್ದಾಗ ಮೌಲ್ಯಮಾಪಕರನ್ನು ಸೆಳೆಯಲು ಅಕ್ಷರಗಳ ಕೆಳಗೆ ಗೆರೆ ಎಳೆದರೆ ಒಪ್ಪೋಣ. ಆದರೆ ಎಲ್ಲಾ ವಾಕ್ಯಗಳಿಗೂ ಅಂಡರ್ ಲೈನ್ ಹಾಕಿದರೆ ಏನೆನಿಸುತ್ತದೆ? ಪರೀಕ್ಷಕ ಓದುವುದಿಲ್ಲ, ಆ ಸೂಕ್ಷ್ಮತೆ ಅವನಲ್ಲಿಲ್ಲ ಎಂಬ ತೀರ್ಮಾನದಿಂದ ಗೆರೆ ಎಳೆದು ಅವರನ್ನು ಆಕರ್ಷಿಸುವ ಹುನ್ನಾರ ಇದು ಎಂಬ ಅರ್ಥ ನೀಡದೇ? ಹೀಗೆ ಪ್ರತಿಯೊಂದೂ ವಾಕ್ಯವನ್ನೂ ಅಂಡರ್‌ಲೈನ್ ಮಾಡುವುದು 'ತೋಳ ಬಂತು ತೋಳ' ಕತೆಯನ್ನು ಜ್ಞಾಪಿಸುತ್ತದೆ. ನಿಜವಾಗಿಯೂ ಒಳ್ಳೆಯ ಅಂಶಗಳಿದ್ದು ಆ ಒಂದು ವಾಕ್ಯ ಪರೀಕ್ಷಕನನ್ನು ಸೆಳೆಯಲೇ ಬೇಕು ಎಂಬುದು ನಿಮ್ಮ ಉದ್ದೇಶವಾಗಿದ್ದರೆ, ಈ ಅಂಡರ್‌ಲೈನ್‌ಗಳ ಕಾರಣದಿಂದ ಆ ವಾಕ್ಯ ಪರೀಕ್ಷಕನ ಗಮನ ಸೆಳೆಯದೇ ಹೋಗಬಹುದು. ಉತ್ತರಗಳಿಗೆ ಅಂಡರ್‌ಲೈನ್ ಮಾಡುವ ಅಭ್ಯಾಸ ಅನಗತ್ಯ. ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಎಲ್ಲ ಪ್ರಶ್ನೆಗಳಿಗೂ ತಪ್ಪದೇ ಉತ್ತರ ನೀಡುವುದು ಬಹಳ ಮುಖ್ಯ. ತಪ್ಪು ಉತ್ತರ ನೀಡದಿರುವುದೂ ಅಷ್ಟೇ ಮುಖ್ಯ. ಹಾಗೆಯೇ ನಮ್ಮ ಉತ್ತರಗಳು ಸಮರ್ಥವಾಗಿ ಸಂವಹನಗೊಳ್ಳುವದು ನಿರ್ಣಾಯಕ ಅಂಶ.

(ಲೇಖಕರು: ಸಂವಹನ ಪ್ರಾಧ್ಯಾಪಕರು ಮತ್ತು ಕುಲಪತಿ, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಕೋಲಾರ)

ದೂರು ವಾಪಸ್‌ಗೆ ಶರಣರಿಂದ ಹಣ: ತನಿಖೆಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ಮೈಸೂರು: 'ಚಿತ್ರದುರ್ಗ ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರಿಂದ ಲೈಂಗಿಕ ಶೋಷಣೆಗೆ ಒಳಗಾದ ಬಾಲಕಿಯು ನೀಡಿರುವ ಗುರುತರ ಮಾಹಿತಿಯನ್ನು ಆಧರಿಸಿ ತನಿಖೆ ನಡೆಸಬೇಕು' ಎಂದು ಕೋರಿ ಒಡನಾಡಿ ಸೇವಾ ಸಂಸ್ಥೆಯು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗಕ್ಕೆ ಬುಧವಾರ ಪತ್ರ ಬರೆದಿದೆ.

'ಸದ್ಯ ಒಡನಾಡಿಯಲ್ಲಿ ಆಶ್ರಯ ಪಡೆದಿರುವ ಸಂತ್ರಸ್ತ ಬಾಲಕಿಯು ಆಪ್ತಸಮಾಲೋಚನೆ ವೇಳೆ ಮುಖ್ಯ ಮಾಹಿತಿ ಹಂಚಿಕೊಂಡಿದ್ದಾಳೆ. ಚಿತ್ರದುರ್ಗದ ಮಕ್ಕಳ ಕಲ್ಯಾಣ ಸಮಿತಿಯ ಸುಪರ್ದಿಯಲ್ಲಿದ್ದಾಗ ಜೊತೆಗಾರ್ತಿ ಹಾಗೂ ದೌರ್ಜನ್ಯಕ್ಕೆ ಒಳಗಾದ ಬಾಲಕಿಗೆ ಒಂದು ದಿನ ಸಂಜೆ ಆಕೆಯ ತಂದೆ ಬಾಲಭವನದ ದೂರವಾಣಿಗೆ ಕರೆ ಮಾಡಿದ್ದರು. ಅಲ್ಲಿನ ಸಿಬ್ಬಂದಿಯು, ಲೌಡ್‌ಸ್ಪೀಕರ್ ಆನ್ ಮಾಡಿ ಮಾತನಾಡಿಸಿದ್ದರು. 'ಸ್ವಾಮಿಗಳು ನಮ್ಮನ್ನು ನೋಡಿಕೊಂಡಿದ್ದಾರೆ; ಹಣವನ್ನೂ ಕೊಟ್ಟಿದ್ದಾರೆ. ನೀನು ಯಾವ ಕೇಸನ್ನೂ ಮುಂದುವರಿಸುವುದು ಬೇಡ. ದೂರು ವಾಪಸ್ ತೆಗೆದುಕೊಂಡು ಬಂದು ಬಿಡು' ಎಂದು ಗೆಳತಿಯ ತಂದೆಯು ಹೇಳಿದ್ದನ್ನು ಕೇಳಿಸಿಕೊಂಡಿದ್ದೇನೆ ಎಂದು ತಿಳಿಸಿದ್ದಾಳೆ' ಎಂದು ಪತ್ರದಲ್ಲಿ ತಿಳಿಸಲಾಗಿದೆ.

'ಮಕ್ಕಳ ಮೇಲೆ ನಡೆದಿರುವ ಹೀನ ಲೈಂಗಿಕ ದೌರ್ಜನ್ಯ ಪ್ರಕರಣಗಳನ್ನು ಹಣದ ಆಮಿಷ ಒಡ್ಡಿ ಮುಚ್ಚಿ ಹಾಕಲು ಆರೋಪಿ ಯತ್ನಿಸುತ್ತಿರುವುದು ಇದರಿಂದ ಸ್ಪಷ್ಟವಾಗುತ್ತಿದೆ. ಆದ್ದರಿಂದ ಪತ್ರವನ್ನು ಗಂಭೀರವಾಗಿ ಪರಿಗಣಿಸಿ ಆಯೋಗದ ಮೂಲಕ ವಿಶೇಷ ತನಿಖಾ ಸಮಿತಿ ರಚಿಸಬೇಕು. ಚಿತ್ರದುರ್ಗ ಸಿಡಬ್ಲ್ಯುಸಿಯ ಅಧ್ಯಕ್ಷರು, ಸಿಬ್ಬಂದಿ, ಶೋಷಣೆಗೆ ಒಳಪಟ್ಟ ಮಕ್ಕಳನ್ನು ಹಾಗೂ ಆ ಹುಡುಗಿಯ ತಂದೆ ಹಾಗೂ ಚಿಕ್ಕಪ್ಪನನ್ನು ವಿಚಾರಣೆಗೆ ಒಳಪಡಿಸಬೇಕು ಎಂದು ಕೋರಲಾಗಿದೆ' ಎಂದು ಸಂಸ್ಥೆಯ ನಿರ್ದೇಶಕ ಪರಶುರಾಮ್ ಎಂ.ಎಲ್. 'ಪ್ರಜಾವಾಣಿ'ಗೆ ತಿಳಿಸಿದರು.

ಕಬ್ಬಿಗೆ ನ್ಯಾಯಯುತ ದರ ನಿಗದಿಗೆ ಆಗ್ರಹ • ಮುಧೋಳ ಬಂದ್, 19ರವರೆಗೆ ನಿಷೇಧಾಜ್ಞೆ ಜಾರಿ

ಬೆಳಗಾವಿ: ಸಕ್ಕರೆ ಆಯುಕ್ತರ ಕಚೇರಿಗೆ ಮುತ್ತಿಗೆ

ಪ್ರಜಾವಾಣಿ ವಾರ್ತೆ



ಬಾಗಲಕೋಟೆ ಜಿಲ್ಲೆಯ ಮುಧೋಳದ ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ ಬುಧವಾರ ಕಬ್ಬಿಗೆ ದರ ನಿಗದಿಪಡಿಸುವಂತೆ ಆಗ್ರಹಿಸಿ ರೈತರು ಪ್ರತಿಭಟನೆ ನಡೆಸಿದರು

ಮುಧೋಳ (ಬಾಗಲಕೋಟೆ)/ ಬೆಳಗಾವಿ: ಪ್ರತಿ ಟನ್ ಕಬ್ಬಿಗೆ ನ್ಯಾಯಯುತ ದರ ನಿಗದಿ ಮಾಡಬೇಕು ಎಂದು ಆಗ್ರಹಿಸಿ ರೈತರು ಬುಧವಾರ ಪ್ರತಿಭಟನೆ ನಡೆಸಿದರು.

ಬೆಳಗಾವಿಯಲ್ಲಿ ಪ್ರತಿ ಟನ್ ಕಬ್ಬಿಗೆ ₹ 5,500 ದರ ನೀಡಬೇಕು ಎಂದು ಆಗ್ರಹಿಸಿ, ರೈತರು ಇಲ್ಲಿನ ಸಕ್ಕರೆ ಆಯುಕ್ತರ ಕಚೇರಿಗೆ ಮುತ್ತಿಗೆ ಹಾಕಿದರು. ಈ ವೇಳೆ ಪೊಲೀಸರು ಹಾಗೂ ರೈತ ಮುಖಂಡರ ನಡುವೆ ವಾಗ್ವಾದ ಉಂಟಾಯಿತು. ಹತ್ತಕ್ಕೂ ಹೆಚ್ಚು ರೈತರನ್ನು ಪೊಲೀಸರು ವಶಕ್ಕೆ ಪಡೆದರು.

ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಜಿಲ್ಲಾ ಘಟಕದ ಕಾರ್ಯಕರ್ತರು ಸಕ್ಕರೆ ಆಯುಕ್ತರಿಗೆ ಮನವಿ ಸಲ್ಲಿಸಲು ಬಂದಾಗ ಕಚೇರಿಯಲ್ಲಿ ಅಧಿಕಾರಿ ಇರಲಿಲ್ಲ. ಇದರಿಂದ ಕೆರಳಿದ ರೈತರು ಕಚೇರಿಗೆ ಬೀಗ ಹಾಕಲು ಮುಂದಾದರು. ಆಗ ಪೊಲೀಸರು ಅವರನ್ನು ತಡೆದರು. ಈ ವೇಳೆ ಪೊಲೀಸರು ಹಾಗೂ ರೈತರ ಮಧ್ಯೆ ತಳ್ಳಾಟ– ನೂಕಾಟ ಉಂಟಾಯಿತು.

ಕೆಲ ಕಾರ್ಯಕರ್ತರು ಆಯುಕ್ತರ ಕಚೇರಿ ಫಲಕಕ್ಕೆ ಸೆಗಣಿ ಬಳಿಯಲು ಮುಂದಾದರು. ಮತ್ತೆ ಕೆಲವರು ಆವರಣದಲ್ಲಿದ್ದ ಮಣ್ಣನ್ನು ಕಚೇರಿಗೆ ಎಸೆದರು. ಕಚೇರಿ ಬಾಗಿಲಿಗೆ ಹಸಿರು ಟವಲ್ ಕಟ್ಟಿ ಘೋಷಣೆ ಮೊಳಗಿಸಿದರು. ರೈತ ಸಂಘದ ಅಧ್ಯಕ್ಷ ಚೂನಪ್ಪ ಪೂಜಾರಿ, ಸೇರಿದಂತೆ ಎಲ್ಲ ರೈತ ಮುಖಂಡರನ್ನು ವಶಕ್ಕೆ ಪಡೆದ ಪೊಲೀಸರು ವಾಹನದಲ್ಲಿ ಕರೆದೊಯ್ದರು.

ಮುಧೋಳ ಬಂದ್: ಪ್ರತಿ ಟನ್ ಕಬ್ಬಿಗೆ ₹2,900 ನೀಡಬೇಕು ಎಂದು ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರುಸೇನೆ ಮುಖಂಡರು ಬುಧವಾರ ನಡೆಸಿದ ಮುಧೋಳ ಬಂದ್ ಸಂಪೂರ್ಣ ಯಶಸ್ವಿಯಾಯಿತು. ಬಸ್ ಸಂಚಾರ ಸಂಪೂರ್ಣವಾಗಿ ಸ್ಥಗಿತಗೊಂಡಿದ್ದು, ಅಂಗಡಿಗಳು ಮುಚ್ಚಿದ್ದವು.

ಇಲ್ಲಿನ ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ ರೈತರು ಪ್ರತಿಭಟನೆ ನಡೆಸುತ್ತಿದ್ದು, ಮುಧೋಳ ಹಾಗೂ ಲೋಕಾಪುರದಲ್ಲಿ ಬೆಳಿಗ್ಗೆಯಿಂದಲೇ ವಾಹನಗಳ ಸಂಚಾರ ಸ್ಥಗಿತಗೊಂಡಿತ್ತು. ಮಹಾಲಿಂಗಪುರ ಹಾಗೂ ಜಮಖಂಡಿಯಲ್ಲಿಯೂ ಕೆಲಕಾಲ ರಸ್ತೆ ತಡೆ ನಡೆಸಲಾಯಿತು.

ತಾಲ್ಲೂಕಿನ ಹಲವು ಹಳ್ಳಿಗಳಲ್ಲಿಯೂ ರಸ್ತೆಗಳಲ್ಲಿ ಮರದ ದಿಮ್ಮಿ, ಮುಳ್ಳು ಕಂಟಿ ಹಾಕಿ ಸಂಚಾರ ಬಂದ್ ಮಾಡಲಾಗಿದೆ. ರೈತರ ಹೋರಾಟ ಬೆಂಬಲಿಸಿ ಮುಧೋಳ ವಕೀಲರ ಸಂಘದ ಸದಸ್ಯರು ನ್ಯಾಯಾಲಯದ ಕಲಾಪಗಳಿಂದ ದೂರ ಉಳಿದು ಬೆಂಬಲ ವ್ಯಕ್ತಪಡಿಸಿದ್ದಾರೆ.

ನಿಷೇಧಾಜ್ಞೆ: ಕಾನೂನು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಮುಂಜಾಗ್ರತಾ ಕ್ರಮವಾಗಿ ನ.16 ಬೆಳಿಗ್ಗೆಯಿಂದ ನ.19ರ ಮಧ್ಯರಾತ್ರಿಯವರೆಗೆ ಮುಧೋಳ ತಾಲ್ಲೂಕಿನಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

ಮುಖ್ಯಮಂತ್ರಿ ಅಣಕು ಶವಯಾತ್ರೆ

ಮಂಡ್ಯ: 'ಕಬ್ಬಿಗೆ ನ್ಯಾಯಯುತ ದರ ನೀಡುವಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾತು ತಪ್ಪಿದ್ದಾರೆ' ಎಂದು ಆರೋಪಿಸಿ ರೈತ ಸಂಘದ ಸದಸ್ಯರು ಮುಖ್ಯಮಂತ್ರಿಯ ಅಣಕು ಶವಯಾತ್ರೆ ನಡೆಸಿ ಪ್ರತಿಭಟಿಸಿದರು.

'ಟನ್ ಕಬ್ಬಿಗೆ ₹ 4,500 ಎಫ್‌ಆರ್‌ಪಿ, ಲೀಟರ್ ಹಾಲಿಗೆ ₹ 40 ದರ ನಿಗದಿಪಡಿಸಬೇಕು' ಎಂದು ಒತ್ತಾಯಿಸಿ ರೈತ ಸಂಘದವರು ನಡೆಸುತ್ತಿರುವ ಹೋರಾಟ 10ನೇ ದಿನಕ್ಕೆ ತಲುಪಿದ್ದು, ಬೆಂಗಳೂರು– ಮೈಸೂರು ರಾಷ್ಟ್ರೀಯ ಹೆದ್ದಾರಿ ತಡೆದು ಬಳಿಕ ಜಿಲ್ಲಾಧಿಕಾರಿ ಕಚೇರಿಗೆ ಮುತ್ತಿಗೆ ಹಾಕಿದರು.

ಸಂಜಯ ವೃತ್ತದಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಅಣಕು ಶವಯಾತ್ರೆ ನಡೆಸಿದರು. ಕಬ್ಬು ತುಂಬಿದ ಟ್ರ್ಯಾಕ್ಟರ್‌ಗಳು, ಎತ್ತಿನ ಗಾಡಿಗಳು, ಜನುವಾರುಗಳನ್ನು ರಾಷ್ಟ್ರೀಯ ಹೆದ್ದಾರಿಯಲ್ಲಿ ನಿಲ್ಲಿಸಿದ್ದರಿಂದ ಅರ್ಧ ಗಂಟೆವರೆಗೆ ವಾಹನಗಳ ಸಂಚಾರ ಅಸ್ತವ್ಯಸ್ತಗೊಂಡಿತ್ತು.

'2 ತಿಂಗಳ ಹಿಂದೆಯೇ ಪ್ರತಿಭಟನೆ ನಡೆಸಿದ್ದೆವು, ಆಗ ಸಭೆ ನಡೆಸಿದ್ದ ಮುಖ್ಯಮಂತ್ರಿ ತಿಂಗಳೊಳಗೆ ಸಿಹಿ ಸುದ್ದಿ ನೀಡುವ ಭರವಸೆ ಕೊಟ್ಟಿದ್ದರು. ಆದರೆ, ಅದನ್ನು ಉಳಿಸಿಕೊಂಡಿಲ್ಲ. 10 ದಿನಗಳಿಂದ ಅಹೋರಾತ್ರಿ ಪ್ರತಿಭಟನೆ ನಡೆಸುತ್ತಿದ್ದರೂ ಯಾವೊಬ್ಬ ಜನಪ್ರತಿನಿಧಿಯೂ ನಮ್ಮ ಅಹವಾಲು ಕೇಳಿಲ್ಲ. ಹೀಗಾಗಿ ಹೋರಾಟ ತೀವ್ರಗೊಳಿಸಿದ್ದೇವೆ' ಎಂದು ರೈತ ಸಂಘ ರಾಜ್ಯ ಘಟಕದ ಸಂಘಟನಾ ಕಾರ್ಯದರ್ಶಿ ಎಸ್.ಸಿ.ಮಧುಚಂದನ್ ತಿಳಿಸಿದರು.

ಸಂಕ್ಷಿಪ್ತ ಸುದ್ದಿ

ಜೆಡಿಎಸ್ 'ಪಂಚರತ್ನ' ನಾಳೆ ಪುನರಾರಂಭ

ಕೋಲಾರ: ಮಳೆಯ ಕಾರಣ ಮುಂದೂಡಲಾಗಿದ್ದ ಜೆಡಿಎಸ್‌ನ 'ಪಂಚರತ್ನ' ರಥಯಾತ್ರೆ ಶುಕ್ರವಾರ (ನ.18) ಜಿಲ್ಲೆಯ ಮುಳಬಾಗಿಲು ನಗರದಿಂದ ಪುನರಾರಂಭವಾಗಲಿದೆ.

ಅದೇ ದಿನ ಬೃಹತ್ ಸಮಾವೇಶ ಆಯೋಜಿಸಲಾಗಿದ್ದು, ನೂರು ಅಭ್ಯರ್ಥಿಗಳ ಮೊದಲ ಪಟ್ಟಿ ಬಿಡುಗಡೆ ಮಾಡುವ ಸಾಧ್ಯತೆ ಇದೆ. ಸಮಾವೇಶಕ್ಕೆ ಒಂದೂವರೆ ಲಕ್ಷಕ್ಕೂ ಅಧಿಕ ಜನ ಸೇರಲಿದ್ದಾರೆ ಎಂದು ಜೆಡಿಎಸ್ ಹೇಳಿದೆ.

'ಮಧ್ಯಾಹ್ನ 1 ಗಂಟೆಗೆ ಆರಂಭವಾಗಲಿರುವ ಸಮಾವೇಶಕ್ಕೆ ಪಕ್ಷದ ವರಿಷ್ಠ ಎಚ್‌.ಡಿ. ದೇವೇಗೌಡ ಚಾಲನೆ ನೀಡಲಿದ್ದಾರೆ. ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ, ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ. ಇಬ್ರಾಹಿಂ ಪಾಲ್ಗೊಳ್ಳಲಿದ್ದಾರೆ' ಎಂದು ಜೆಡಿಎಸ್ ಜಿಲ್ಲಾ ಅಧ್ಯಕ್ಷ ಜಿ.ಕೆ. ವೆಂಕಟಶಿವಾರೆಡ್ಡಿ ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಮೊದಲ ಹಂತದಲ್ಲಿ ನ.18 ರಿಂದ ಡಿ. 27ರವರೆಗೆ ಯಾತ್ರೆ ನಡೆಯಲಿದೆ. ಆರಂಭಿಕ ಐದು ದಿನ ಕೋಲಾರ ಜಿಲ್ಲೆಯ ವಿಧಾನಸಭಾ ಕ್ಷೇತ್ರ ಗಳಲ್ಲಿ ಗ್ರಾಮ ವಾಸ್ತವ್ಯ ಇರಲಿದೆ. ಕುಮಾರಸ್ವಾಮಿ ಅವರು ಗ್ರಾಮಸ್ಥರ ಸಮಸ್ಯೆ ಆಲಿಸಲಿದ್ದಾರೆ. ಬಳಿಕ ಯಾತ್ರೆಯು ಕ್ರಮವಾಗಿ ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ತುಮಕೂರು, ರಾಮನಗರ, ಮಂಡ್ಯ ಜಿಲ್ಲೆಯಲ್ಲಿ ಸಾಗಲಿದೆ' ಎಂದರು.

ಮತ್ತೆ ಸಿಐಡಿ ವಶಕ್ಕೆ ಅಮೃತ್ ಪೌಲ್

ಬೆಂಗಳೂರು: ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣದ ಆರೋಪಿ, ಐಪಿಎಸ್ ಅಧಿಕಾರಿ ಅಮೃತ್ ಪೌಲ್ ಅವರನ್ನು ಹೆಚ್ಚಿನ ವಿಚಾರಣೆಗಾಗಿ ಬುಧವಾರ ಸಿಐಡಿ ತಂಡವು ಮತ್ತೆ ವಶಕ್ಕೆ ಪಡೆದುಕೊಂಡಿದೆ.

ನ್ಯಾಯಾಂಗ ಬಂಧನದಲ್ಲಿದ್ದ ಅಮೃತ್ ಪೌಲ್ ಅವರನ್ನು ಸಿಐಡಿಯ ಡಿವೈಎಸ್‌ಪಿ ಅಂಜುಪಾಲ ಅವರ ನೇತೃತ್ವದ ತಂಡವು ವಿಚಾರಣೆ ನಡೆಸುತ್ತಿದೆ.

ಕೋರಮಂಗಲ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣ ಸಂಬಂಧ ಹೆಚ್ಚಿನ ವಿಚಾರಣೆಗೆ ನ್ಯಾಯಾಲಯದ ಅನುಮತಿ ಪಡೆದು ವಶಕ್ಕೆ ಪಡೆಯಲಾಗಿದೆ ಎಂದು ಮೂಲಗಳು ಹೇಳಿವೆ.

ಜಿಲ್ಲಾ ಆಸ್ಪತ್ರೆಗಳಲ್ಲಿ ಶೀಘ್ರವೇ ಸಹಾಯವಾಣಿ

ಒಂದನೇ ಪುಟದಿಂದ...

'ಕೆಲ ಆಸ್ಪತ್ರೆಗಳಲ್ಲಿ ಶೇ 40 ರಿಂದ ಶೇ 50ರಷ್ಟು ಸಿಜೇರಿಯನ್ ಹೆರಿಗೆ ಮಾಡಿಸಲಾಗುತ್ತಿದೆ. ಈ ಪ್ರಮಾಣವನ್ನು ಶೇ 20– 40ಕ್ಕೆ ಇಳಿಸಬೇಕಾಗಿದೆ. ಅದಕ್ಕಾಗಿ ಸಮಿತಿ ರಚಿಸಲಾಗಿದೆ. ಜತೆಗೆ ಕಾನೂನು ರೂಪಿಸಿ, ಅನಗತ್ಯವಾಗಿ ಸಿಜೇರಿಯನ್ ಹೆರಿಗೆ ಮಾಡಿಸುವುದಕ್ಕೂ ಕಡಿವಾಣ ಹಾಕಲಾಗುವುದು' ಎಂದರು.

ಜನವರಿಯಿಂದ ಹೊಸ ವ್ಯವಸ್ಥೆ: 108 ಆಂಬುಲೆನ್ಸ್ ಸಿಬ್ಬಂದಿ ಮುಷ್ಕರದ ಬೆದರಿಕೆ ಹಾಕಿರುವ ಸಂಬಂಧ ಪ್ರತಿಕ್ರಿಯಿಸಿದ ಅವರು, 108 ಆಂಬುಲೆನ್ಸ್ ಸಿಬ್ಬಂದಿ ವೇತನ ಬಾಕಿ ಪಾವತಿ ಸಮಸ್ಯೆ ಪರಿಹರಿಸಲಾಗುವುದು. ಈಗಿರುವ ವ್ಯವಸ್ಥೆ ಡಿಸೆಂಬರ್‌ವರೆಗೂ ಮುಂದುವರಿಯಲಿದ್ದು, ನಂತರ ಹೊಸದಾಗಿ ಟೆಂಡರ್ ಕರೆದು ಅರ್ಹರಿಗೆ ಗುತ್ತಿಗೆ ನೀಡಲಾಗುವುದು' ಅವರು ಎಂದು ಹೇಳಿದರು.

ಕೋಲಾರದಲ್ಲಿರುವ ಕೆಲ ದೊಡ್ಡ ನಾಯಕರ ಬುಡ ಅಲ್ಲಾಡುತ್ತಿದೆ. ಅದನ್ನು ಸರಿಪಡಿಸಿಕೊಳ್ಳಲು ಕಾಂಗ್ರೆಸ್ ಮುಖಂಡ ಸಿದ್ದರಾಮಯ್ಯನವರಿಗೆ ಸ್ಪರ್ಧಿಸಲು ಆಹ್ವಾನ ನೀಡಿದ್ದಾರೆ.

ಡಾ.ಕೆ.ಸುಧಾಕರ್, ಆರೋಗ್ಯ ಸಚಿವ

ಹಿಂದೂ ಎಂಬುದು ಧರ್ಮವಲ್ಲ: ಸಿದ್ಧರಾಮಶ್ರೀ

ಪ್ರಾದೇಶಿಕವಾಗಿ ಮಾತ್ರ ಹಿಂದೂ, ಧಾರ್ಮಿಕ ವಿಚಾರದಲ್ಲಿ ಲಿಂಗಾಯತರು ಪ್ರತ್ಯೇಕ

ಪ್ರಜಾವಾಣಿ ವಾರ್ತೆ



ಮುಂಬರುವ ದಿನಗಳಲ್ಲಿ 108 ಒಳಪಂಗಡಗಳನ್ನೂ ಸೇರಿಸಿ ಲಿಂಗಾಯತಕ್ಕೆ ಪ್ರತ್ಯೇಕ ಧರ್ಮದ ಸ್ಥಾನಮಾನ ಪಡೆಯುತ್ತೇವೆ

ಡಾ.ತೋಂಟದ ಸಿದ್ಧರಾಮ ಸ್ವಾಮೀಜಿ, ಪೀಠಾಧಿಪತಿ, ತೋಂಟದಾರ್ಯಮಠ ಗದಗ

ಬೆಳಗಾವಿ: 'ಹಿಂದೂ ಎಂಬುದು ಧರ್ಮವಲ್ಲ, ಅದು ಜೀವನಕ್ರಮವೆಂದು ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಅವರೇ ಹೇಳಿದ್ದಾರೆ. ಆದರೆ, ಇಂದು ವೈದಿಕ ಧರ್ಮಕ್ಕೆ ಹಿಂದೂ ಧರ್ಮ ಎನ್ನಲಾಗುತ್ತಿದೆ. ಹೀಗೆ ಉಚ್ಚರಿಸಿದರೆ ಲಿಂಗಾಯತರೇನು ಹಿಂದೂಗಳಾಗುವುದಿಲ್ಲ' ಎಂದು ಗದುಗಿನ ತೋಂಟದಾರ್ಯ ಮಠದ ಪೀಠಾಧಿಪತಿ ಡಾ.ತೋಂಟದ ಸಿದ್ಧರಾಮ ಸ್ವಾಮೀಜಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ವೇದ, ಆಗಮ, ಪುರಾಣವನ್ನು ವಿರೋಧಿಸಿದ ಲಿಂಗಾಯತ ಅವೈದಿಕ ಧರ್ಮವಾಗಿದೆ. ಲಿಂಗಾಯತರು ಮತ್ತು ಹಿಂದೂಗಳ ಆಚರಣೆಯಲ್ಲಿ ಸಾಕಷ್ಟು ಭಿನ್ನಾಭಿಪ್ರಾಯ ಇವೆ' ಎಂದರು.

'ಹಿಂದೂಗಳು ದೇವಸ್ಥಾನದಲ್ಲಿ ದೇವರನ್ನು ಪೂಜಿಸಿದರೆ, ಲಿಂಗಾಯತರು ತಾವು ಧರಿಸಿದ ಲಿಂಗವನ್ನೇ ಪೂಜಿಸುತ್ತಾರೆ. ಹಿಂದೂಗಳು ಮೃತಪಟ್ಟರೆ ಸುಡಲಾಗುತ್ತದೆ. ಅದೇ ಲಿಂಗಾಯತರನ್ನು ಹೂಳಲಾಗುತ್ತದೆ. ಈ ದೇಶದಲ್ಲಿ ವಾಸಿಸುವ ಜೈನರು, ಬೌದ್ಧರು, ಸಿಖ್ಖರು, ವೈದಿಕರು, ಲಿಂಗಾಯತರು ಸೇರಿ ಎಲ್ಲರೂ ಪ್ರಾದೇಶಿಕವಾಗಿ ಹಿಂದೂಗಳು. ಆದರೆ, ಧಾರ್ಮಿಕ ವಿಚಾರ ಬಂದಾಗ ಲಿಂಗಾಯತರು ಪ್ರತ್ಯೇಕ' ಎಂದು ಸ್ಪಷ್ಟಪಡಿಸಿದರು.

'ಈಗ ಹಿಂದುತ್ವದ ಬಗ್ಗೆ ಬೇರೆ ಬೇರೆ ರೀತಿ ಅರ್ಥೈಸಲಾಗುತ್ತಿದೆ. ಹಿಂದೂ ಪದ ಪರ್ಷಿಯನ್ ಭಾಷೆಯಿಂದ ಬಂದಿದೆ. ಆ ಭಾಷೆಯಲ್ಲಿ 'ಸ'ಕಾರವನ್ನು 'ಹ'ಕಾರವನ್ನಾಗಿ ಉಚ್ಚರಿಸುತ್ತಾರೆ. ಸಿಂಧೂ ನದಿ ಈಚೆಗೆ ಇರುವ ಜನರನ್ನು ಅವರು ಹಿಂದೂಗಳೆಂದು ಕರೆದಿದ್ದರು. ಆದರೆ, ಹಿಂದೂ ಪದವನ್ನು ಒಂದು ಜಾತಿ,ಧರ್ಮಕ್ಕೆ ಸೀಮಿತಗೊಳಿಸಿದರೆ ಇಂತಹ ಅನಾಹುತ ಸಂಭವಿಸುತ್ತವೆ' ಎಂದು ಹೇಳಿದರು.

'ಸಿಂಧೂ ಎಂಬ ಶಬ್ದದಿಂದಲೇ ಹಿಂದೂ ಪದ ಸೃಷ್ಟಿಯಾಗಿದೆ. ಇಂದು ಪಾಕಿಸ್ತಾನದಲ್ಲಿರುವ ಸಿಂಧೂ ನದಿಪಾತ್ರದ ಜನರು ಆ ಭಾಗವನ್ನು 'ಸಿಂಧೂಸ್ತಾನ' ಮಾಡುವಂತೆ ಹೋರಾಟ ನಡೆಸಿದ್ದಾರೆ. ಇದು ನದಿಯ ಹೆಸರೇ ಹೊರತು, ವಿವಾದದ ವಿಷಯವಲ್ಲ' ಎಂದರು.

'ಲಿಂಗಾಯತ ಧರ್ಮದಲ್ಲಿ ಸುಮಾರು 108 ಒಳಪಂಗಡಗಳಿವೆ. ಅವುಗಳಿಗೆ ಮೀಸಲಾತಿ ನೀಡಬೇಕೆಂದು ನಡೆಸುತ್ತಿರುವ ಹೋರಾಟವನ್ನು ನಾವೂ ವಿರೋಧಿಸುವುದಿಲ್ಲ. ಅವರೂ ಮೀಸಲಾತಿ ಕೇಳುವುದರಲ್ಲೂ ತಪ್ಪೇನಿಲ್ಲ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ಲಿಂಗಾಯತ ಧರ್ಮದ ಹೋರಾಟ ಇನ್ನೂ ನಿಂತಿಲ್ಲ. ಅದು ಬೂದಿ ಮುಚ್ಚಿದ ಕೆಂಡದಂತಿದೆ. ಅದು ಯಾವಾಗ ಹೊರಬರುತ್ತದೆ ಎಂದು ಹೇಳಲಾಗದು. ಸದ್ಯಕ್ಕೆ ಬೇರೆ ಜಾತಿಯವರು ಪ್ರತ್ಯೇಕ ಮೀಸಲಾತಿಗಾಗಿ ಹೋರಾಟ ನಡೆಸುತ್ತಿದ್ದಾರೆ. ಈ ಮಧ್ಯೆ, ನಾವೂ ಪ್ರತ್ಯೇಕ ಧರ್ಮಕ್ಕಾಗಿ ಹೋರಾಟ ಮಾಡುವುದು ಸೂಕ್ತವಲ್ಲ' ಎಂದರು.

ಊಟಕ್ಕೆ ಕುಳಿತ ವಿದ್ಯಾರ್ಥಿಗಳ ಮೇಲೆ ಬಿದ್ದ ವಿದ್ಯುತ್ ಕಂಬ

ಪ್ರಜಾವಾಣಿ ವಾರ್ತೆ

ಶ್ರೀನಿವಾಸಪುರ: ತಾಲ್ಲೂಕಿನ ಗೌನಿಪಲ್ಲಿ ಸತ್ಯಸಾಯಿ ಪ್ರೌಢಶಾಲೆಯ ಆವರಣದಲ್ಲಿ ಬುಧವಾರ ಊಟ ಮಾಡುತ್ತಿದ್ದ ವಿದ್ಯಾರ್ಥಿಗಳ ಮೇಲೆ ವಿದ್ಯುತ್ ಕಂಬಗಳು ಮುರಿದು ಬಿದ್ದು, ಮೂವರು ವಿದ್ಯಾರ್ಥಿಗಳು ತೀವ್ರವಾಗಿ ಗಾಯಗೊಂಡಿದ್ದಾರೆ.

ಬೆಸ್ಕಾಂ ಸಿಬ್ಬಂದಿ ಶಾಲಾ ಆವರಣದಲ್ಲಿ ವಿದ್ಯುತ್ ಕಂಬಗಳನ್ನು ಬದಲಾಯಿಸುತ್ತಿದ್ದ ಸಂದರ್ಭದಲ್ಲಿ ಈ ಅವಘಡ ಸಂಭವಿಸಿದೆ. ಶಾಲೆಯ ಆವರಣದಲ್ಲಿ ಊಟ ಮಾಡುತ್ತಿದ್ದ ವಿದ್ಯಾರ್ಥಿಗಳ ಮೇಲೆ ಇದ್ದಕ್ಕಿಂದಂತೆ ಎರಡು ವಿದ್ಯುತ್ ಕಂಬಗಳು ಮುರಿದು ಬಿದ್ದವು. 7ನೇ ತರಗತಿ ವಿದ್ಯಾರ್ಥಿಗಳಾದ ದಿನೇಶ್, ಭರತ್, ಚರಣ್ ತೀವ್ರವಾಗಿ ಗಾಯಗೊಂಡಿದ್ದಾರೆ. ಬೆಸ್ಕಾಂ ಸಿಬ್ಬಂದಿ ನಿರ್ಲಕ್ಷ್ಯವೇ ಘಟನೆಗೆ ಕಾರಣವೆಂದು ಪೋಷಕರು ಆರೋಪಿಸಿದ್ದಾರೆ.

ದಿನೇಶ್ ತಲೆಗೆ ತೀವ್ರ ಪೆಟ್ಟಾಗಿದ್ದು, ಬೆಂಗಳೂರಿನ ನಿಮ್ಹಾನ್ಸ್‌ಗೆ ಸೇರಿಸಲಾಗಿದೆ. ಭರತ್ ಎಂಬ ವಿದ್ಯಾರ್ಥಿ ಶ್ರೀನಿವಾಸಪುರದ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ. ಚರಣ್ ಕಾಲಿಗೆ ಗಾಯವಾಗಿದ್ದು, ಗೌನಿಪಲ್ಲಿ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ.



ತಾಲ್ಲೂಕಿನ ಗೌನಿಪಲ್ಲಿಯ ಸತ್ಯಸಾಯಿ ಪ್ರೌಢ ಶಾಲೆ ಆವರಣದಲ್ಲಿ ಬುಧವಾರ ವಿದ್ಯುತ್ ಕಂಬ ಬಿದ್ದಿರುವುದು

ಬೆಸ್ಕಾಂ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ರಾಮತೀರ್ಥ, ಇನ್‌ಸ್ಪೆಕ್ಟರ್ ದಯಾನಂದ, ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಮುನಿರತ್ನ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದಾರೆ. ಪೊಲೀಸರು ಪ್ರಕರಣ ದಾಖಲಿಸಿಕೊಂಡು, ತನಿಖೆ ನಡೆಸಿದ್ದಾರೆ.

ದಾವಣಗೆರೆ ವಿ.ವಿ ಸಿಂಡಿಕೇಟ್ ಉಪಸಮಿತಿ ಆಕ್ಷೇಪ

ಸೂಟ್‌ಕೇಸ್, ಬ್ಯಾಗ್, ಲೇಖನ ಸಾಮಗ್ರಿಗೆ ₹ 2.91 ಲಕ್ಷ ದುಂದುವೆಚ್ಚ

ಪ್ರಜಾವಾಣಿ ವಾರ್ತೆ

ದಾವಣಗೆರೆ: ದಾವಣಗೆರೆ ವಿಶ್ವವಿದ್ಯಾಲಯದ ನೂತನ ಕುಲಪತಿ ಆಯ್ಕೆಗಾಗಿ ಶೋಧನಾ ಸಮಿತಿಯು ಸೂಟ್‌ಕೇಸ್, ಲೆದರ್ ಬ್ಯಾಗ್, ಲೇಖನ ಸಾಮಗ್ರಿಗಳನ್ನು ಖರೀದಿಸಲು ಒಟ್ಟು ₹ 2.91 ಲಕ್ಷ ದುಂದು ವೆಚ್ಚ ಮಾಡಿರುವುದಕ್ಕೆ ಸಿಂಡಿಕೇಟ್ ಉಪಸಮಿತಿ ಆಕ್ಷೇಪಿಸಿದೆ.

ಶೋಧನಾ ಸಮಿತಿ ದುಂದುವೆಚ್ಚ ಮಾಡಿರುವ ಬಗ್ಗೆ ಸಿಂಡಿಕೇಟ್ ಉಪ ಸಮಿತಿ ಆಕ್ಷೇಪಿಸಿರುವ ವಿಷಯದ ಮೇಲೆ ವಿಶ್ವವಿದ್ಯಾಲಯದಲ್ಲಿ ಸೋಮವಾರ (ನ. 14) ನಡೆದ ಸಿಂಡಿಕೇಟ್ ಸಭೆಯಲ್ಲಿ ಗಂಭೀರವಾಗಿ ಚರ್ಚೆ ನಡೆಯಿತು ಎಂದು ಮೂಲಗಳು ತಿಳಿಸಿವೆ.

ಶೋಧನಾ ಸಮಿತಿಯ ಖರ್ಚು–ವೆಚ್ಚಗಳನ್ನು ಪರಿಶೀಲಿಸಲು ಸಿಂಡಿಕೇಟ್ ಸದಸ್ಯರಾದ ಡಾ.ಶ್ರೀಧರ್ ಎಸ್. ಅಧ್ಯಕ್ಷತೆಯಲ್ಲಿ ನೇಮಿಸಿದ್ದ ಸಿಂಡಿಕೇಟ್ ಉಪ ಸಮಿತಿಯು ಲೇಖನ ಸಾಮಗ್ರಿಗಳ ಖರೀದಿಗೆ ₹ 92,285, ಲೆದರ್ ಬ್ಯಾಗ್ ಖರೀದಿಗಾಗಿ ₹ 99,946 ಹಾಗೂ 10 ಸೂಟ್‌ಕೇಸ್‌ಗಳ ಖರೀದಿಗಾಗಿ ₹ 99,120 ಸೇರಿ ಒಟ್ಟು 2,91,351 ವೆಚ್ಚ ಮಾಡಿರುವುದನ್ನು ಆಕ್ಷೇಪಿಸಿತ್ತು.

'10 ಸೂಟ್‌ಕೇಸ್‌ಗಳನ್ನು ಯಾರಿಗಾಗಿ ಹಾಗೂ ಯಾವ ಉದ್ದೇಶಕ್ಕೆ ನೀಡಲಾಗಿದೆ ಎಂಬ ಬಗ್ಗೆ ಮಾಹಿತಿ ಲಭ್ಯವಿಲ್ಲ' ಎಂದು ಸೆಪ್ಟೆಂಬರ್ 7ರಂದು ನಡೆದ ಸಿಂಡಿಕೇಟ್ ಉಪಸಮಿತಿಯ ಸಭೆಯ ನಡಾವಳಿಯಲ್ಲಿ ದಾಖಲಾಗಿತ್ತು. ಶೋಧನಾ ಸಮಿತಿಯ ಸದಸ್ಯರಿಗೆ ನಿಮಯ ಮೀರಿ 'ಬಿಸಿನೆಸ್ ಕ್ಲಾಸ್'ನಲ್ಲಿ ವಿಮಾನಯಾನ ಮಾಡಲು ಹಣ ಪಾವತಿಸಿರುವ ಬಗ್ಗೆ ಹಾಗೂ ಊಟಕ್ಕೆ ₹70,000 ವೆಚ್ಚ ಮಾಡಿರುವ ಬಗ್ಗೆಯೂ ಉಪಸಮಿತಿ ಆಕ್ಷೇಪಿಸಿತ್ತು.

'ತಪ್ಪಾಗಿರುವುದು ಸಾಬೀತಾದರೆ ಕ್ರಮ'

'ಶೋಧನಾ ಸಮಿತಿಯ ವೆಚ್ಚಗಳ ಕುರಿತು ಉಪಸಮಿತಿ ಎತ್ತಿದ್ದ ಆಕ್ಷೇಪಗಳ ಬಗ್ಗೆ ಸಿಂಡಿಕೇಟ್ ಸಭೆಯಲ್ಲಿ ಚರ್ಚೆಯಾಗಿದ್ದು, ಇದಕ್ಕೆ ಸಂಬಂಧಪಟ್ಟವರು ಸ್ಪಷ್ಟೀಕರಣ ನೀಡಿದ್ದಾರೆ. ಇದರ ಹೊರತಾಗಿಯೂ ಹಣ ದುರ್ಬಳಕೆ ಮಾಡಿಕೊಂಡಿರುವುದು ಸಾಬೀತಾದರೆ ಕ್ರಮ ಕೈಗೊಳ್ಳಲಾಗುವುದು' ಎಂದು ದಾವಣಗೆರೆ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಬಿ.ಡಿ. ಕುಂಬಾರ್ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

'ಸಿಂಡಿಕೇಟ್ ಸಭೆಯಲ್ಲಿ ವಿಷಯ ಚರ್ಚೆಯಾಗಿ ನಡಾವಳಿ ಪ್ರಕಟಿಸುವ ಮುನ್ನವೇ ಮಾಹಿತಿಯನ್ನು ಬಹಿರಂಗಗೊಳಿಸಿರುವುದು ನಿಯಮಕ್ಕೆ ವಿರುದ್ಧವಾಗಿದೆ. ಹೀಗಾಗಿ ಯಾರು ಮಾಹಿತಿ ಸೋರಿಕೆ ಮಾಡಿದ್ದಾರೆ ಎಂಬ ಬಗ್ಗೆ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವಂತೆ ರಾಜ್ಯಪಾಲರಿಗೆ ಪತ್ರ ಬರೆಯಲಾಗುವುದು' ಎಂದೂ ಅವರು ತಿಳಿಸಿದರು.

ಬೆಂಗಳೂರಿನಲ್ಲಿ ನವೋದ್ಯಮ ಪಾರ್ಕ್: ಮುಖ್ಯಮಂತ್ರಿ

ಒಂದನೇ ಪುಟದಿಂದ...

ನಗರದಲ್ಲಿ 400ಕ್ಕೂ ಹೆಚ್ಚು ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರಗಳಿವೆ. ಜಗತ್ತಿನ ವಿವಿಧ ರಾಷ್ಟ್ರಗಳಿಂದ ನಿತ್ಯವೂ 5,000ಕ್ಕೂ ಹೆಚ್ಚು ಎಂಜಿನಿಯರ್‌ಗಳು, ತಂತ್ರಜ್ಞರು ಬೆಂಗಳೂರಿಗೆ ಬಂದು ಹೋಗುತ್ತಿದ್ದಾರೆ. ನವೋದ್ಯಮ ಪಾರ್ಕ್ ನಿರ್ಮಾಣದ ಮೂಲಕ ಮತ್ತಷ್ಟು ಸಂಶೋಧನೆ, ಆವಿಷ್ಕಾರಗಳಿಗೆ ಅವಕಾಶ ಕಲ್ಪಿಸಲಾಗುವುದು ಎಂದು ಬಸವರಾಜ ಬೊಮ್ಮಾಯಿ ಅವರು ಹೇಳಿದರು.

ಆರು ಹೊಸ ನಗರ: ಬೆಂಗಳೂರಿನ ಆಚೆಗೆ ಹೂಡಿಕೆ ಆಕರ್ಷಿಸುವುದಕ್ಕೆ ತಮ್ಮ ಸರ್ಕಾರ ಕೆಲಸ ಮಾಡುತ್ತಿದೆ. ಈ ಉದ್ದೇಶದಿಂದ ಆರು ಹೊಸ ನಗರಗಳನ್ನು ನಿರ್ಮಿಸಲು ತೀರ್ಮಾನಿಸಲಾಗಿದೆ ಎಂದರು. ಕಲಬುರಗಿ, ಹುಬ್ಬಳ್ಳಿ–ಧಾರವಾಡ, ಮೈಸೂರು ಮತ್ತು ಮಂಗಳೂರು ಸುತ್ತಮುತ್ತ ಹೊಸ ನಗರಗಳು ನಿರ್ಮಾಣವಾಗಲಿವೆ ಎಂದು ಅವರು ತಿಳಿಸಿದರು.

ಕೆಐಎಎಲ್ ಸಮೀಪದಲ್ಲಿ ವಿಜ್ಞಾನ, ತಂತ್ರಜ್ಞಾನ ಮತ್ತು ಜ್ಞಾನಾಧಾರಿತ ಕೇಂದ್ರಗಳಿಗೆ ಪೂರಕವಾಗಿರುವಂತೆ 'ಜ್ಞಾನ ನಗರ' ನಿರ್ಮಿಸಲಾಗುವುದು ಎಂದರು.

ಪರಿಸರಸ್ನೇಹಿ ಅಭಿವೃದ್ಧಿ ಅಗತ್ಯ: 'ನಮ್ಮ ಪೂರ್ವಜರು ನಮಗೆ ಉತ್ತಮವಾದ ಪರಿಸರವನ್ನು ಕೊಡುಗೆಯಾಗಿ ನೀಡಿ ದ್ದಾರೆ. ಈ ಪರಿಸರವನ್ನು ಉತ್ತಮ ರೀತಿಯಲ್ಲಿ ಸಂರಕ್ಷಿಸಿ ಮುಂದಿನ ಪೀಳಿಗೆಗೆ ನೀಡುವುದು ನಮ್ಮ ಹೊಣೆಗಾರಿಕೆ. ಅದಕ್ಕೆ ಪೂರಕವಾಗಿ ಪರಿಸರ ಸ್ನೇಹಿ ಅಭಿವೃದ್ಧಿ ಕಾರ್ಯ ಆಗಬೇಕು. ಇದಕ್ಕಾಗಿ ಪರಿಸರ ಕೇಂದ್ರಿತ ಸಂಶೋಧನೆ, ಅಭಿವೃದ್ಧಿ ಮತ್ತು ಆವಿಷ್ಕಾರ ನಡೆಯಬೇಕು' ಎಂದು ಹೇಳಿದರು.

ಅತ್ಯಾಧುನಿಕ ಮಾದರಿಯ 'ಸ್ಮಾರ್ಟ್ ನಗರ'ಗಳ ನಿರ್ಮಾಣ ಆಗಬೇಕಿದೆ. ಮಾನವ ಜನಾಂಗ ಆರೋಗ್ಯಕ್ಕೆ ಸಂಬಂಧಿಸಿದಂತೆ ಎದುರಿಸುತ್ತಿರುವ ಗಂಭೀರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕು.

ಈ ದಿಸೆಯಲ್ಲೂ ತಂತ್ರಜ್ಞಾನ ಕ್ಷೇತ್ರದಲ್ಲಿ ರುವವರು ಕೆಲಸ ಮಾಡಬೇಕು ಎಂದು ಸಲಹೆ ನೀಡಿದರು.

ಬಂಡೀಪುರ ಹುಲಿ ಯೋಜನೆಗೆ 'ಸುವರ್ಣ ಸಂಭ್ರಮ'

ಒಂದನೇ ಪುಟದಿಂದ...

ಆರಂಭದ ಹೆಜ್ಜೆ: ಜಿಲ್ಲೆಯ ಗುಂಡ್ಲುಪೇಟೆ ವ್ಯಾಪ್ತಿಯ ವೇಣುಗೋಪಾಲ ವನ್ಯಜೀವಿ ಉದ್ಯಾನ ಹಾಗೂ ಸುತ್ತಮುತ್ತಲಿನ ಅರಣ್ಯವನ್ನು ಸೇರಿಸಿ 1941ರ ಫೆ.19ರಂದು ರಾಷ್ಟ್ರೀಯ ಉದ್ಯಾನ ಎಂದು ಘೋಷಿಸಲಾಗಿತ್ತು. 1973ರಲ್ಲಿ ಹುಲಿ ಯೋಜನೆಯಾದ ಬಳಿಕ 1985ರಲ್ಲಿ ಇನ್ನಷ್ಟು ಮೀಸಲು ಅರಣ್ಯವನ್ನು ಸೇರಿಸಿ ಬಂಡೀಪುರ ರಾಷ್ಟ್ರೀಯ ಉದ್ಯಾನ ಎಂದು ಹೆಸರಿಸಲಾಗಿತ್ತು. ಆಗ ಉದ್ಯಾನದ ವಿಸ್ತೀರ್ಣ 874.20 ಚದರ ಕಿ.ಮೀ ಇತ್ತು.

ಪರಿಸರ ಪ್ರವಾಸೋದ್ಯಮಕ್ಕೆ ಹೆಸರಾದ ಬಂಡೀಪುರ, ಅರಣ್ಯ ಇಲಾಖೆಗೆ ಉತ್ತಮ ಆದಾಯವನ್ನೂ ತಂದುಕೊಡುತ್ತಿದೆ. ಸಫಾರಿ, ವಸತಿಗೃಹಗಳಿಂದ ಪ್ರತಿ ವರ್ಷ ₹10 ಕೋಟಿಯಿಂದ ₹12 ಕೋಟಿವರೆಗೆ ಆದಾಯ ಬರುತ್ತಿದೆ ಎನ್ನುತ್ತವೆ ಇಲಾಖೆ ಮೂಲಗಳು.

ಕಾಡುವ ಲಂಟಾನ: ಲಂಟಾನ ಸಮಸ್ಯೆ ಇಡೀ ಅರಣ್ಯವನ್ನು ಬಾಧಿಸುತ್ತಿದ್ದು, ವನ್ಯಪ್ರಾಣಿಗಳಿಗೆ ತೊಂದರೆ ನೀಡುತ್ತಿದೆ. ಕಾಡಿನ ಶೇ 60ರಷ್ಟು ಭಾಗದಲ್ಲಿ ಈ ಕಳೆ ಗಿಡ ಇದೆ. ಇತ್ತೀಚಿನ ವರ್ಷಗಳಲ್ಲಿ ನರೇಗಾ, ಸಿಎಸ್‌ಆರ್ ಅನುದಾನದಿಂದ ಲಂಟಾನ ತೆರವು ಮಾಡಲಾಗುತ್ತಿದೆ. ಈವರೆಗೆ 800 ಹೆಕ್ಟೇರ್ ಪ್ರದೇಶದಿಂದ ತೆರವುಗೊಳಿಸಲಾಗಿದೆ.

ಮಾನವ–ವನ್ಯಜೀವಿ ಸಂಘರ್ಷ: ಹುಲಿ ಯೋಜನೆ ಎದುರಿಸುತ್ತಿರುವ ಮತ್ತೊಂದು ಸವಾಲಿದು. ಅರಣ್ಯದ ಅಂಚಿನಲ್ಲಿ 156 ಹಳ್ಳಿಗಳಿದ್ದು, ಲಕ್ಷ ಕ್ಕೂ ಹೆಚ್ಚು ಜನಸಂಖ್ಯೆ ಇದೆ. ಕೃಷಿ ಜಮೀನು, ಜಾನುವಾರು, ಮನುಷ್ಯರ ಮೇಲೆ ವನ್ಯಪ್ರಾಣಿಗಳ ದಾಳಿಯ ಕಾರಣ ದಿಂದ ಸಂಘರ್ಷ ಹೆಚ್ಚಾಗುತ್ತಿದೆ. ಇದರಿಂದ ಕಾಳ್ಗಿಚ್ಚು, ಪ್ರಾಣಿಗಳ ಹತ್ಯೆ ಘಟನೆಗಳು ಅಲ್ಲಲ್ಲಿ ವರದಿಯಾಗುತ್ತಿರುತ್ತವೆ.

ಅಂಕಿ-ಅಂಶಗಳು

1,036 ಚ.ಕಿ.ಮೀ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ವಿಸ್ತೀರ್ಣ

143 ಹುಲಿಗಳ ಸಂಖ್ಯೆ

3,046 ಬಂಡೀಪುರ ಅರಣ್ಯದಲ್ಲಿರುವ ಆನೆಗಳು

200 ಚಿರತೆಗಳು

ಕಳ್ಳ ಬೇಟೆಯು ಗಣನೀಯವಾಗಿ ಇಳಿದಿದೆ. ಕಾಡು ಹಂದಿ, ಜಿಂಕೆ ಬೇಟೆ ಪ್ರಕರಣಗಳು ವರದಿಯಾಗುತ್ತಿವೆ. ಅವುಗಳ ನಿಯಂತ್ರಣಕ್ಕೂ ಕ್ರಮ ವಹಿಸಲಾಗಿದೆ

ಡಾ.ರಮೇಶ್‌ಕುಮಾರ್, ಹುಲಿ ಯೋಜನೆ ನಿರ್ದೇಶಕ

ಕಾಳ್ಗಿಚ್ಚಿಗೆ ತತ್ತರಿಸಿದ್ದ ವನ್ಯ ಸಂಪತ್ತು



2019ರಲ್ಲಿ ಬಂಡೀಪುರ ಅರಣ್ಯದಲ್ಲಿ ಕಂಡು ಬಂದ ಕಾಳ್ಗಿಚ್ಚು

ಪ್ರತಿ ಬೇಸಿಗೆಯಲ್ಲಿ ಅರಣ್ಯದ ಒಂದಿಲ್ಲೊಂದು ಪ್ರದೇಶದಲ್ಲಿ ಕಾಳ್ಗಿಚ್ಚು ಸಂಭವಿಸುತ್ತಿರುತ್ತದೆ. 2017 ಹಾಗೂ 2019ರ ಬೇಸಿಗೆಯಲ್ಲಿ ಅರಣ್ಯ ಹೊತ್ತಿ ಉರಿದು ಸಾವಿರಾರು ಎಕರೆ ಕಾಡು ಭಸ್ಮವಾಗಿತ್ತು.

2017ರಲ್ಲಿ ಸಂಭವಿಸಿದ್ದ ಕಾಳ್ಗಿಚ್ಚಿಗೆ ಸಿಲುಕಿ ಸಿಬ್ಬಂದಿಯೊಬ್ಬರು ಮೃತಪಟ್ಟಿದ್ದರು. 10 ಸಾವಿರಕ್ಕೂ ಹೆಚ್ಚು ಎಕರೆ ಅರಣ್ಯ ಬೂದಿಯಾಗಿತ್ತು. 2019ರಲ್ಲಿ 15 ಸಾವಿರ ಎಕರೆಗೂ ಹೆಚ್ಚು ಪ್ರದೇಶ ಬೆಂಕಿಗೆ ಆಹುತಿಯಾಗಿತ್ತು. ಸೇನಾ ಹೆಲಿಕಾಪ್ಟರ್ ಮೂಲಕ ಕಾರ್ಯಾಚರಣೆ ನಡೆಸಿ ಬೆಂಕಿ ನಿಯಂತ್ರಿಸಲಾಗಿತ್ತು. ಆ ಬಳಿಕ ಕಾಳ್ಗಿಚ್ಚು ಉಂಟಾಗಿಲ್ಲ.

ಬೇಟೆ ಕಲಿತ 3 ಹುಲಿ ಮರಿಗಳು

ಒಂದನೇ ಪುಟದಿಂದ...

ಅವುಗಳಲ್ಲಿ ಸೆರೆಯಾದ ದೃಶ್ಯಗಳನ್ನು ಗಮನಿಸಿದಾಗ, ಹುಲಿ ಮರಿಗಳು ಬಂದು ಜಿಂಕೆಯನ್ನು ತಿಂದಿರುವುದು ಕಂಡು ಬಂದಿದೆ. ಅವು ಆರೋಗ್ಯವಾಗಿರುವುದನ್ನೂ ಗುರುತಿಸಲಾಗಿದೆ' ಎಂದು ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಹಾಗೂ ಡಿಸಿಎಫ್ ಹರ್ಷಕುಮಾರ್ ಚಿಕ್ಕನರಗುಂದ ತಿಳಿಸಿದ್ದಾರೆ.

'ಹುಲಿ ಮರಿಗಳು 10ರಿಂದ 11 ತಿಂಗಳ ಪ್ರಾಯದವಾಗಿವೆ. ಸ್ವತಃ ಬೇಟೆಯಾಡಿ ತಿಂದಿರುವುದು ಆಶಾದಾಯಕ ಬೆಳವಣಿಗೆಯಾಗಿದೆ. ಅವು ಬೇಟೆಯಾಡುವ ಕಲೆ ಕಲಿತಿರುವುದರಿಂದ ತಾವಾಗಿಯೇ ಬದುಕಬಲ್ಲವು. ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದಲ್ಲೇ ತಾಯಿ ಹುಲಿ ಓಡಾಡುತ್ತಿದ್ದ ಕಡೆಯಲ್ಲೇ ಕಂಡು ಬರುತ್ತಿವೆ. ಅವುಗಳ ಚಲನವಲನದ ಮೇಲೆ ನಿರಂತರ ನಿಗಾ ವಹಿಸಿ, ಅವುಗಳನ್ನು ರಕ್ಷಿಸಲು ಇಲಾಖೆಯಿಂದ ಕ್ರಮ ವಹಿಸಲಾಗಿದೆ' ಎಂದು ಮಾಹಿತಿ ನೀಡಿದ್ದಾರೆ.



ಸುಭಾಷಿತ

ಪ್ರಾಮಾಣಿಕರಿಗೆ ಜೀವನವೇ ಒಂದು ಹೋರಾಟ. ಆದರೂ ಅದರಿಂದ ವಿಮುಖರಾಗಬಾರದು.

–ಸ್ವಾಮಿ ವಿವೇಕಾನಂದ

ವಾಹಿನಿಗಳಿಗೆ ಸರ್ಕಾರದ ಮಾರ್ಗಸೂಚಿ ಸ್ವಾತಂತ್ರ್ಯ ಹತ್ತಿಕ್ಕುವ ಉದ್ದೇಶವೇ?

ಉಪಗ್ರಹ ಟಿ.ವಿ. ವಾಹಿನಿಗಳ ಅಪ್‌ಲಿಂಕಿಂಗ್ ಮತ್ತು ಡೌನ್‌ಲಿಂಕಿಂಗ್‌ಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ತಂದಿರುವ ಪರಿಷ್ಕೃತ ಮಾರ್ಗಸೂಚಿಗಳು ಭಾರತವನ್ನು ಟೆಲಿಪೋರ್ಟ್ ಕೇಂದ್ರವನ್ನಾಗಿ ಬೆಳೆಸುವ ಗುರಿಯನ್ನು ಇಟ್ಟುಕೊಂಡು ಕೆಲವು ಸಲಹೆಗಳನ್ನು ನೀಡಿವೆ. ಆದರೆ, ವಿವಾದಕ್ಕೆ ಕಾರಣವಾಗುವ ಹಾಗೂ ಪ್ರಶ್ನಾರ್ಹವಾಗುವ ಒಂದಿಷ್ಟು ಅಂಶಗಳು ಕೂಡ ಈ ಮಾರ್ಗಸೂಚಿಗಳಲ್ಲಿ ಇವೆ. ಇವುಗಳಲ್ಲಿ ಇರುವ ಸೂಚನೆಗಳು ಅಸ್ಪಷ್ಟವಾಗಿರುವ ಕಾರಣ ಅವು ದೇಶದ ಮಾಧ್ಯಮಗಳ ಸ್ವಾತಂತ್ರ್ಯಕ್ಕೆ ಧಕ್ಕೆ ತರುವ ಸಾಧ್ಯತೆಯೂ ಇದೆ. ಮಾರ್ಗಸೂಚಿಗಳಲ್ಲಿ ಹೇಳಿರುವ ಕೆಲವು ಅಂಶಗಳ ಪ್ರಕಾರ, ದೇಶದಲ್ಲಿ ಟಿ.ವಿ. ವಾಹಿನಿಗಳು 'ಸಾರ್ವಜನಿಕ ಒಳಿತು ಹಾಗೂ ರಾಷ್ಟ್ರದ ಹಿತಾಸಕ್ತಿ'ಗೆ ಪೂರಕವಾದ ಕಾರ್ಯಕ್ರಮಗಳನ್ನು ಪ್ರತಿದಿನ ಕನಿಷ್ಠ 30 ನಿಮಿಷಗಳ ಅವಧಿಗೆ ಪ್ರಸಾರ ಮಾಡಬೇಕಾಗುತ್ತದೆ. ಈ ಕಾರ್ಯಕ್ರಮಗಳು ಎಂಟು ವಿಷಯಗಳಿಗೆ ಸಂಬಂಧಿಸಿರಬೇಕು. ಇವುಗಳನ್ನು ಪ್ರಸಾರ ಮಾಡಬೇಕಿರುವುದು ಕಡ್ಡಾಯ. ಶಿಕ್ಷಣ ಮತ್ತು ಸಾಕ್ಷರತೆಯ ಪ್ರಸಾರ, ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ವಿಜ್ಞಾನ ಮತ್ತು ತಂತ್ರಜ್ಞಾನ, ಮಹಿಳೆಯರ ಅಭಿವೃದ್ಧಿ, ಸಮಾಜದ ದುರ್ಬಲ ವರ್ಗಗಳ ಅಭಿವೃದ್ಧಿ, ಪರಿಸರ ಹಾಗೂ ಸಾಂಸ್ಕೃತಿಕ ಪರಂಪರೆಯ ರಕ್ಷಣೆ, ರಾಷ್ಟ್ರೀಯ ಭಾವೈಕ್ಯ ಆ ಎಂಟು ವಿಷಯಗಳು.



ರಾಷ್ಟ್ರೀಯ ಹಿತಾಸಕ್ತಿಯ ಹೆಸರಿನಲ್ಲಿ ಟಿ.ವಿ. ವಾಹಿನಿಗಳ ಮೇಲೆ ನಿಯಂತ್ರಣ ಹೇರುವ ಚಿಂತನೆ ಸರಿಯಲ್ಲ

'ತರಂಗಾಂತರಗಳು ಸಾರ್ವಜನಿಕ ಆಸ್ತಿಯಾಗಿರುವ ಕಾರಣ ಅವುಗಳನ್ನು ಸಮಾಜದ ಹಿತಾಸಕ್ತಿಗೆ ಹೆಚ್ಚು ಪೂರಕವಾಗುವ ರೀತಿಯಲ್ಲಿ ಬಳಸಬೇಕು' ಎಂಬುದು ಮಾರ್ಗಸೂಚಿಯಲ್ಲಿನ ಈ ಬಗೆಯ ನಿರ್ದೇಶನಕ್ಕೆ ನೀಡಿರುವ ಸಮರ್ಥನೆ.

ಸರ್ಕಾರ ಆಯ್ಕೆ ಮಾಡಿರುವ ಎಂಟು ವಿಷಯಗಳಲ್ಲಿ ಆಕ್ಷೇಪಿಸುವಂಥದ್ದು ಮೇಲ್ನೋಟಕ್ಕೆ ಏನೂ ಇಲ್ಲ. 'ರಾಷ್ಟ್ರೀಯ ಹಿತಾಸಕ್ತಿ'ಯನ್ನು ಪ್ರಚುರಪಡಿಸುವ ಆಲೋಚನೆ ಉತ್ತಮವೇ. ಆದರೆ, ಪ್ರಜಾತಂತ್ರ ವ್ಯವಸ್ಥೆಯಲ್ಲಿ 'ರಾಷ್ಟ್ರೀಯ ಹಿತಾಸಕ್ತಿ' ಅಂದರೆ ಏನು ಎಂಬುದಕ್ಕೆ ಬೇರೆ ಬೇರೆ ಸಂಸ್ಥೆಗಳು ಹಾಗೂ ವ್ಯಕ್ತಿಗಳು ವಿಭಿನ್ನ ವ್ಯಾಖ್ಯಾನ ನೀಡಬಹುದು. ಸರ್ಕಾರದ ಭಾಗವಾಗಿರುವವರಿಗೆ ರಾಷ್ಟ್ರೀಯ ಹಿತಾಸಕ್ತಿ ಅಂದರೆ ಸರ್ಕಾರದ ಕಾರ್ಯಕ್ರಮಗಳಿಗೆ, ನಿರ್ದಿಷ್ಟ ಸಿದ್ಧಾಂತಗಳಿಗೆ ಪ್ರಚಾರ ನೀಡುವುದಾಗಿರಬಹುದು. ಆಡಳಿತ ಪಕ್ಷದವರಿಗೆ ತನ್ನ ದೃಷ್ಟಿಕೋನಗಳನ್ನು ಪ್ರಚಾರ ಮಾಡುವುದೇ ರಾಷ್ಟ್ರೀಯ ಹಿತಾಸಕ್ತಿ ಅನ್ನಿಸಬಹುದು. 'ರಾಷ್ಟ್ರೀಯ ಹಿತಾಸಕ್ತಿ'ಯ ಸ್ವರೂಪ, ಸರ್ಕಾರ ಅದರ ಬಗ್ಗೆ ಹೊಂದಿರುವ ಅಭಿಪ್ರಾಯ, ರಾಷ್ಟ್ರೀಯ ಹಿತಾಸಕ್ತಿಯನ್ನು ಕಾಪಾಡಲು ಸರ್ಕಾರ ರೂಪಿಸಿರುವ ಕಾರ್ಯಕ್ರಮಗಳನ್ನು ವಿಮರ್ಶಿಸುವುದು ಮಾಧ್ಯಮಗಳ ಕರ್ತವ್ಯದ ಭಾಗ. ರಾಷ್ಟ್ರೀಯ ಹಿತಾಸಕ್ತಿಯನ್ನು ಕಾಪಾಡಲು ಸರ್ಕಾರ ಸೋತಿದ್ದರೆ, ಅದನ್ನು ಹೇಳುವುದು ಕೂಡ ಮಾಧ್ಯಮಗಳ ಹೊಣೆಯಾಗುತ್ತದೆ. ಆದರೆ, ಮಾರ್ಗಸೂಚಿಗಳಲ್ಲಿ ಹೇಳಿರುವ ಪ್ರಕಾರ ಇಲ್ಲಿ ಸರ್ಕಾರವೇ ಎಲ್ಲವನ್ನೂ ತೀರ್ಮಾನಿಸಲಿದೆ. 'ಸರ್ಕಾರವು ರಾಷ್ಟ್ರೀಯ ಹಿತಾಸಕ್ತಿ ಕಾರ್ಯಕ್ರಮಗಳ ಪ್ರಸಾರಕ್ಕೆ ಕಾಲಕಾಲಕ್ಕೆ ಸಾಮಾನ್ಯ ನಿರ್ದೇಶನಗಳನ್ನು ಟಿ.ವಿ. ವಾಹಿನಿಗಳಿಗೆ ನೀಡಲಿದೆ. ಅವುಗಳನ್ನು ವಾಹಿನಿಗಳು ಪಾಲಿಸಬೇಕು' ಎಂದು ಅದು ಹೇಳುತ್ತದೆ. ಪಾಲಿಸದೇ ಇದ್ದರೆ ಅಂತಹ ವಾಹಿನಿಗಳಿಂದ ವಿವರಣೆ ಕೇಳಲಾಗುತ್ತದೆ. ಅದಾದ ನಂತರದಲ್ಲಿ ಕ್ರಮ ಜರುಗಿಸುವ ಸಾಧ್ಯತೆಯೂ ಇರುತ್ತದೆ.

ಮಾರ್ಗಸೂಚಿಗಳನ್ನು ಪಾಲಿಸುವಾಗ ಟಿ.ವಿ. ವಾಹಿನಿಗಳು ತಮ್ಮ ವಸ್ತು-ವಿಷಯದಲ್ಲಿ ಸೂಕ್ತ ಬದಲಾವಣೆ ತಂದುಕೊಳ್ಳಲು ಅವಕಾಶ ಇದೆ ಎಂದು ಸರ್ಕಾರ ಹೇಳಿದೆ. ಆದರೆ, ಅವು ಹೇಗೆ ಬದಲಾವಣೆ ತರುತ್ತವೆ ಎಂಬ ಬಗ್ಗೆ ಸರ್ಕಾರವು ನಿಗಾ ಇರಿಸಲಿದೆ ಎನ್ನುವುದು ಸ್ಪಷ್ಟ. ರಾಷ್ಟ್ರೀಯ ಹಿತಾಸಕ್ತಿಯ ಹೆಸರಿನಲ್ಲಿ ಟಿ.ವಿ. ವಾಹಿನಿಗಳು ಸರ್ಕಾರದ ನೀತಿಗಳು ಹಾಗೂ ಯೋಜನೆಗಳ ಬಗ್ಗೆ 'ಸಕಾರಾತ್ಮಕ' ಚಿತ್ರಣ ನೀಡುವ ಕಾರ್ಯಕ್ರಮಗಳನ್ನೇ ಪ್ರಸಾರ ಮಾಡಬೇಕಾದ ಸಂದರ್ಭವನ್ನು ಇದು ಸೃಷ್ಟಿಸಬಹುದು. ರಾಷ್ಟ್ರೀಯ ಹಿತಾಸಕ್ತಿಯ ಹೆಸರಿನಲ್ಲಿ ಅವು ಸರ್ಕಾರದ ತಾಳಕ್ಕೆ ತಕ್ಕಂತೆ ಕುಣಿಯಬೇಕಾದ ಪರಿಸ್ಥಿತಿ ಎದುರಾಗಬಹುದು. ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ 'ಅಭಿವೃದ್ಧಿ ಮತ್ತು ಶಿಸ್ತಿನ' ನೆಪದಲ್ಲಿ ಸರ್ಕಾರಿ ಟಿ.ವಿ. ವಾಹಿನಿಗಳು ಮಾಡಿದ್ದನ್ನು, ಇಂಥದ್ದನ್ನೇ ಮಾಡಿ ಎಂದು ಪತ್ರಿಕೆಗಳ ಮೇಲೆ ಒತ್ತಡ ತಂದಿದ್ದನ್ನು ಇವೆಲ್ಲ ನೆನಪಿಸುವಂತಿವೆ. ನೇರವಾಗಿ ಅಥವಾ ಪರೋಕ್ಷವಾಗಿ ನಿಯಂತ್ರಣ ಹೇರುವ ಯಾವುದೇ ಬಗೆಯ ಆಲೋಚನೆ ಸರಿಯಲ್ಲ. ಅಂತಹ ಆಲೋಚನೆಗಿಂತ ಮಾಧ್ಯಮಗಳು ಮುಕ್ತವಾಗಿ ಕೆಲಸ ಮಾಡಲು ಅವಕಾಶ ಕೊಡುವುದು ಒಳ್ಳೆಯ ಕೆಲಸವಾಗುತ್ತದೆ. ಸಾರ್ವಜನಿಕ ಸೇವೆಗಳಿಗೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಪ್ರಸಾರ ಮಾಡಲು ಸರ್ಕಾರಕ್ಕೆ ಹೇಗಿದ್ದರೂ ತನ್ನದೇ ಆದ ವ್ಯಾಪಕವಾದ ಟಿ.ವಿ. ಮತ್ತು ರೇಡಿಯೊ ಜಾಲ ಇದ್ದೇ ಇದೆ.

ದಿನದ ಟ್ವೀಟ್


ನೆಲೆಗಟ್ಟು ಗಟ್ಟಿಗೊಳಿಸೋಣ



ನಮ್ಮ ಗಣರಾಜ್ಯಕ್ಕೆ ಪ್ರಜಾತಂತ್ರವೇ ನೆಲೆಗಟ್ಟು. ಶಕ್ತಿಯುತ, ಜವಾಬ್ದಾರಿಯುತ ಹಾಗೂ ನಿಷ್ಪಕ್ಷಪಾತ ಮಾಧ್ಯಮವು ಈ ನೆಲೆಗಟ್ಟನ್ನು ಇನ್ನಷ್ಟು ಗಟ್ಟಿಗೊಳಿಸುತ್ತದೆ. ರಾಷ್ಟ್ರೀಯ ಪತ್ರಿಕಾ ದಿನದ ನಿಮಿತ್ತ, ಅಡೆತಡೆ ಇಲ್ಲದೆ ಮಾಹಿತಿ ಮತ್ತು ಸುದ್ದಿಯನ್ನು ನೀಡಲು ಅವಿರತ ಪ್ರಯತ್ನ ನಡೆಸುತ್ತಿರುವ ಎಲ್ಲರಿಗೂ ನನ್ನ ಶುಭಾಶಯಗಳು.

ಜಿ. ಕಿಶನ್ ರೆಡ್ಡಿ, ಕೇಂದ್ರ ಸಚಿವ

ಕಿಡಿನುಡಿ



ಮಾನ್ಯ ಬಸವರಾಜ ಬೊಮ್ಮಾಯಿ ಅವರೇ, ಮಂಗಳೂರಿನ ಹೃದಯವಾದ ಬಾವುಟಗುಡ್ಡೆಯಲ್ಲಿ ಹೈದರಾಲಿ ನಿರ್ಮಿಸಿದ, ಟಿಪ್ಪು ಬೆಳೆಸಿದ, ಬ್ರಿಟಿಷರು ಹೊಸ ದೀಪವಿಟ್ಟ, ಟ್ಯಾಗೋರರು ಕುಳಿತು ಮೈಮರೆತ ಉದ್ಯಾನದಲ್ಲಿ ಮಹಾತ್ಮ ಗಾಂಧಿ ಪ್ರತಿಷ್ಠಾನದ ಪಕ್ಕದಲ್ಲಿ ಸ್ವಾತಂತ್ರ್ಯ ಯೋಧ ಕೆದಂಬಾಡಿ ರಾಮಯ್ಯ ಗೌಡರ ಪ್ರತಿಮೆಯನ್ನಿರಿಸುವಾಗ ದಯವಿಟ್ಟು ಯಾವುದೇ ಜಾತಿಗೆ ಸೀಮಿತಗೊಳಿಸಬೇಡಿ.

ಡಾ. ಶ್ರೀನಿವಾಸ ಕಕ್ಕಿಲ್ಲಾಯ, ತಜ್ಞ ವೈದ್ಯ

25 ವರ್ಷಗಳ ಹಿಂದೆ

ಸೋಮವಾರ, 17-11-1997

• ದೂರವಾಣಿ ಸಂಭಾಷಣೆ ಕದ್ದಾಲಿಕೆ ತಡೆ: ಹೊಸ ಶಾಸನಕ್ಕೆ ಸಲಹೆ

ನವದೆಹಲಿ, ನವೆಂಬರ್ 16 (ಪಿಟಿಐ): ದೂರವಾಣಿ ಸಂಭಾಷಣೆ ಕದ್ದಾಲಿಸುವುದನ್ನು ತಡೆಯಲು ಹೊಸ ಶಾಸನಕ್ಕೆ ಕರೆ ನೀಡಿರುವ ವಿವಿಧ ಕ್ಷೇತ್ರಗಳ ತಜ್ಞರು, ವಿಶಿಷ್ಟ ಸಂದರ್ಭಗಳಲ್ಲಿ ಮಾತ್ರ ವೈಯಕ್ತಿಕ ಕರೆಗಳನ್ನು ಕದ್ದಾಲಿಸುವುದಕ್ಕೆ ಒಪ್ಪಿದ್ದು, ಒಟ್ಟಾರೆ ವೈಯಕ್ತಿಕ ಸ್ವಾತಂತ್ರ್ಯ ರಕ್ಷಿಸಬೇಕು ಎಂದು ಮನವಿ ಮಾಡಿಕೊಂಡಿದ್ದಾರೆ.

ಇತ್ತೀಚೆಗೆ ಸಂಭವಿಸಿದ ಟಾಟಾ ಟೀ ಕಂಪನಿಯ ದೂರವಾಣಿ ಕದ್ದಾಲಿಕೆ ಪ್ರಕರಣ ಎಲ್ಲರ ಕಣ್ತೆರೆಸಿದ್ದು, ಒಂದು ವೇಳೆ ಈ ಸಂಬಂಧ ತುರ್ತು ಕ್ರಮ ಕೈಗೊಳ್ಳದೇ ಇದ್ದರೆ ವೈಯಕ್ತಿಕ ಸ್ವಾತಂತ್ರ್ಯಕ್ಕೆ ಧಕ್ಕೆ ಬರಲಿದೆ ಎಂದು ರಾಜಕೀಯ ಮುಖಂಡರು, ಶಿಕ್ಷಣ ಕ್ಷೇತ್ರದ ತಜ್ಞರು ಹಾಗೂ ಉದ್ಯಮಿಗಳು ಆತಂಕ ವ್ಯಕ್ತಪಡಿಸಿದ್ದಾರೆ.

• ಇರಾಕ್ ಮೇಲೆ ದಾಳಿಗೆ ಅಮೆರಿಕ ಸಜ್ಜು

ವಿಶ್ವಸಂಸ್ಥೆ, ನವೆಂಬರ್ 16 (ಪಿಟಿಐ): ಇರಾಕ್ ಮೇಲೆ ಅಮೆರಿಕನ್ ಯು-2 ವಿಮಾನಗಳು ಹಾರಾಟಕ್ಕೆ ಸಜ್ಜಾಗುತ್ತಿರುವಂತೆ ವಿಶ್ವಸಂಸ್ಥೆಯ ಅಧಿಕಾರಿಗಳು ಮತ್ತು ರಾಜತಾಂತ್ರಿಕರು ಪರಿಸ್ಥಿತಿ ಹೇಗೆ ತಿರುಗಬಹುದೆಂದು ಆತಂಕದಿಂದ ಗಮನಿಸುತ್ತಿದ್ದಾರೆ.

ಇರಾಕ್, ಅಮೆರಿಕನ್ ವಿಮಾನಗಳತ್ತ ಕ್ಷಿಪಣಿಗಳನ್ನು ಹಾರಿಸಿದರೆ ಅಮೆರಿಕ ತಕ್ಷಣವೇ ಪ್ರತಿದಾಳಿ ನಡೆಸುವುದು. ಕ್ಷಿಪಣಿಗಳು ವಿಮಾನ ಉರುಳಿಸುವ ಸಾಧ್ಯತೆ ಕಮ್ಮಿ, ಆದರೆ ಪರಿಣಾಮ ಬಹಳ ಗಂಭೀರವಾಗಬಹುದು ಎಂದು ತಜ್ಞರು ಅಭಿಪ್ರಾಯಪಡುತ್ತಾರೆ.

50 ವರ್ಷಗಳ ಹಿಂದೆ

ಶುಕ್ರವಾರ, 17-11-1972

• 'ವಿಜಯನಗರ ಉಕ್ಕು ಕಾರ್ಖಾನೆ ಸ್ಥಾಪನೆಗೆ ಸರ್ಕಾರ ಬದ್ಧ'

ನವದೆಹಲಿ, ನವೆಂಬರ್ 16– ಮೈಸೂರು ರಾಜ್ಯದ ವಿಜಯನಗರ ಮತ್ತು ಆಂಧ್ರಪ್ರದೇಶದ ವಿಶಾಖಪಟ್ಟಣದಲ್ಲಿ ಎರಡು ಹೊಸ ಉಕ್ಕು ಕಾರ್ಖಾನೆಗಳನ್ನು ಸ್ಥಾಪಿಸುವ ನಿರ್ಧಾರಕ್ಕೆ ಸರ್ಕಾರ ಬದ್ಧವಾಗಿದೆ ಎಂದು ಉಕ್ಕು ಮತ್ತು ಗಣಿ ಖಾತೆ ಸಚಿವ ಮೋಹನ ಕುಮಾರಮಂಗಳಂ ಅವರು ಇಂದು ಲೋಕಸಭೆಯಲ್ಲಿ ತಿಳಿಸಿದರು.

ಸದರಿ ಉಕ್ಕು ಕಾರ್ಖಾನೆಗಳ ಗಾತ್ರ ಮತ್ತು ತತ್ಸಂಬಂಧಿ ವಿಷಯಗಳ ಬಗ್ಗೆ ಸರ್ಕಾರ ಈಗ ಪರಿಶೀಲನೆ ನಡೆಸುತ್ತಿದೆ. ಎರಡೂ ಕಾರ್ಖಾನೆಗಳ ಕಾರ್ಯಸಾಧ್ಯತೆಯ ವರದಿಗಳನ್ನು ಈಗ ಪರಿಶೀಲಿಸಲಾಗುತ್ತಿದ್ದು, ನಂತರ ಸರ್ಕಾರದ ನೀತಿಗೆ ಅನುಗುಣವಾಗಿ ಈ ಕಾರ್ಖಾನೆಗಳನ್ನು ನಡೆಸಲು ಹೊಸ ಸಂಸ್ಥೆಗಳನ್ನು ರಚಿಸಲಾಗುವುದು ಎಂದೂ ಸಚಿವರು ಹೇಳಿದರು.

• ಹತೋಟಿ ರೇಖೆ: ರಾಜಕೀಯ ಮಟ್ಟದ ಚರ್ಚೆಗೆ ಭುಟ್ಟೋ ಪತ್ರವಿಲ್ಲ–ಪ್ರಧಾನಿ

ನವದೆಹಲಿ, ನವೆಂಬರ್ 16– ಜಮ್ಮು ಕಾಶ್ಮೀರದಲ್ಲಿ ಹತೋಟಿ ರೇಖೆ ಗುರುತಿಸುವ ಪ್ರಶ್ನೆಯನ್ನು ರಾಜಕೀಯ ಮಟ್ಟದಲ್ಲಿ ಇತ್ಯರ್ಥಪಡಿಸಬೇಕೆಂದು ಸೂಚಿಸುವ ಯಾವ ಪತ್ರವೂ ಪಾಕಿಸ್ತಾನದ ಅಧ್ಯಕ್ಷ ಭುಟ್ಟೋ ಅವರಿಂದ ಪ್ರಧಾನಿ ಇಂದಿರಾ ಗಾಂಧಿ ಅವರಿಗೆ ಬಂದಿಲ್ಲ.

ಇಲ್ಲಿ ಕೆಲವು ದಿನಗಳ ಹಿಂದೆ ಕರಾಚಿಯ 'ಡಾನ್' ಪತ್ರಿಕೆಯ ಬಾತ್ಮೀದಾರ ಗಜೀಮುಲ್ಲಾ ಅವರಿಗೆ ನೀಡಿದ ಸಂದರ್ಶನದಲ್ಲಿ ಪ್ರಧಾನಿ ಅವರು, 'ಭುಟ್ಟೋ ಹಾಗೂ ನಮ್ಮ ನಡುವೆ ಪತ್ರ ವ್ಯವಹಾರ ನಡೆಯುತ್ತಿದ್ದಾಗ್ಯೂ ಅವರಿಂದ (ಭುಟ್ಟೋ) ಇಂಥ ಸಲಹೆ ಯಾವುದೂ ಬಂದಿಲ್ಲ' ಎಂದರು.

ಐಪಿಎಲ್‌ನಿಂದ ದೇಶಕ್ಕೆ ಸಿಕ್ಕ ಲಾಭಗಳೇನು? ಕ್ರಿಕೆಟ್ ತಂಡದ ಬಲವರ್ಧನೆ ಹೇಗೆ?

ಭಾರತದ ಕ್ರಿಕೆಟಿಗರಿಗೆ ಬೇಕೇ ವಿದೇಶಿ ಲೀಗ್?



ವಿಶ್ಲೇಷಣೆ

ಗಿರೀಶ ದೊಡ್ಡಮನಿ

ಮೆಲ್ಬರ್ನ್ ಕ್ರಿಕೆಟ್ ಕ್ರೀಡಾಂಗಣದಲ್ಲಿ ಟಿ20 ವಿಶ್ವಕಪ್ ಎದೆಗವಚಿಕೊಂಡು ಮುಖದಗಲ ನಗು ತುಂಬಿಕೊಂಡು ನಿಂತಿದ್ದ ಇಂಗ್ಲೆಂಡ್ ತಂಡದ ಜಾಸ್ ಬಟ್ಲರ್ ನೀಡಿದ ಹೇಳಿಕೆ ಗಮನ ಸೆಳೆಯಿತು.

'ಇಂಡಿಯನ್ ಪ್ರೀಮಿಯರ್ ಲೀಗ್ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಆಡಿದ ಅನುಭವ ನಮಗೆ ನೆರವಾಯಿತು' ಎಂದು ಬಟ್ಲರ್ ಹೇಳಿದ್ದರು. ಅದಕ್ಕೂ ಮೂರು ದಿನಗಳ ಹಿಂದೆ ಇದೇ ಇಂಗ್ಲೆಂಡ್ ವಿರುದ್ಧದ ಸೆಮಿಫೈನಲ್‌ನಲ್ಲಿ ಭಾರತ ತಂಡವು ಸೋತಾಗ ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಹೇಳಿದ್ದ ಮಾತಿಗೆ ಬಟ್ಲರ್ ಹೇಳಿಕೆಯು ತಿರುಗೇಟಿನಂತೆ ಇತ್ತು.

'ಆಸ್ಟ್ರೇಲಿಯಾದಲ್ಲಿ ನಡೆಯುವ ಬಿಗ್ ಬ್ಯಾಷ್ ಲೀಗ್ ಟಿ20 ಟೂರ್ನಿಯಲ್ಲಿ ಇಂಗ್ಲೆಂಡ್ ಆಟಗಾರರು ಆಡಿದ್ದರು. ಅದರಿಂದ ಅವರಿಗೆ ಅನುಕೂಲವಾಯಿತು' ಎಂದು ದ್ರಾವಿಡ್ ಹೇಳಿದ್ದರು. ಆಸ್ಟ್ರೇಲಿಯಾದ ವಾತಾವರಣ, ಪಿಚ್‌ಗಳಲ್ಲಿ ಆಡಿದ್ದರಿಂದ ಇಂಗ್ಲೆಂಡ್‌ಗೆ ಲಾಭವಾಯಿತು ಎಂಬುದು ಅವರ ಮಾತಿನ ಮರ್ಮವಾಗಿತ್ತು.

ಇದೇ ಹೇಳಿಕೆಯನ್ನು ಮುಂದಿಟ್ಟುಕೊಂಡು ಕೆಲವು ಮಾಜಿ ಕ್ರಿಕೆಟಿಗರು, ಭಾರತದ ಆಟಗಾರರಿಗೆ ವಿದೇಶಿ ಫ್ರ್ಯಾಂಚೈಸಿ ಲೀಗ್‌ಗಳಲ್ಲಿ ಆಡುವ ಅವಕಾಶ ನೀಡಬೇಕು ಎಂದು ಹೇಳುತ್ತಿದ್ದಾರೆ. ಆದರೆ ಈಗ ಇರುವ ನಿಯಮದಂತೆ, ಭಾರತದ ಆಟಗಾರರು ವಿದೇಶಿ ಲೀಗ್‌ಗಳಲ್ಲಿ ಆಡಬೇಕೆಂದರೆ ಸ್ವದೇಶದಲ್ಲಿ ತಾವು ಆಡುವ ಎಲ್ಲ ಮಾದರಿಗಳ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿ, ಬಿಸಿಸಿಐನಿಂದ ನಿರಾಕ್ಷೇಪಣಾ ಪತ್ರ ಪಡೆಯಬೇಕು. ಆದರೀಗ ವಿಶ್ವಕಪ್ ಸೋಲಿನ ನೆಪದಲ್ಲಿ ಈ ನಿಯಮವನ್ನೇ ಬದಲಾಯಿಸಿ 'ಆಟಗಾರರು ಎಲ್ಲಿ ಬೇಕಾದರೂ ಆಡಲಿ' ಎಂದುಬಿಟ್ಟರೆ ಏನಾಗಬಹುದು? ಅದರಿಂದ ಭಾರತದ ಕ್ರಿಕೆಟ್‌ಗೆ ಏನು ಉಪಯೋಗ?

ಇದಕ್ಕೆ ಉತ್ತರ ಸುಲಭ. ವಾಣಿಜ್ಯ ಚಟುವಟಿಕೆಯಾಗಿ ಬೆಳೆದಿರುವ ಕ್ರಿಕೆಟ್‌ಗೆ ಭಾರತ ಬಹುದೊಡ್ಡ ಮಾರುಕಟ್ಟೆ. ಅದಕ್ಕಾಗಿಯೇ ಐಪಿಎಲ್ ದೊಡ್ಡ ಯಶಸ್ಸು ಸಾಧಿಸಿದೆ. ಆದರೆ ಬೇರೆ ದೇಶಗಳಲ್ಲಿ ನಡೆಯುತ್ತಿರುವ ಬಿಗ್ ಬ್ಯಾಷ್ ಸೇರಿದಂತೆ ಕೆಲವು ಫ್ರ್ಯಾಂಚೈಸಿ ಲೀಗ್‌ಗಳಲ್ಲಿ ಆಟಗಾರರಿಗೆ ಸಿಗುತ್ತಿರುವ ದುಡ್ಡು, ಫ್ರ್ಯಾಂಚೈಸಿಗಳಿಗೆ ಆಗುತ್ತಿರುವ ಲಾಭ ಅಷ್ಟಕ್ಕಷ್ಟೇ. ಅದಕ್ಕೆ ಕಾರಣ ಭಾರತದ ಆಟಗಾರರು ಆ ಲೀಗ್‌ಗಳಲ್ಲಿ ಆಡುವುದಿಲ್ಲ ಎಂಬುದು. ಭಾರತ ತಂಡ ಹಾಗೂ ತಾರಾಮೌಲ್ಯದ ಆಟಗಾರರು ಇದ್ದರೆ ಟೂರ್ನಿಗಳ ಖದರ್ ಬೇರೆಯೇ ಆಗಿರುತ್ತದೆ.

ಭಾರತ ಸೋತರೂ ಗೆದ್ದರೂ ಟೀಕೆ ಹಾಗೂ ಮೆಚ್ಚುಗೆಗಳ ಮಹಾಪೂರ ಹರಿಯುತ್ತದೆ. ಹೀನಾಯ ಸೋಲುಗಳನ್ನು ಬಹುಬೇಗನೆ ಮರೆಯುವ ವಿಶಾಲ 'ಹೃದಯ' ಇಲ್ಲಿಯ ಅಭಿಮಾನಿಗಳಿಗೆ ಇದೆ. ಈ ಕಾರಣಕ್ಕಾಗಿ ಎಲ್ಲ ದೇಶಗಳಿಗೂ ಭಾರತ ಹಾಗೂ ಇಲ್ಲಿಯ ಆಟಗಾರರು 'ಚಿನ್ನದ ನಾಣ್ಯ' ಸುರಿಸುವ ಯಂತ್ರಗಳಿದ್ದಂತೆ. ಅದಕ್ಕಾಗಿಯೇ ಪ್ರತಿಯೊಂದು ಕ್ರಿಕೆಟ್ ರಾಷ್ಟ್ರವೂ ಭಾರತ ತಂಡದೊಂದಿಗೆ ದ್ವಿಪಕ್ಷೀಯ ಸಂಬಂಧವನ್ನು ಬೆಳೆಸಲು ತುದಿಗಾಲಿನಲ್ಲಿ ನಿಂತಿರುತ್ತದೆ. ಜಗತ್ತಿನ ಯಾವುದೇ ಮೂಲೆಯಲ್ಲಿ ಭಾರತ ಆಡಿದರೂ ಕೋಟ್ಯಂತರ ಜನ ಟಿ.ವಿ, ಡಿಜಿಟಲ್ ತಾಣಗಳ ಮೂಲಕ ವೀಕ್ಷಿಸುವುದು ಖಚಿತ. ಕ್ರೀಡಾಂಗಣಗಳೂ ಭರ್ತಿಯಾಗುತ್ತವೆ. ಇದರಿಂದ ಪ್ರಾಯೋಜಕರಿಗೆ ಮತ್ತು ಆಯೋಜಕರಿಗೂ ಲಾಭ. ಈಚೆಗೆ ನಡೆದ ವಿಶ್ವಕಪ್ ಟೂರ್ನಿಯ ಬಹುತೇಕ ಎಲ್ಲ ಪಂದ್ಯಗಳಲ್ಲಿ ಕ್ರೀಡಾಂಗಣದಲ್ಲಿ ಸೇರಿದ ಪ್ರೇಕ್ಷಕರ ಸಂಖ್ಯೆಯಲ್ಲಿ ಭಾರತೀಯ ಮೂಲದವರು ಶೇ 80ರಷ್ಟು ಇದ್ದರು.

ದಕ್ಷಿಣ ಆಫ್ರಿಕಾದಲ್ಲಿ ಶುರುವಾಗಲಿರುವ ಟಿ20 ಲೀಗ್ ಟೂರ್ನಿಯ ಎಲ್ಲ ತಂಡಗಳನ್ನೂ ಐಪಿಎಲ್ ಫ್ರ್ಯಾಂಚೈಸಿಗಳ ಮಾಲೀಕರೇ ಖರೀದಿಸಿದ್ದಾರೆ. ಆದರೆ ಭಾರತದ ಆಟಗಾರರಿಲ್ಲದೆ ಆ ಟೂರ್ನಿ ಯಶಸ್ವಿಯಾಗುವುದೇ ಎನ್ನುವ ಲೆಕ್ಕಾಚಾರ ಜೋರಾಗಿಯೇ ನಡೆದಿದೆ. ಇತ್ತೀಚಿನ ದಿನಗಳಲ್ಲಿ ಕೆಲವು ಕ್ರಿಕೆಟಿಗರು ಎಲ್ಲ ಮಾದರಿಗಳಿಂದ ನಿವೃತ್ತಿ ಘೋಷಿಸುತ್ತಿರುವ ಹಿಂದೆ ವಿದೇಶಿ ಲೀಗ್‌ನಲ್ಲಿ ಆಡುವ ಉದ್ದೇಶವಿದೆ ಎಂಬ ಮಾತುಗಳೂ ಕೇಳಿಬರುತ್ತಿವೆ. ಆದರೆ ಹಾಲಿ ತಾರೆಗಳು ಎನಿಸಿಕೊಂಡಿರುವ ಆಟಗಾರರು ಇದ್ದರೆ ಮಾತ್ರ ಆ ಲೀಗ್‌ಗಳ ವರ್ಚಸ್ಸು ಹೆಚ್ಚುತ್ತದೆ ಎನ್ನುವುದು ಸುಳ್ಳಲ್ಲ. ಈ ಹಿನ್ನೆಲೆಯಲ್ಲಿ ದ್ರಾವಿಡ್ ಹೇಳಿಕೆಯನ್ನು ತಮ್ಮ ಲಾಭಕ್ಕೆ ಬಳಸಿಕೊಳ್ಳಲು ಕಾಣದ ಕೈಗಳು ಯತ್ನಿಸುವ ಅನುಮಾನ ಕಾಡುತ್ತಿದೆ.

2008ರಲ್ಲಿ ಐಪಿಎಲ್ ಆರಂಭವಾದಾಗ ಸಚಿನ್ ತೆಂಡೂಲ್ಕರ್, ವೀರೇಂದ್ರ ಸೆಹ್ವಾಗ್, ರಾಹುಲ್ ದ್ರಾವಿಡ್, ಜಹೀರ್ ಖಾನ್, ಮಹೇಂದ್ರಸಿಂಗ್ ಧೋನಿ, ವಿವಿಎಸ್ ಲಕ್ಷ್ಮಣ್‌ರಂಥ ದಿಗ್ಗಜರು ಬೇರೆ ಬೇರೆ ತಂಡಗಳಲ್ಲಿ ಐಕಾನ್ ಆಟಗಾರರಾಗಿದ್ದರು. ಆ ಕಾಲಘಟ್ಟದಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಇವರು ಸೂಪರ್‌ಸ್ಟಾರ್‌ಗಳಾಗಿದ್ದರು. ಅಷ್ಟೇ ಅಲ್ಲ, ಶ್ರೀಲಂಕಾ, ದಕ್ಷಿಣ ಆಫ್ರಿಕಾ, ಆಸ್ಟ್ರೇಲಿಯಾ, ನ್ಯೂಜಿಲೆಂಡ್ ಮತ್ತು ವೆಸ್ಟ್ ಇಂಡೀಸ್‌ನ ತಾರೆಯರೂ ಇದ್ದ ಕಾರಣ ಐಪಿಎಲ್ ಸೂಪರ್ ಹಿಟ್ ಆಯಿತು. ಕಳೆದ 15 ವರ್ಷಗಳಲ್ಲಿ ಐಪಿಎಲ್ ಅಗಾಧವಾಗಿ ಬೆಳೆದಿದೆ. ಮಾಧ್ಯಮ ಪ್ರಸಾರ ಹಕ್ಕುಗಳೇ 48 ಸಾವಿರ ಕೋಟಿ ರೂಪಾಯಿಗಳಿಗೆ ಹರಾಜಾಗುವಷ್ಟು ಜನಪ್ರಿಯವಾಗಿದೆ.



ಈ ಅವಧಿಯಲ್ಲಿ ವಿಂಡೀಸ್ ಹಾಗೂ ಇಂಗ್ಲೆಂಡ್ ತಲಾ ಎರಡು ಬಾರಿ, ಶ್ರೀಲಂಕಾ ಮತ್ತು ಆಸ್ಟ್ರೇಲಿಯಾ ತಲಾ ಒಂದು ಸಲ ಟಿ20 ವಿಶ್ವಕಪ್ ಜಯಿಸಿವೆ. ಆದರೆ, ಭಾರತ ತಂಡ 2014ರಲ್ಲಿ ಫೈನಲ್ ತಲುಪಿದ್ದು ಬಿಟ್ಟರೆ ಪ್ರಶಸ್ತಿ ಜಯಿಸಿಲ್ಲ. 2007ರಲ್ಲಿ ಮಹೇಂದ್ರಸಿಂಗ್ ಧೋನಿ ಬಳಗವು ಮೊದಲ ವಿಶ್ವಕಪ್ ಗೆದ್ದಾಗ ಇನ್ನೂ ಐಪಿಎಲ್ ಆರಂಭವಾಗಿರಲಿಲ್ಲ. ಈ ಹಿನ್ನೆಲೆಯಲ್ಲಿ ನೋಡಿದರೆ ಭಾರತ ತಂಡವು ಅಂತರರಾಷ್ಟ್ರೀಯ ಮಟ್ಟದಲ್ಲಿ ಬಲಾಢ್ಯವಾಗಲು ಭಾರತದವರು ಐಪಿಎಲ್ ಅನುಭವವನ್ನು ಬಳಸಿಕೊಳ್ಳುವಲ್ಲಿ ಸಫಲವಾಗಿಲ್ಲ ಎಂದೂ ಹೇಳಬಹುದು. ಐಸಿಸಿ ವೇಳಾಪಟ್ಟಿಯ ದಟ್ಟಣೆಯಿಂದಾಗಿ ಒತ್ತಡವಾಗುತ್ತಿದೆ ಎಂದು ಹೇಳಿ ವಿಶ್ರಾಂತಿ ಪಡೆಯುವ ಆಟಗಾರರು, ಐಪಿಎಲ್ ಜೊತೆಗೆ ವಿದೇಶಿ ಲೀಗ್‌ಗಳಲ್ಲಿಯೂ ಆಡಲು ಹೋದರೆ ದೇಶದ ತಂಡದಿಂದ ಮತ್ತಷ್ಟು ದೂರ ಉಳಿಯಬಹುದಲ್ಲವೇ?

ಆದ್ದರಿಂದ ನಿಯಮ ಬದಲಾವಣೆಯ ಯೋಚನೆ ಸಾಧುವಲ್ಲ ಎನಿಸುತ್ತದೆ. ಐಪಿಎಲ್‌ನಿಂದ ರಾಷ್ಟ್ರೀಯ ತಂಡದ ಬಲ ಹೆಚ್ಚಿಸುವ ಚರ್ಚೆಗಳು ನಡೆದರೆ ಸೂಕ್ತವಾಗಬಹುದು. ಬೇರೆ ದೇಶಗಳ ಆಟಗಾರರು ಐಪಿಎಲ್‌ನಲ್ಲಿ ಆಡುವಾಗಲೂ ದುಡ್ಡಿನ ಮೇಲೆ ಕಣ್ಣಿಟ್ಟಿರುತ್ತಾರೆ ನಿಜ. ಆದರೆ ಇಲ್ಲಿ ಕಲಿತ ಕೌಶಲಗಳನ್ನು ತಮ್ಮ ದೇಶಕ್ಕೆ ಲಾಭವಾಗುವಂತೆ ವಿನಿಯೋಗಿಸುತ್ತಾರೆ. ದೇಶದ ತಂಡವನ್ನು ಪ್ರತಿನಿಧಿಸುವ ಅವಕಾಶವನ್ನು ಬಿಟ್ಟುಕೊಡುವುದಿಲ್ಲ. ಅದಕ್ಕಾಗಿ ಐಪಿಎಲ್ ಪಂದ್ಯಗಳನ್ನೇ ತ್ಯಜಿಸುತ್ತಾರೆ. ಅಲ್ಲದೆ ಸದಾ ಪ್ರಯೋಗಶೀಲ ಹಾಗೂ ಚಲನಶೀಲವಾಗಿರುವ ಟಿ20 ಮಾದರಿಗೆ ಬೇಕಾದ ನಾಯಕತ್ವದ ಗುಣವನ್ನು ಐಪಿಎಲ್‌ನಲ್ಲಿ ಕಲಿತು ಹೋಗುತ್ತಾರೆ.

ಚುಟುಕು ಮಾದರಿಯ ಪಂದ್ಯದ ಪ್ರತಿಯೊಂದು ಓವರ್ ಕೂಡ ಮಹತ್ವದ್ದು. ವಿಕೆಟ್ ಗಳಿಕೆಯಷ್ಟೇ ಡಾಟ್‌ಬಾಲ್‌ಗೂ ಇಲ್ಲಿ ಕಿಮ್ಮತ್ತಿದೆ. ಆದ್ದರಿಂದ ಡ್ರೆಸ್ಸಿಂಗ್ ರೂಮ್‌ನಲ್ಲಿ ನಡೆದ ಸಭೆಯಲ್ಲಿ ಸಿದ್ಧಪಡಿಸಿಕೊಂಡು ಬಂದ ಯೋಜನೆಯನ್ನು ಪಂದ್ಯ ನಡೆಯುವ ಹಂತದಲ್ಲಿ ಪರಿಸ್ಥಿತಿಗೆ ತಕ್ಕಂತೆ ಪರಿಷ್ಕರಿಸುವ ಚಾಕಚಕ್ಯತೆ ನಾಯಕನಿಗೆ ಇರಬೇಕು. ಜಾಸ್ ಬಟ್ಲರ್ ಪ್ರಯೋಗಗಳಿಗೆ ಹಿಂಜರಿಯಲಿಲ್ಲ. ಅದಕ್ಕೇ ಗೆದ್ದರು. ಆದರೆ ಐದು ಬಾರಿ ಐಪಿಎಲ್ ಟ್ರೋಫಿ ಗೆದ್ದ ನಾಯಕನೆಂಬ ಹೆಗ್ಗಳಿಕೆ ಇರುವ ರೋಹಿತ್ ಶರ್ಮಾ ಇಲ್ಲಿ ಬ್ಯಾಟಿಂಗ್ ಹಾಗೂ ನಾಯಕತ್ವ ಎರಡರಲ್ಲೂ ಹಿಂದುಳಿದರು. ತಾವು ಮತ್ತು ಕೆ.ಎಲ್. ರಾಹುಲ್ ತಂಡಕ್ಕೆ ಉತ್ತಮ ಆರಂಭ ನೀಡುವಲ್ಲಿ ಸತತ ವೈಫಲ್ಯ ಅನುಭವಿಸಿದರೂ ಬದಲಾವಣೆ ಮಾಡಲು ಮುಂದಾಗಲಿಲ್ಲ. ಹಾಗಿದ್ದರೆ ಐಪಿಎಲ್‌ನಲ್ಲಿ ಆಡಿ ಅವರು ಗಳಿಸಿದ ಅನುಭವದ ಲಾಭವೇನು?

ಇದೇ 20ರಿಂದ ಫಿಫಾ ವಿಶ್ವಕಪ್ ಟೂರ್ನಿ ಕತಾರ್‌ನ ದೋಹಾದಲ್ಲಿ ಆರಂಭವಾಗಲಿದೆ. ಫುಟ್‌ಬಾಲ್ ಪ್ರೀಮಿಯರ್ ಲೀಗ್‌ಗಳಲ್ಲಿ ಸಾವಿರಾರು ಕೋಟಿ ರೂಪಾಯಿ ಗಳಿಸಿದ ತಾರಾಮಣಿಗಳು ತಮ್ಮ ದೇಶದ ತಂಡಗಳಿಗಾಗಿ ಆಡುವ ಪರಿಯನ್ನು ಕಣ್ತುಂಬಿಕೊಳ್ಳುವ ಅವಕಾಶ ಇದು. ಭಾರತದ ಕ್ರಿಕೆಟಿಗರಿಗೆ ಇದು ಪ್ರೇರಣೆಯಾಗಬಹುದು ಅಲ್ಲವೇ?

ಚುರುಮುರಿ



ಮೂರು ಮನೆಗಳ ಕತೆ

• ಆನಂದ

'ಬ್ರಿಟನ್ನಿನ ಹೊಸ ರಾಜ ಚಾರ್ಲ್ಸ್, ಬಕಿಂಗ್‌ಹ್ಯಾಂ ಅರಮನೆಗೆ ವಾಸಕ್ಕೆ ಹೋಗ್ತಿಲ್ಲವಂತೆ' ಎಂದಳು ಶ್ರೀಮತಿ.

'ವಾಸ್ತು ಪ್ರಾಬ್ಲಂ?'

'ಅಲ್ರೀ, ಅರಮನೆ ರಿಪೇರಿ' ಎಂದಾಗ ಅರಮನೆಗೂ ರಿಪೇರೀನೆ, ನಮ್ಮಗಳ ಮನೆಯಂತೆ ಎಂದೆನ್ನಿಸಿತು. ಅರಮನೆಯೂ ಒಂದು ಮನೆ. ಮನೆ ಎಂದ ಮೇಲೆ ರಿಪೇರಿ ಅನಿವಾರ್ಯ ಅಲ್ಲವೆ?'

'ಸುಮಾರು 400 ಕೋಟಿ ಖರ್ಚಾಗುತ್ತಂತೆ. ಐದು ವರ್ಷ ಬೇಕಂತೆ' ಎಂದಾಗ 'ಶೇ 40 ಕಮಿಷನ್ ಯಾರಿಗೆ? ಅರಮನೆ ಸರ್ಕಾರದ್ದು. ಸೊ, ಖರ್ಚು ಸರ್ಕಾರದ್ದು. ಕಮಿಷನ್ ಇರಲೇಬೇಕಲ್ಲವೆ? ಬೇಕಿದ್ದರೆ ಕೆಂಪಣ್ಣನವರನ್ನೋ ಈಶ್ವರಪ್ಪನವರನ್ನೋ ಕೇಳಿ ನೋಡಬಹುದು'.

'ನೀವೋ, ನಿಮ್ಮ ಯೋಚನೇನೋ? ಚಾರ್ಲ್ಸ್ ಬಗ್ಗೆ ಯೋಚನೆ ಮಾಡಿ'.

'ಯೋಚನೆ ಯಾಕೆ? ಬಕಿಂಗ್‌ಹ್ಯಾಂ ಇಲ್ಲದಿದ್ದರೆ ಇನ್ನೊಂದು ಹ್ಯಾಂ ಇರುತ್ತೆ. ಅರಮನೆಗಳಿಗೆ ಕೊರತೆಯೇ? ನಮ್ಮ ಮಂತ್ರಿಗಳಿಗೆ ನಾವು ಕಟ್ಟಿಸಿರುವ (ಅರ)ಮನೆಗಳಂತೆ ಬೇಕಾದಷ್ಟಿವೆ.'

'ಕರೆಕ್ಟ್, ಅದಕ್ಕೇ ಈಗವರು ವಾರಕ್ಕೆ ಮೂರು ಕಡೆ ಇರ್ತಾರಂತೆ.'

'ಮೂರು ಸಂಸಾರಾನೇ ಅವಪ್ಪನಿಗೆ?'

'ಛೆ! ಏಕಪತ್ನೀವ್ರತಸ್ಥ ಈಗ. ಆಕೆಯೊಂದಿಗೇ ಮೊದಲ ಮೂರು ದಿನ ಒಂದು ಮನೆ, ಇನ್ನೆರಡು ದಿನ ಇನ್ನೊಂದು ಮನೆ, ಉಳಿದೆರಡು ದಿನ ಮಗದೊಂದು ಮನೆ...'

'ಸಂಸಾರವೊಂದು ಮನೆ ಮೂರು. ಹ್ಹಹ್ಹಾ! ಕನ್ನಡ ಧಾರಾವಾಹಿ ಟೈಟಲ್ ತರಹ ಇದೆ' ಎಂದೆ.

'ನಿಮಗೆ ಸೀರಿಯಸ್‌ನೆಸ್ಸೇ ಇಲ್ಲ. ಅದಿರಲಿ ನಮ್ಮ ಬೊಮ್ಮಾಯಿ ಸಾಹೇಬ್ರದ್ದೂ ಮೂರು ಮನೆ ಕಥೆ' ಎಂದಾಗ ನನಗೆ ಆಶ್ಚರ್ಯ. ಎರಡು ಮನೆ ಇದ್ದ ಸಿಎಂ ಕಥೆ ಗೊತ್ತು. ಆದರೆ...

'ಅಧಿಕೃತ ಸಿಎಂ ನಿವಾಸದಲ್ಲಿ ಮಾಜಿ ಸಿಎಂ ಯಡಿಯೂರಪ್ಪನವರು ಬೀಡು ಬಿಟ್ಟಿದ್ದಾರೆ. ತಮಗೆ ಅಲಾಟ್ ಆಗಿರೋ ಮನೆಗೆ ಬೊಮ್ಮಾಯಿ ಶಿಫ್ಟ್ ಆಗಿಲ್ಲ. ಆದ್ದರಿಂದ ಅವರು ಸ್ವಂತ ಮನೆಯಿಂದಲೇ ರಾಜ್ಯ ಆಳ್ತಿದಾರೆ'.

'ಹೋ! ಹಾಗಿದ್ದರೆ ಅಲ್ಲಿನ ರಾಜನದ್ದು, ಇಲ್ಲಿನ ಮುಖ್ಯಮಂತ್ರಿಗಳದ್ದು ಒಂದೇ ತರಹದ ಮನೆ ಕತೆ' ಎಂದು ಮಾತು ಮುಗಿಸಿದೆ.

ಸಂಗತ

ಯೂನಿಕೋಡ್ ಸಮಸ್ಯೆ ಅಲ್ಲ

ಯೂನಿಕೋಡ್‌ನಿಂದ ಹಲವಾರು ಲಾಭಗಳಿವೆ. ಮಾಹಿತಿಯ ವರ್ಗಾವಣೆ ಸುಲಭ. ಉತ್ತಮ ಯೂನಿಕೋಡ್ ಫಾಂಟ್‌ಗಳು ತಯಾರಾಗುವಂತೆ ಸರ್ಕಾರ ಮಾಡಬೇಕು

• ಯು.ಬಿ.ಪವನಜ

'ಯೂನಿಕೋಡ್‌ನ ಏಕಮುಖ' ಎಂಬ ಕೃಷ್ಣ ಭಟ್ ಅವರ ಲೇಖನ (ಪ್ರ.ವಾ., 'ತಂತ್ರಜ್ಞಾನ' ಪುಟ, ನ. 16) ದಾರಿ ತಪ್ಪಿಸುವಂತಿದೆ. ಫಾಂಟ್ ಸಮಸ್ಯೆಯನ್ನು ಯೂನಿಕೋಡ್ ಸಮಸ್ಯೆ ಎಂದು ಲೇಖನದಲ್ಲಿ ಬಿಂಬಿಸಲಾಗಿದೆ. ಯೂನಿಕೋಡ್ ಎಂಬುದು ಮಾಹಿತಿ ತಂತ್ರಜ್ಞಾನದಲ್ಲಿ ಅಕ್ಷರಗಳ ಸಂಕೇತೀಕರಣದ ಒಂದು ಜಾಗತಿಕ ಶಿಷ್ಟತೆ. ಅದು ಯಾವ ಅಕ್ಷರಕ್ಕೆ ಯಾವ ಸಂಕೇತ ಎಂದು ತೀರ್ಮಾನಿಸುತ್ತದೆಯೇ ವಿನಾ ಅದನ್ನು ಯಾವ ರೂಪದಲ್ಲಿ ಪರದೆಯಲ್ಲಿ ಪ್ರದರ್ಶಿಸಬೇಕು ಅಥವಾ ಯಾವ ರೂಪದಲ್ಲಿ ಮುದ್ರಿಸಬೇಕು ಎಂದು ನಿಗದಿಪಡಿಸುವುದಿಲ್ಲ. ಆ ಕೆಲಸವನ್ನು ಫಾಂಟ್ ಮಾಡುತ್ತದೆ. ಯಾವುದೇ ಭಾಷೆಗೆ ಯಾವ ಫಾಂಟ್ ಬಳಸಬೇಕು ಎಂಬ ಜಾಗತಿಕ ಶಿಷ್ಟತೆ ಇಲ್ಲ. ಯಾವ ಭಾಷೆಗೆ ಯಾವ ಫಾಂಟ್ ಬಳಸಬೇಕು ಎಂದು ಯೂನಿಕೋಡ್ ನಿಗದಿಪಡಿಸುವುದಿಲ್ಲ.


ಯೂನಿಕೋಡ್‌ನಿಂದ ಹಲವಾರು ಲಾಭಗಳಿವೆ. ಮಾಹಿತಿಯ ವರ್ಗಾವಣೆ ಸುಲಭ. ನೀವೇ ಗಮನಿಸಿರಬಹುದು. ನಾನು ಈ ಲೇಖನವನ್ನು ಟೈಪ್ ಮಾಡಿರುವುದು ಯೂನಿಕೋಡ್ ಬಳಸಿ ವಿಂಡೋಸ್ ಲ್ಯಾಪ್‌ಟಾಪ್‌ನಲ್ಲಿ. ನೀವು ಅದನ್ನು ಆರಾಮವಾಗಿ ಆ್ಯಂಡ್ರಾಯ್ಡ್ ಮೊಬೈಲ್, ಐಫೋನ್, ಲಿನಕ್ಸ್, ಮ್ಯಾಕ್, ವಿಂಡೋಸ್ ಎಲ್ಲ ವೇದಿಕೆಗಳಲ್ಲಿ ಓದಬಹುದು. ಇದು ಸಾಧ್ಯವಾಗಿರುವುದು ನಾನು ಬಳಸಿದ ಯೂನಿಕೋಡ್‌ನಿಂದಾಗಿ.

ನಾನು ಹಳೆಯ ಶತಮಾನದ ನುಡಿ, ಬರಹ, ಆಕೃತಿ, ಶ್ರೀಲಿಪಿಯಂತಹ ಬೆರಳಚ್ಚಿನ ತಂತ್ರಾಂಶಗಳ ಆಸ್ಕಿ (ಯೂನಿಕೋಡ್ ಅಲ್ಲದ) ಫಾಂಟ್ ಬಳಸಿ ಟೈಪ್ ಮಾಡಿದ್ದಿದ್ದಲ್ಲಿ, ನೀವು ಆಯಾ ಫಾಂಟ್ ಬಳಕೆದಾರರಾಗಿದ್ದಲ್ಲಿ ಮಾತ್ರ ನಿಮಗೆ ಅದನ್ನು ಓದಲು ಸಾಧ್ಯವಾಗುತ್ತಿತ್ತು.

ಡಿ.ಟಿ.ಪಿ ಮಾಡುವವರಿಗೆ ಒಂದು ಬಹುದೊಡ್ಡ ಸೌಲಭ್ಯ ಯೂನಿಕೋಡ್‌ನಿಂದಾಗಿ ಲಭ್ಯವಾಗಿದೆ. ಅದು ಹುಡುಕುವ ಮತ್ತು ಬದಲಿಸುವ ಸೌಲಭ್ಯ. ಜೊತೆಗೆ ಪದಪರೀಕ್ಷಕ (ಸ್ಪೆಲ್ಲಿಂಗ್ ಚೆಕ್). ಇವೆರಡೂ ಆಸ್ಕಿ ತಂತ್ರಾಂಶಗಳಲ್ಲಿ ಇಲ್ಲ.

ಸ್ವಲ್ಪ ಹಿಂದಿನ ಕಾಲಕ್ಕೆ ಹೋಗೋಣ. ಆಗ ಶ್ರೀಲಿಪಿ, ಆಕೃತಿ, ಪ್ರಕಾಶಕ್ ಮುಂತಾದ ಡಿಟಿಪಿ ತಂತ್ರಾಂಶಗಳಿದ್ದವು. ಆಗ ಯೂನಿಕೋಡ್ ಬಳಕೆ ವ್ಯಾಪಕವಾಗಿರಲಿಲ್ಲ. ಅವರು ಬಳಸುತ್ತಿದ್ದುದು ಯೂನಿಕೋಡ್ ಅಲ್ಲದ ಆಸ್ಕಿ ಫಾಂಟ್‌ಗಳನ್ನು. ಅಕ್ಷರಗಳ ಪ್ರದರ್ಶನ ತುಂಡುಗಳಿಗೆ, ಅಂದರೆ ಗ್ಲಿಫ್‌ಗಳಿಗೆ ಒಂದೊಂದು ತುಂಡಿಗೆ ಒಂದೊಂದು ಆಸ್ಕಿ ಸಂಕೇತ ಇರುತ್ತಿತ್ತು. ಆಸ್ಕಿಯಲ್ಲಿ 256 ಸಂಕೇತಗಳ ಮಿತಿಯಿದೆ. ಒಂದು ಅಕ್ಷರಗುಚ್ಛ, ಉದಾಹರಣೆಗೆ, 'ಶ್ರೀ' ಆಗಬೇಕಿದ್ದರೆ ಹಲವು ಗ್ಲಿಫ್‌ಗಳ ಜೋಡಣೆ ಆಗಬೇಕಿತ್ತು. ಅಂದರೆ ಪ್ರತೀ ಗ್ಲಿಫ್‌ಗೂ ಒಂದು ಆಸ್ಕಿ ಸಂಕೇತದ ಬಳಕೆ ಆಗಬೇಕಿತ್ತು.

ಕೀಲಿಮಣೆಯ ತಂತ್ರಾಂಶವು ನಾವು ಕೀಲಿಮಣೆಯಲ್ಲಿ ಕುಟ್ಟಿದ ಕೀಲಿಗಳ ಸರಣಿಯನ್ನು ಸಂಬಂಧಿತ ಆಸ್ಕಿ ಸಂಕೇತಗಳ ಸರಣಿಯನ್ನಾಗಿ ಮಾರ್ಪಡಿಸುತ್ತಿತ್ತು. ಈ ಕೀಲಿಮಣೆ ತಂತ್ರಾಂಶ ಆಯಾ ಕಂಪನಿಯ ಫಾಂಟ್‌ಗೆ ಒಂದು ರೀತಿಯಲ್ಲಿ ಮದುವೆಯಾದಂತಿತ್ತು. ಅಂದರೆ ನೀವು ಶ್ರೀಲಿಪಿ ತಂತ್ರಾಂಶ ಬಳಸಿ ಟೈಪ್ ಮಾಡಿದರೆ ಆಕೃತಿಯ ಫಾಂಟ್ ಬಳಕೆ ಸಾಧ್ಯವಿರಲಿಲ್ಲ. ಶ್ರೀಲಿಪಿ ತಂತ್ರಾಂಶ ತೆಗೆದುಕೊಂಡವ ಮಾತ್ರ ಶ್ರೀಲಿಪಿ ಫಾಂಟ್‌ನಲ್ಲಿ ಕಡತ ತಯಾರಿ ಮಾಡಬಹುದಿತ್ತು. ಆದುದರಿಂದ ತಂತ್ರಾಂಶ ತಯಾರಕರು ಉತ್ತಮ ಫಾಂಟ್ ತಯಾರಿ ಮಾಡುತ್ತಿದ್ದರು. ಯಾಕೆಂದರೆ ಫಾಂಟ್ ಅನ್ನು ಸುಮ್ಮನೆ ಪ್ರತಿ ಮಾಡಿಕೊಂಡು ಬಳಸಲು ಸಾಧ್ಯವಿರಲಿಲ್ಲ. ಅದನ್ನು ಕೊಂಡುಕೊಂಡವ ಮಾತ್ರ ಬಳಸಬಹುದಿತ್ತು.



ಯೂನಿಕೋಡ್ ವಿಧಾನದಲ್ಲಿ ಮಾಹಿತಿ, ಫಾಂಟ್ (ಅಕ್ಷರಶೈಲಿ) ಮತ್ತು ಕೀಲಿಮಣೆ– ಈ ಮೂರೂ ಸ್ವತಂತ್ರವಾಗಿವೆ. ಅಂದರೆ ನೀವು ವಿಂಡೋಸ್ ಕೀಲಿಮಣೆ ಬಳಸಿ 'ಶ್ರೀಲಿಪಿ' ಫಾಂಟ್ ಬಳಸಿದರೆ ಅದನ್ನು 'ಸಂಪಿಗೆ' ಫಾಂಟ್ ಬಳಸಿ ಲಿನಕ್ಸ್‌ನಲ್ಲಿ ಓದಬಹುದು. ಯೂನಿಕೋಡ್ ಫಾಂಟ್‌ಗಳನ್ನು (ಅವನ್ನು ಓಪನ್‌ಟೈಪ್ ಫಾಂಟ್ ಎನ್ನುತ್ತಾರೆ) ಹಂಚಿಕೊಂಡು ಬಳಸಬಹುದು. ಶ್ರೀಲಿಪಿಯವರು ಗ್ರಾಹಕರೊಬ್ಬರಿಗೆ ಉತ್ತಮ ಯೂನಿಕೋಡ್ ಫಾಂಟ್ ಮಾಡಿ ಮಾರಿದರೆ, ಅವರು ಅದನ್ನು ತಮ್ಮ ಸ್ನೇಹಿತರಿಗೆ ಹಂಚಿದರೆ ಅವರು ಕೂಡ ಅದನ್ನು ಬಳಸಬಹುದು. ಇದು ತಾಂತ್ರಿಕವಾಗಿ ಸಾಧ್ಯ. ಆದರೆ ಕಾನೂನುಬಾಹಿರ.

ನಮ್ಮಲ್ಲಿ ಹಕ್ಕುಸ್ವಾಮ್ಯದ ಬಗ್ಗೆ ಯಾರೂ ತಲೆ ಕೆಡಿಸಿಕೊಳ್ಳುವುದಿಲ್ಲ. ನಮ್ಮ ಕೆಲಸ ಆಗುತ್ತದೆಯೇ ಎಂದಷ್ಟೆ ನೋಡುವುದು. ಫಾಂಟ್ ಅನ್ನು ಯಾರು ಬೇಕಾದರೂ ಹಂಚಿಕೊಂಡು ಬಳಸಿಕೊಳ್ಳಬಹುದಾದ ಕಾರಣ ಯೂನಿಕೋಡ್‌ನಲ್ಲಿ ಉತ್ತಮ ಫಾಂಟ್‌ಗಳು ಕೆಲವೇ ಕೆಲವು ಬಂದಿವೆ. ಸರ್ಕಾರ ಇಲ್ಲಿ ಪ್ರವೇಶ ಮಾಡಿ ಉತ್ತಮ ಯೂನಿಕೋಡ್ ಫಾಂಟ್‌ಗಳು ತಯಾರಾಗುವಂತೆ ಮಾಡಿ ಜನರಿಗೆ ನೀಡಬೇಕು. ಕೆಲವು ಫಾಂಟ್‌ಗಳು ಬಂದಿವೆ. ಆದರೆ ಆಸ್ಕಿ ಫಾಂಟ್‌ಗಳಿಗೆ ಹೋಲಿಸಿದರೆ ಅವುಗಳ ಸಂಖ್ಯೆ ಕಡಿಮೆಯೇ. ಇದು ನಿಜವಾದ ಸಮಸ್ಯೆ; ಯೂನಿಕೋಡ್ ಸಮಸ್ಯೆ ಅಲ್ಲ.

ಲೇಖಕ: ತಂತ್ರಾಂಶ ತಜ್ಞ

ವಾಚಕರ ವಾಣಿ

ನೀರು ಲಭ್ಯ, ಸಂಗ್ರಹಕ್ಕೆ ಇಚ್ಛಾಶಕ್ತಿಯ ಕೊರತೆ

ಅಂತರ್ಜಲ ಮಾಲಿನ್ಯದಿಂದಾಗಿ ಕುಡಿಯುವ ಶುದ್ಧ ನೀರು ದುರ್ಲಭವಾಗುತ್ತಿದೆ ಎಂದು ಕೇಶವ ಕೊರ್ಸೆ ತಮ್ಮ ಲೇಖನದಲ್ಲಿ (ಪ್ರ.ವಾ., ನ. 15) ಅಭಿಪ್ರಾಯಪಟ್ಟಿದ್ದಾರೆ. ದೇಶದಲ್ಲಿ ಕುಡಿಯಲು, ಗೃಹ ಬಳಕೆಗೆ, ಕೃಷಿ, ಕೈಗಾರಿಕೆಗೆ ಯಥೇಚ್ಛವಾಗಿ ಪರಿಶುದ್ಧ ಮಳೆನೀರು ದೊರೆಯುತ್ತದೆ. ಆದರೆ ಮಳೆನೀರಿನ ಸಂಗ್ರಹ, ಜಾಣ್ಮೆಯ ಬಳಕೆ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡದೇ ಇರುವುದರಿಂದ ನೀರು ದುರ್ಲಭವಾಗುತ್ತಿದೆ.

ಮನೆಯ ತಾರಸಿ ಮೇಲೆ ಬೀಳುವ ಶುದ್ಧ ಮಳೆನೀರನ್ನು ಮನೆಯಲ್ಲಿ, ಹೊಲ- ಗದ್ದೆಗಳಲ್ಲಿ ಬೀಳುವ ಮಳೆ ನೀರನ್ನು ಕೃಷಿ ಹೊಂಡ ಹಾಗೂ ಕೆರೆಗಳಲ್ಲಿ ಸಂಗ್ರಹ ಮಾಡಿ ಬಳಸಬೇಕು. ಆಗ ನೀರು ಸಮೃದ್ಧಿಯಾಗಿ ಲಭಿಸಿ ಸಾಮಾಜಿಕ, ಆರ್ಥಿಕ ಬೆಳವಣಿಗೆಗೆ ಸಹಕಾರಿ ಆಗುತ್ತದೆ. ಇದಕ್ಕೆ ಇಸ್ರೇಲ್ ದೇಶ ನಿದರ್ಶನವಾಗಿದೆ. ಮಳೆ ನೀರಿನ ಸಂಗ್ರಹವು ಸುಸ್ಥಿರ ಅಭಿವೃದ್ಧಿಗೆ ಮಾರ್ಗ ಎಂಬುದನ್ನು ಕಡಿಮೆ ಮಳೆ ಬೀಳುವ ಇಸ್ರೇಲ್ ದೇಶ ತೋರಿಸಿಕೊಟ್ಟಿದೆ.

ಡಾ. ಎಚ್.ಆರ್.ಪ್ರಕಾಶ್, ಕೆ.ಬಿ.ದೊಡ್ಡಿ, ಮಂಡ್ಯ

ವಿಮಾನದಲ್ಲಿ ಇರಲಿ ಚಿಕಿತ್ಸಾ ಸೌಲಭ್ಯ

ವಿಮಾನ ಪ್ರಯಾಣದ ಸಂದರ್ಭದಲ್ಲಿ ಹೃದಯಾಘಾತಕ್ಕೆ ಒಳಗಾದ ವ್ಯಕ್ತಿಗೆ ಸಹಪ್ರಯಾಣಿಕ ವೈದ್ಯರೊಬ್ಬರು ಸಕಾಲದಲ್ಲಿ ಚಿಕಿತ್ಸೆ ನೀಡಿ ಜೀವ ಉಳಿಸಿರುವುದು (ಪ್ರ.ವಾ., ನ. 15) ಸಂತೋಷದ ಸಂಗತಿ. ಮನುಷ್ಯನಲ್ಲಿ ಕೆಲ ಸಂದರ್ಭಗಳಲ್ಲಿ ದೈವಿಕ ಶಕ್ತಿ ಬರುವುದು ಅತಿಶಯೋಕ್ತಿಯೇ. ವಿಮಾನದಲ್ಲಿ ವೈದ್ಯರನ್ನು ತೊಡಗಿಸಿಕೊಳ್ಳುವುದು ಸಕಲ ವಿಧದಲ್ಲೂ ಒಳ್ಳೆಯದು. ವೃದ್ಧರು, ಕಾಯಿಲೆಯಿಂದ ನರಳುತ್ತಿರುವ ರೋಗಿಗಳು ಕೂಡ ಪ್ರಯಾಣಿಸುವ ವಿಮಾನದಲ್ಲಿ ಶುಶ್ರೂಷೆಗೆ ದಾದಿಯರು, ವೈದ್ಯರ ಅವಶ್ಯಕತೆ ಇರುತ್ತದೆ. ವಿಮಾನಯಾನ ಸಂಸ್ಥೆಗಳು ಈ ದಿಸೆಯಲ್ಲಿ ಚಿಂತಿಸಬೇಕು.

ಬಾಲಕೃಷ್ಣ ಎಂ.ಆರ್., ಬೆಂಗಳೂರು

ಹೀಗೊಂದು ನಿಯಮ ಜಾರಿಯಾದರೆ...!

ಸರ್ಕಾರ ಹೀಗೊಂದು ನಿಯಮ ಮಾಡಿದರೆ ಹೇಗೆ?! ರಾಜ್ಯದ ಎಲ್ಲಾ ಶಾಲೆಗಳ ಕಟ್ಟಡಗಳನ್ನೂ ಜೀರ್ಣೋದ್ಧಾರ ಮಾಡಿ, ಅವೆಲ್ಲವೂ ಸುಸ್ಥಿತಿಯಲ್ಲಿವೆ ಎಂದು ಖಾತರಿಯಾದ ನಂತರವೇ ಅವುಗಳ ಗೋಡೆಗಳಿಗೆ ತಜ್ಞರು ಸೂಚಿಸಿದ ಬಣ್ಣ ಹಚ್ಚಬೇಕು. ನಗರದಲ್ಲಿ ಈಗಿರುವ ಎಲ್ಲಾ ರಸ್ತೆಗಳು ಹಾಗೂ ಹಳ್ಳಿ, ತಾಲ್ಲೂಕು, ಜಿಲ್ಲಾ ಮಟ್ಟದ ರಸ್ತೆಗಳು, ರಾಜ್ಯ ಹಾಗೂ ರಾಷ್ಟ್ರೀಯ ಹೆದ್ದಾರಿಗಳು ಗುಂಡಿಮುಕ್ತವಾದ ಬಳಿಕವಷ್ಟೇ ಹೊಸ ರಸ್ತೆಗಳ ನಿರ್ಮಾಣಕ್ಕೆ ಕೈ ಹಾಕಬೇಕು. ಈಗಿರುವ ಸರ್ಕಾರಿ ಆಸ್ಪತ್ರೆಗಳು ಜನರು ಚಿಕಿತ್ಸೆ ಪಡೆಯಲು ಯೋಗ್ಯ ಎಂದು ಖಾತರಿಯಾದ ನಂತರವೇ ಹೊಸ ಆಸ್ಪತ್ರೆ ನಿರ್ಮಾಣ ಮಾಡಬೇಕು. ಪ್ರಸ್ತುತ ಇರುವ ಮಹನೀಯರ ಪ್ರತಿಮೆಗಳು ನಿರ್ಮಾಣವಾಗಿದ್ದರಿಂದಲೇ ಅಂಥವರ ಆದರ್ಶಗಳನ್ನು ಅಲ್ಪಸ್ವಲ್ಪವಾದರೂ ಅಳವಡಿಸಿಕೊಳ್ಳಲು ಸಾಧ್ಯವಾಯಿತು ಎನ್ನುವವರು ಇದ್ದಾರೆಯೇ ಎಂದು ಸಮೀಕ್ಷೆ ನಡೆಸಿ, ಅವಶ್ಯವೆನಿಸಿದರೆ ಮಾತ್ರ ಹೊಸ ಪ್ರತಿಮೆಗಳ ನಿರ್ಮಾಣಕ್ಕೆ ಮುಂದಾಗಬೇಕು. ಇಂಥ ಕೆಲವು ಸಾಮಾಜಿಕ ನಡವಳಿಕೆಗಳನ್ನು ಜಾರಿಗೆ ತಂದರೆ ಒಳ್ಳೆಯದಾಗಬಹುದು.

ಡಾ. ಜಿ.ಬೈರೇಗೌಡ, ಬೆಂಗಳೂರು

ಮೌಲ್ಯಮಾಪನದಲ್ಲಿ ನಿರ್ಲಕ್ಷ್ಯ ಅಕ್ಷಮ್ಯ

ಒಂಬತ್ತು ಉಪನ್ಯಾಸಕರು ದ್ವಿತೀಯ ಪಿಯು ಪರೀಕ್ಷೆಯ ಮೌಲ್ಯಮಾಪನದಲ್ಲಿ ಪ್ರಮಾದ ಎಸಗಿ ಪದವಿ ಪೂರ್ವ ಶಿಕ್ಷಣ ಇಲಾಖೆಯಿಂದ ಅಮಾನತುಗೊಂಡಿರುವುದು (ಪ್ರ.ವಾ., ನ. 16) ನಿಜಕ್ಕೂ ಬೇಸರ ತರಿಸಿತು. ಇಡೀ ವರ್ಷದ ಓದಿನ ಕಸರತ್ತನ್ನು ವಿದ್ಯಾರ್ಥಿಗಳು ಮೂರು ಗಂಟೆಗಳ ಅವಧಿಯಲ್ಲಿ ಪರೀಕ್ಷಾ ಕೋಣೆಯಲ್ಲಿ ಪಣಕ್ಕಿಟ್ಟು ಉತ್ತರ ಬರೆದಿರುತ್ತಾರೆ. ಗುರುಗಳಾದವರು ಕಣ್ಣಲ್ಲಿ ಕಣ್ಣಿಟ್ಟು ಅದನ್ನು ಅವಲೋಕನ ಮಾಡಿ ಮಕ್ಕಳ ಭವಿಷ್ಯ ರೂಪಿಸಬೇಕು. ಸಂಭಾವನೆ, ವಿವಿಧ ಭತ್ಯೆಗಳ ಸೌಲಭ್ಯ ಪಡೆದು ಕೂಡ ಈ ರೀತಿ ಮಕ್ಕಳ ಭವಿಷ್ಯದ ವಿಷಯದಲ್ಲಿ ನಿರ್ಲಕ್ಷ್ಯ ತೋರುವುದು ಯಾವ ನ್ಯಾಯ?

ಸಂತೆಬೆನ್ನೂರು ಫೈಜ್ನಟ್ರಾಜ್, ಸಂತೆಬೆನ್ನೂರು

ಎಲ್ಲ ನೌಕರರೂ ಲಂಚಪೀಡಕರಲ್ಲ

ರಾಜ್ಯ ಸರ್ಕಾರವು ಸರ್ಕಾರಿ ನೌಕರರಿಗಾಗಿ ವೇತನ ಆಯೋಗ ರಚನೆ ಮಾಡಿರುವುದು ಜನವಿರೋಧಿ ಕ್ರಮ ಎನ್ನುವ ಸಿ.ರುದ್ರಪ್ಪ ಅವರ ಹೇಳಿಕೆಯು (ವಾ.ವಾ., ನ. 14) ಎಲ್ಲ ಸರ್ಕಾರಿ ನೌಕರರೂ ಭ್ರಷ್ಟರು ಎಂಬ ಅರ್ಥವನ್ನು ಧ್ವನಿಸುತ್ತದೆ. ಆದರೆ ವಾಸ್ತವವಾಗಿ ಎಲ್ಲ ನೌಕರರೂ ಲಂಚಪೀಡಕರಾಗಿ ಇರುವುದಿಲ್ಲ. ಅಲ್ಲದೆ ಎಲ್ಲ ನೌಕರರಿಗೂ ಒಂದೇ ರೀತಿಯಾದ ಸಂಬಳವೂ ಇರುವುದಿಲ್ಲ.

ಬದಲಾದ ಆರ್ಥಿಕ ಪರಿಸ್ಥಿತಿಯಿಂದ, ಹಣದುಬ್ಬರದಿಂದಾಗಿ 'ಸಿ' ಮತ್ತು 'ಡಿ' ಗ್ರೂಪ್‌ನ ಕೆಲವು ಸರ್ಕಾರಿ ನೌಕರರು ಸಾಲ ಮಾಡಿ ಜೀವನ ನಡೆಸುವಂತಹ ಸ್ಥಿತಿ ಇದೆ. ಅವರಿಗೂ ಅವರದ್ದೇ ಆದ ಕುಟುಂಬ ಇರುತ್ತದೆ. ಅಲ್ಲದೆ ಬೇರೆ ರಾಜ್ಯಗಳಿಗೆ ಹೋಲಿಸಿದರೆ ನಮ್ಮ ರಾಜ್ಯದಲ್ಲಿ ಸರ್ಕಾರಿ ನೌಕರರಿಗೆ ಅತಿ ಕಡಿಮೆ ವೇತನ ನೀಡಲಾಗುತ್ತಿದೆ. ಹೀಗಾಗಿ ರಾಜ್ಯ ಸರ್ಕಾರವು ವೇತನ ಆಯೋಗ ರಚನೆಗೆ ಮುಂದಾಗಿರುವುದು ಸರಿಯಾದ ಕ್ರಮವೇ ಆಗಿದೆ.

ಗಣೇಶ್ ಎಫ್.ಸಿ., ರಾಣೆಬೆನ್ನೂರು

ಪರಿಸರಸ್ನೇಹಿ ಬಣ್ಣ ಕಂಗೊಳಿಸಲಿ

ಸರ್ಕಾರಿ ಶಾಲಾ ಕೊಠಡಿಗಳಿಗೆ ಬಿಳಿ ಬಣ್ಣ ಬಳಿಯುವುದು ವೈಜ್ಞಾನಿಕವಾಗಿ ಸರಿ ಎನಿಸುತ್ತದೆ. ಕಾರಣ, ಬಿಳಿ ಬಣ್ಣವು ನೈಸರ್ಗಿಕ ಬೆಳಕನ್ನು ಹೀರಿ ಪ್ರತಿಫಲಿಸುವುದರಿಂದ ಹೆಚ್ಚಿನ ಬೆಳಕು ಚೆಲ್ಲುತ್ತದೆ. ಎಷ್ಟೋ ಗ್ರಾಮೀಣ ಶಾಲೆಗಳಲ್ಲಿ ಮಳೆಗಾಲದಲ್ಲಿ ದಿನಗಟ್ಟಲೆ ವಿದ್ಯುತ್ ಇರುವುದಿಲ್ಲ. ಅಂತಹ ಸಂದರ್ಭದಲ್ಲಿ ಬಿಳಿ ಬಣ್ಣವು ಕೊಂಚವಾದರೂ ಬೆಳಕು ನೀಡುತ್ತದೆ. ಹೆಚ್ಚಿನ ದೊಡ್ಡ ದೊಡ್ಡ ಸಭಾಂಗಣಗಳು, ಮದುವೆ ಹಾಲ್‌ಗಳು, ಐಷಾರಾಮಿ ಹೋಟೆಲ್‌ಗಳು ಸಾಮಾನ್ಯವಾಗಿ ಬಿಳಿ ಬಣ್ಣದಿಂದ (ಐವರಿ ವೈಟ್) ಕಂಗೊಳಿಸುತ್ತವೆ. ಇದು ಬಿಳಿ ಬಣ್ಣದ ಪ್ರಭಾವ.

ಬಿಳಿ ಬಣ್ಣ ನೋಡುಗರ ಮನಕ್ಕೆ ಹಿತ ತರುತ್ತದೆ. ಕೇಸರಿ ಬಣ್ಣ ಬಳಿದರೆ ಖಂಡಿತಾ ಅದು ಪ್ರತಿಫಲಿಸುವುದಿಲ್ಲ, ಕತ್ತಲೆಯೇ ಹೆಚ್ಚಾಗುತ್ತದೆ. ಹೀಗಾಗಿ ಶಾಲಾ ಕಾಲೇಜು ಕೊಠಡಿಗಳಿಗೆ ಬಿಳಿ ಬಣ್ಣ ಬಳಿದಲ್ಲಿ ಪರಿಸರಸ್ನೇಹಿ ಜೊತೆಗೆ ಅಂದವೂ ಹೆಚ್ಚುತ್ತದೆ. ಬಿಳಿ ಬಣ್ಣ ಶಾಂತಿಯ ಸಂಕೇತವೂ ಹೌದು.

ಪೂರ್ಣಿಮಾ ಎಚ್.ಎನ್., ಹೊಸನಗರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 089-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಜಿನೋಮಿಕ್ಸ್


ಕ್ಯಾನ್ಸರ್ ಪತ್ತೆಗೆ ಹನಿರಕ್ತ ಸಾಕು



ಲಿಕ್ವಿಡ್ ಬಯಾಪ್ಸಿ


ಯಾವುದೇ ವ್ಯಕ್ತಿಯಲ್ಲಿ ಕ್ಯಾನ್ಸರ್ ಇದೆಯೇ ಎಂಬುದನ್ನು ಪತ್ತೆ ಮಾಡಲು ಅಂಗಾಂಶವನ್ನು ಬಯಾಪ್ಸಿಗಾಗಿ ಕಳುಹಿಸುವುದು ಚಾಲ್ತಿಯಲ್ಲಿರುವ ವಿಧಾನ. ಪರೀಕ್ಷೆ ಮತ್ತು ಕ್ಯಾನ್ಸರ್ ಪತ್ತೆಗೆ ಸಾಕಷ್ಟು ಸಮಯ ಬೇಕಾಗುತ್ತಿತ್ತು. 'ಲಿಕ್ವಿಡ್ ಬಯಾಪ್ಸಿ' ವಿಧಾನ ಈಗಷ್ಟೇ ಮುಂದುವರೆದ ದೇಶಗಳ ಕೆಲವೇ ಕ್ಯಾನ್ಸರ್ ಆಸ್ಪತ್ರೆಗಳಲ್ಲಿ ಕಾಲಿಟ್ಟಿದೆ. ಲಿಕ್ವಿಡ್ ಬಯಾಪ್ಸಿ ಎಂದರೆ ರಕ್ತದ ಹನಿಗಳ ಮೂಲಕ ಕ್ಯಾನ್ಸರ್ ಪತ್ತೆ ಮಾಡುವುದು. ಕ್ಯಾನ್ಸರ್ ಕೋಶಗಳು ರಕ್ತದಲ್ಲಿ ಹರಿಯುತ್ತಿವೆಯೇ ಅಥವಾ ಕ್ಯಾನ್ಸರ್ ಗಡ್ಡೆಯ ಕೋಶಗಳ ಡಿಎನ್‌ಎ ರಕ್ತದಲ್ಲಿ ಇದೆಯೇ ಎಂಬುದನ್ನು ಪತ್ತೆ ಮಾಡಲಾಗುವುದು. ಈ ವಿಧಾನದಿಂದ ಆರಂಭದ ಹಂತದಲ್ಲಿಯೇ ಕ್ಯಾನ್ಸರ್ ಪತ್ತೆ ಮಾಡಬಹುದು. ಅಷ್ಟೇ ಅಲ್ಲದೆ ಇದಕ್ಕೆ ಯಾವ ರೀತಿಯ ಚಿಕಿತ್ಸೆ ನೀಡಿ ಗುಣಪಡಿಸಬಹುದು ಎಂಬುದನ್ನು ವೈದ್ಯರು ನಿರ್ಧರಿಸಬಹುದು. ಶ್ವಾಸಕೋಶ ಕ್ಯಾನ್ಸರ್ ಇದ್ದವರಲ್ಲಿ ಮತ್ತು ವೃದ್ಧರಲ್ಲಿ ಅಂಗಾಂಶವನ್ನು ಪಡೆಯುವುದು ಕಷ್ಟ, ಇಂತಹ ರೋಗಿಗಳಿಗೆ ಲಿಕ್ವಿಡ್ ಬಯಾಪ್ಸಿ ಅತ್ಯುತ್ತಮ ವಿಧಾನ.

ಭವಿಷ್ಯದ ಸಾಂಕ್ರಾಮಿಕ ಎದುರಿಸಲು ವಿಶ್ವ ಸಜ್ಜು



ಜಿನೋಮಿಕ್ ಕ್ರಾಂತಿಯಿಂದಾಗಿ ಭವಿಷ್ಯದಲ್ಲಿ ಯಾವುದೇ ರೀತಿಯ ಸಾಂಕ್ರಾಮಿಕ ಕಾಲಿಟ್ಟರೂ ಅದನ್ನು ನಿಭಾಯಿಸಲು ಜಗತ್ತು ಸಿದ್ಧವಿದೆ. ಕೋವಿಡ್‌ಗೆ ಅತಿ ತ್ವರಿತಗತಿಯಲ್ಲಿ ಲಸಿಕೆಗಳನ್ನು ಕಂಡು ಹಿಡಿಯಲು ಸಾಧ್ಯವಾಗಿದ್ದು ಜಿನೋಮಿಕ್ ತಂತ್ರಜ್ಞಾನದಿಂದ ಎನ್ನುತ್ತಾರೆ ಅಮೆರಿಕಾದ ಇಲ್ಯುಮಿನಿಯಾ ಇಂಕ್‌ನ ಹಿರಿಯ ಉಪಾಧ್ಯಕ್ಷ ಡಾ.ಜಯ್‌ದೀಪ್ ಗೋಸ್ವಾಮಿ. ಕೋವಿಡ್ ಹರಡಲಾರಂಭಿಸಿದ 60 ದಿನಗಳಲ್ಲಿ ಕೋವಿಡ್ ಲಸಿಕೆ ಕಂಡು ಹಿಡಿಯಲಾಯಿತು, 90 ದಿನಗಳಲ್ಲಿ ಫುಡ್ ಅಂಡ್ ಡ್ರಗ್ ಅಡ್ಮಿನಿಸ್ಟ್ರೇಷನ್‌ನಿಂದ(ಎಫ್‌ಡಿಎ) ಲಸಿಕೆ ಬಳಕೆಗೆ ಒಪ್ಪಿಗೆ ಸಿಕ್ಕಿತು. ಕೋವಿಡ್‌ನಿಂದಾಗಿ ರೂಪುಗೊಂಡಿರುವ ಸಂಶೋಧನಾ ವ್ಯವಸ್ಥೆ ಮತ್ತು ತಂತ್ರಜ್ಞಾನದಿಂದ ಭವಿಷ್ಯದ ಯಾವುದೇ ಸಾಂಕ್ರಾಮಿಕವನ್ನು ಎದುರಿಸಲು ಜಗತ್ತಿನ ವಿಜ್ಞಾನ ಸಮುದಾಯ ಸಿದ್ಧವಾಗಿದೆ ಎನ್ನುತ್ತಾರೆ ಅವರು.

ಜಿನೋಮಿಕ್ ಔಷಧದ ಯುಗ ಆರಂಭ



ಜಿನೋಮಿಕ್ ಔಷಧದ (ಮೆಡಿಸಿನ್) ಯುಗ ಆರಂಭವಾಗಿದೆ. ರೋಗಿಯ ವಂಶವಾಹಿ ಅಥವಾ ಡಿಎನ್‌ಎ ಮತ್ತು ಅವುಗಳು ವ್ಯಕ್ತಿಯ ಆರೋಗ್ಯದ ಜತೆ ಹೇಗೆ ಸ್ಪಂದಿಸುತ್ತವೆ ಎಂಬುದನ್ನು ಅಧ್ಯಯನ ಮಾಡಲಾಗುತ್ತದೆ. ವ್ಯಕ್ತಿಯ ಜೈವಿಕ ಮಾಹಿತಿಯನ್ನು ಬಳಸಿಕೊಂಡು ಆತನ ಆರೈಕೆಯನ್ನು ನಿರ್ಧರಿಸಲಾಗುತ್ತದೆ. ಆ ಬಳಿಕ ರೋಗಿಗೆ ವ್ಯಕ್ತಿಗತವಾಗಿ ಔಷಧ ನೀಡಲಾಗುತ್ತದೆ. ಈಗ ಇರುವಂತೆ ಏಕ ಪ್ರಕಾರದ ಔಷಧವನ್ನು ಕೊಡುವುದು ಕ್ರಮೇಣ ನಿಲ್ಲಬಹುದು. ವ್ಯಕ್ತಿಯ ವಂಶವಾಹಿಗಳ ವ್ಯವಸ್ಥೆಯ ಸಂಪೂರ್ಣ ಅಧ್ಯಯನ ನಡೆಸುವುದರಿಂದ ನಿರ್ದಿಷ್ಟ ಔಷಧಿಯನ್ನು ನಿರ್ಧಿಷ್ಟ ಅವಧಿಯೊಳಗೆ ಪರಿಣಾಮಕಾರಿಯಾಗಿ ನೀಡಬಹುದು. ವಿಶೇಷವಾಗಿ ಮಧುಮೇಹ, ಹೃದ್ರೋಗ, ಕ್ಯಾನ್ಸರ್ ಮತ್ತು ಅಸ್ತಮಾ ನಿರ್ವಹಣೆಗೆ ಈ ವಿಧಾನ ಅನುಕೂಲಕಾರಿ ಎನ್ನುತ್ತಾರೆ ಡಾ.ಜಯ್‌ದೀಪ್ ಗೋಸ್ವಾಮಿ.

ಪ್ರಜಾವಾಣಿ ಪ್ರಜಾಧ್ವನಿ

ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ



ಮುಂದಿನ ಜಿ-20 ಶೃಂಗಸಭೆಯ ಅಧ್ಯಕ್ಷತೆ ವಹಿಸಿರುವ ಭಾರತ ಜಾಗತಿಕ ಉದ್ವಿಗ್ನತೆ, ಆರ್ಥಿಕ ಕುಸಿತ, ಇಂಧನ ಬಿಕ್ಕಟ್ಟು ಅನ್ನು ಸಮರ್ಪಕವಾಗಿ ನಿರ್ವಹಿಸುವುದೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ತಂತ್ರಜ್ಞಾನದಿಂದ ಸಮಾನತೆ, ಸಬಲೀಕರಣ: ಮೋದಿ



ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆಯುತ್ತಿರುವ ಬೆಂಗಳೂರು ಟೆಕ್ ಶೃಂಗಸಭೆ 2022, ಸಂದರ್ಭದಲ್ಲಿ ಯುವತಿಯೋರ್ವಳು ಸೆಲ್ಫಿ ವಿಡಿಯೋದ 360 ಡಿಗ್ರಿ ಹೊಸ ತಂತ್ರಜ್ಞಾನವನ್ನು ಆನಂದಿಸುತ್ತಿರುವುದು ಜನರ ಗಮನ ಸೆಳೆಯಿತು. –ಪ್ರಜಾವಾಣಿ ಚಿತ್ರ: ಕಿಶೋರ್ ಕುಮಾರ್ ಬೋಳಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದಲ್ಲಿ ಸಮಾನತೆ ಮತ್ತು ಸಬಲೀಕರಣ ತರಲು ತಂತ್ರಜ್ಞಾನವನ್ನು ಯಶಸ್ವಿಯಾಗಿ ಬಳಸಿಕೊಳ್ಳಲಾಗುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ನಗರದ ಬೆಂಗಳೂರು ಅರಮನೆ ಆವರಣದಲ್ಲಿ ಬುಧವಾರ ಆರಂಭವಾದ 'ಬೆಂಗಳೂರು ಟೆಕ್ ಸಮ್ಮಿಟ್' ಉದ್ಘಾಟನಾ ಸಮಾರಂಭದಲ್ಲಿ ಪ್ರಧಾನಿಯವರ ಭಾಷಣದ ವಿಡಿಯೊ ಪ್ರದರ್ಶಿಸಲಾಯಿತು. ದೇಶದಲ್ಲಿ ತಂತ್ರಜ್ಞಾನದ ಬಳಕೆ, ಹೊಸ ಆವಿಷ್ಕಾರಗಳಿಗೆ ಉತ್ತೇಜನ ನೀಡುತ್ತಿರುವ ಕುರಿತು ಮಾತನಾಡಿದ ಅವರು, 'ಆಡಳಿತದಲ್ಲಿ ತಂತ್ರಜ್ಞಾನದ ಬಳಕೆಯು ಭ್ರಷ್ಟಾಚಾರದ ನಿಯಂತ್ರಣಕ್ಕೂ ನಾಂದಿ ಹಾಡಿದೆ' ಎಂದರು.

'ಭಾರತ ಈಗ ಮಾಹಿತಿ ತಂತ್ರಜ್ಞಾನದ ದೊಡ್ಡ ಹೆದ್ದಾರಿಯಾಗಿದೆ. ನೇರ ನಗದು ವರ್ಗಾವಣೆ ಯೋಜನೆ ಮೂಲಕ ಕೋಟ್ಯಂತರ ಜನರಿಗೆ ನೇರವಾಗಿ ಸರ್ಕಾರದ ನೆರವು ತಲುಪಿಸಲಾಗುತ್ತಿದೆ. ಶಿಕ್ಷಣ, ಜನಧನ್ ಯೋಜನೆ, ಆಧಾರ್, ಇ- ಮಾರುಕಟ್ಟೆ ಸೇರಿದಂತೆ ಅನೇಕ ಕ್ಷೇತ್ರಗಳಲ್ಲಿ ತಂತ್ರಜ್ಞಾನವನ್ನು ಯಶಸ್ವಿಯಾಗಿ ಬಳಸಿಕೊಳ್ಳಲಾಗುತ್ತಿದೆ. ಕೋವಿಡ್ ಸಂದರ್ಭದಲ್ಲಿ ಜಗತ್ತಿನ ಅತಿದೊಡ್ಡ ಲಸಿಕಾ ಅಭಿಯಾನ ಯಶಸ್ವಿಯಾಗಲು ತಂತ್ರಜ್ಞಾನದ ಬಲವೇ ಕಾರಣ ಎಂದು ಹೇಳಿದರು.

ಬೆಂಗಳೂರಿನ ಸಾಧನೆಗೆ ಶ್ಲಾಘನೆ

'ಸಂಶೋಧನೆ ಮತ್ತು ಆವಿಷ್ಕಾರಗಳ ಕಾರಣಕ್ಕಾಗಿ ಜಗತ್ತಿನ ಜನರು ಬೆಂಗಳೂರಿನತ್ತ ನೋಡುತ್ತಾರೆ. ಆವಿಷ್ಕಾರ ಸೂಚ್ಯಂಕದಲ್ಲಿ ಬೆಂಗಳೂರು ನಗರವು ದೇಶದಲ್ಲೇ ಅಗ್ರ ಸ್ಥಾನದಲ್ಲಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಶ್ಲಾಘಿಸಿದರು.

2015ರಲ್ಲಿ ಜಾಗತಿಕ ಆವಿಷ್ಕಾರ ಸೂಚ್ಯಂಕದಲ್ಲಿ ಭಾರತವು 81ನೇ ಸ್ಥಾನದಲ್ಲಿತ್ತು. ಈಗ 40ನೇ ಸ್ಥಾನಕ್ಕೇರಿದೆ. ದೇಶದಲ್ಲಿ 81,000 ನವೋದ್ಯಮಗಳಿದ್ದು, ಈ ಕ್ಷೇತ್ರದಲ್ಲಿ ಜಗತ್ತಿನ ಮೂರನೇ ಪ್ರಬಲ ಶಕ್ತಿಯಾಗಿ ಹೊರಹೊಮ್ಮಿದೆ ಎಂದರು.

ಕೈಗಾರಿಕಾ ಸಚಿವ ಮುರುಗೇಶ ನಿರಾಣಿ, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ, ಐ.ಟಿ ಮತ್ತು ಬಿ.ಟಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಇ.ವಿ. ರಮಣ ರೆಡ್ಡಿ, ನಿರ್ದೇಶಕಿ ಮೀನಾ ನಾಗರಾಜ್, ಬಿ.ಟಿ ವಿಷನ್ ಗ್ರೂಪ್ ಅಧ್ಯಕ್ಷೆ ಕಿರಣ್ ಮಜುಂದಾರ್ ಶಾ, ಐ.ಟಿ ವಿಷನ್ ಗ್ರೂಪ್ ಅಧ್ಯಕ್ಷ ಕ್ರಿಸ್ ಗೋಪಾಲಕೃಷ್ಣನ್, ನವೋದ್ಯಮಗಳಿಗೆ ಸಂಬಂಧಿಸಿದ ವಿಷನ್ ಗ್ರೂಪ್ ಅಧ್ಯಕ್ಷ ಪ್ರಶಾಂತ್ ಪ್ರಕಾಶ್, ರಾಜ್ಯ ಡಿಜಿಟಲ್ ಎಕಾನಮಿ ಮಿಷನ್ ಅಧ್ಯಕ್ಷ ಬಿ.ವಿ. ನಾಯ್ಡು, ಅಮೆರಿಕದ ಕಿಂಡ್ರಿಲ್ ಕಂಪನಿ ಅಧ್ಯಕ್ಷ ಮಾರ್ಟಿನ್ ಶ್ರೋಟರ್, ಬೆಂಗಳೂರು ಸಾಫ್ಟ್‌ವೇರ್ ಪಾರ್ಕ್ ಆಫ್ ಇಂಡಿಯಾ ನಿರ್ದೇಶಕ ಶೈಲೇಂದ್ರ ತ್ಯಾಗಿ ಇದ್ದರು.

> ಭವಿಷ್ಯದಲ್ಲಿ ಜಗತ್ತಿನ ಎಲ್ಲ ರಾಷ್ಟ್ರಗಳಲ್ಲಿ ಬಳಸುವ ತಂತ್ರಜ್ಞಾನಗಳಲ್ಲೂ ಭಾರತೀಯರ ಬೆರಳಚ್ಚುಗಳು ಇರಲಿವೆ. ತಂತ್ರಜ್ಞಾನ ಮಾತ್ರವಲ್ಲ ಶಿಕ್ಷಣ, ಹಣಕಾಸು ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಭಾರತ ಮುಂಚೂಣಿಯಲ್ಲಿ ಇರಲಿದೆ.
>
> **ಒಮರ್ ಬಿನ್ ಸುಲ್ತಾನ್ ಅಲ್ ಒಲಾಮ,** ಅರಬ್ ಸಂಯುಕ್ತ ಸಂಸ್ಥಾನದ ಕೃತಕ ಬುದ್ಧಿಮತ್ತೆ, ಡಿಜಿಟಲ್ ಆರ್ಥಿಕತೆ ಹಾಗೂ ರಿಮೋಟ್ ತಂತ್ರಾಂಶಗಳ ಖಾತೆ ರಾಜ್ಯ ಸಚಿವ

ಆರೋಗ್ಯ, ಕೃಷಿ ತಂತ್ರಜ್ಞಾನದಲ್ಲಿ ಹೂಡಿಕೆ ಹೆಚ್ಚಳ

ಬೆಂಗಳೂರು: ದೇಶದಲ್ಲಿ ವೆಂಚರ್ ಕ್ಯಾಪಿಟಲ್ (ವಿ.ಸಿ.) ಹೂಡಿಕೆಯು ಎರಡು ವರ್ಷಗಳಿಂದ ಉತ್ತಮ ಬೆಳವಣಿಗೆ ಕಂಡಿದೆ. ಡೀಪ್ ಟೆಕ್ನಾಲಜಿ (ಕೃತಕ ಬುದ್ಧಿಮತ್ತೆ, ಐಒಟಿ), ಬ್ಲಾಕ್‌ಚೈನ್, ಆರೋಗ್ಯ ತಂತ್ರಜ್ಞಾನ ಮತ್ತು ಕೃಷಿ ತಂತ್ರಜ್ಞಾನದಂತಹ ಹೊಸ ವಲಯಗಳಲ್ಲಿ ಹೆಚ್ಚಿನ ಹೂಡಿಕೆ ಆಗಲಿದೆ ಎನ್ನುವ ಅಭಿಪ್ರಾಯವು ಬೆಂಗಳೂರು ತಂತ್ರಜ್ಞಾನ ಶೃಂಗದ ವಿಚಾರಗೋಷ್ಠಿಯಲ್ಲಿ ವ್ಯಕ್ತವಾಯಿತು.

'ವೆಂಚರ್ ಕ್ಯಾಪಿಟಲ್ಸ್ ಲಾಂಗ್ ಟರ್ಮ್ ರೋಲ್ ಇನ್ ಡ್ರೈವಿಂಗ್ ಡಿಸ್‌ಪರ್ಸ್ಡ್ ಇನೊವೇಷನ್' ವಿಷಯದ ಕುರಿತು ಬುಧವಾರ ವಿಚಾರಗೋಷ್ಠಿ ನಡೆಯಿತು. ಪ್ರಧಾನ ಭಾಷಣ ಮಾಡಿದ ಈವ್‌ಕ್ಯಾಪ್ ವೆಂಚರ್ಸ್‌ನ ವ್ಯವಸ್ಥಾಪಕ ಪಾಲುದಾರ ತೇಜ್ ಕಪೂರ್, '2012ರಿಂದ 2022ರವರೆಗಿನ ಹೂಡಿಕೆಯನ್ನು ಗಮನಿಸಿದರೆ, 2021 ಮತ್ತು 2022ರಲ್ಲಿ ಹೂಡಿಕೆಯಲ್ಲಿ ಗಣನೀಯ ಹೆಚ್ಚಳ ಕಂಡುಬಂದಿದೆ. ಆದರೆ, ಈ ವರ್ಷ ಜಾಗತಿಕ ಮಟ್ಟದಲ್ಲಿ ಎದುರಾಗಿರುವ ಅನಿಶ್ಚಿತ ಪರಿಸ್ಥಿತಿಯಿಂದಾಗಿ ಕಳೆದ ವರ್ಷಕ್ಕೆ ಹೋಲಿಸಿದರೆ ಹೂಡಿಕೆಯಲ್ಲಿ ಇಳಿಕೆ ಆಗಿದೆ' ಎಂದು ತಿಳಿಸಿದರು.

'ಡೀಪ್ ಟೆಕ್ ಇನ್ನೂ ಆರಂಭಿಕ ಹಂತದಲ್ಲಿದೆ. ಹೀಗಾಗಿ ಅಂತಹ ನವೋದ್ಯಮಗಳಲ್ಲಿ ಹೆಚ್ಚಿನ ಹೂಡಿಕೆ ಅಷ್ಟು ಸೂಕ್ತ ಅನ್ನಿಸುತ್ತಿಲ್ಲ. ನಾನು ಹೂಡಿಕೆ ಮಾಡುತ್ತಿರುವ ನವೋದ್ಯಮಗಳಲ್ಲಿ ಎರಡು ಮಾತ್ರವೇ ಡೀಪ್ ಟೆಕ್‌ಗಳು ಇವೆ' ಎಂದು ಐಡಿಯಾಸ್ಪ್ರಿಂಗ್ ಕ್ಯಾಪಿಟಲ್‌ನ ಸ್ಥಾಪಕ ನಾಗಾನಂದ ದೊರೆಸ್ವಾಮಿ ಹೇಳಿದರು. ಆದರೆ, ಪೈ ವೆಂಚರ್ಸ್‌ನ ವ್ಯವಸ್ಥಾಪಕ ನಿರ್ದೇಶಕಿ ರೂಪನ್ ಅಲುಖಾ, 'ಡೀಪ್ ಟೆಕ್‌ಗಳು ಉತ್ತಮ ಬೆಳವಣಿಗೆ ಕಾಣುತ್ತಿವೆ. ಅವುಗಳಿಗೆ ಆದ್ಯತೆ ನೀಡುತ್ತಿದ್ದೇವೆ' ಎಂದರು.

ಭಾರತದಲ್ಲಿ ವೆಂಚರ್ ಕ್ಯಾಪಿಟಲ್ ಹೂಡಿಕೆ ವಿವರ

2018	₹54,120 ಕೋಟಿ
2019	₹91,020 ಕೋಟಿ
2020	₹82,000 ಕೋಟಿ
2021	₹3.15 ಲಕ್ಷ ಕೋಟಿ
2022	₹2.54 ಲಕ್ಷ ಕೋಟಿ

ದೇಶದಲ್ಲಿ ಯೂನಿಕಾರ್ನ್ ಬೆಳವಣಿಗೆ

15% ಮಹಿಳಾ ಸ್ಥಾಪಕಿ/ಸಹ ಸ್ಥಾಪಕಿ ಇರುವ ಯೂನಿಕಾರ್ನ್‌ಗಳ ಪ್ರಮಾಣ

326 2021ರವರೆಗೆ ಭಾರತದ ಯೂನಿಕಾರ್ನ್‌ಗಳು ಸ್ವಾಧೀನಪಡಿಸಿಕೊಂಡಿರುವ ನವೋದ್ಯಮಗಳ ಸಂಖ್ಯೆ

₹14.76 ಲಕ್ಷ ಕೋಟಿ 2023ರಲ್ಲಿ ಭಾರತದ ನವೋದ್ಯಮಗಳಲ್ಲಿ ಹೂಡಿಕೆ ಆಗಲಿರುವ ಒಟ್ಟು ಅಂದಾಜು ಮೊತ್ತ

150 2025ರ ವೇಳೆಗೆ ದೇಶದಲ್ಲಿನ ಯೂನಿಕಾರ್ನ್‌ಗಳ ಅಂದಾಜು ಸಂಖ್ಯೆ

ವೇದವ್ಯಾಸರ ಶಿವಪುರಾಣಸಾರ



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 277

ಬ್ರಹ್ಮನ ತಪ್ಪನ್ನು ಮನ್ನಿಸಿದ ಶಿವ

ಬ್ರಹ್ಮನನ್ನು ಕೊಲ್ಲಲು ಮುಂದಾದ ಶಿವನನ್ನು ದೇವತೆಗಳು ತಡೆದು, ಬ್ರಹ್ಮನನ್ನು ಕ್ಷಮಿಸುವಂತೆ ಪ್ರಾರ್ಥಿಸುತ್ತಾರೆ.

'ಜಗತ್ತಿಗೆ ಪಿತಾಮಹನೆನಿಸಿದ ಬ್ರಹ್ಮನು ನಿನ್ನ ಅನುಗ್ರಹದಿಂದ ರಜೋಗುಣಪ್ರಧಾನವಾಗಿ ಜಗತ್ಕರ್ತನಾಗಿದ್ದಾನೆ. ನಿನ್ನ ಅನುಗ್ರಹದಿಂದ ಲಭಿಸಿದ ಸತ್ತ್ವಗುಣದಿಂದ ಹರಿಯು ಜಗತ್ಪಾಲಕನಾಗಿದ್ದಾನೆ. ತಮೋಗುಣದಿಂದ ರುದ್ರನಾದ ನೀನು ಸಂಹಾರಕರ್ತನಾಗಿರುವೆ. ರುದ್ರನಾದ ನೀನೇ ಪರಮಾತ್ಮಸ್ವರೂಪ. ಹರಿಬ್ರಹ್ಮಾದಿಗಳಿಗಿಂತ ಶ್ರೇಷ್ಠ; ಜಗತ್ತೆಲ್ಲವನ್ನೂ ವ್ಯಾಪಿಸಿರುವ ಜಗನ್ನಾಥ. ಕಣ್ಣಿಗೆ ಗೋಚರಿಸುವ ಮಹಾಭೂತಗಳು, ಕಣ್ಣಿಗೆ ಕಾಣದ ಸೂಕ್ಷ್ಮ ಭೂತಗಳು, ಇಂದ್ರಿಯಗಳೆಲ್ಲವೂ ಜಗನ್ಮೂರ್ತಿಯಾದ ನಿನ್ನ ಸ್ವರೂಪವಾಗಿವೆ. ಅವುಗಳೆಲ್ಲ ನಿನ್ನ ಅಧೀನದಲ್ಲಿಯೇ ಇರುವುವು. ಸಪ್ತಸಮುದ್ರಗಳೇ ನಿನ್ನ ವಸ್ತ್ರಗಳು. ದಿಕ್ಕುಗಳೇ ನಿನಗೆ ಭುಜಗಳು. ಸ್ವರ್ಗವು ನಿನ್ನ ಶಿರಸ್ಸು. ಆಕಾಶವು ನಿನ್ನ ನಾಭಿಯು. ಗಾಳಿಯು ನಿನ್ನ ನಾಸಿಕ. ಅಗ್ನಿ, ಸೂರ್ಯ, ಚಂದ್ರರು ನಿನ್ನ ಮೂರು ಕಣ್ಣುಗಳು. ಮೇಘಗಳು ನಿನ್ನ ತಲೆಗೂದಲು. ನಕ್ಷತ್ರ, ತಾರಕ, ಗ್ರಹಗಳು ನಿನ್ನ ಆಭರಣಗಳು. ಇಂತಹ ವಿರಾಡ್ರೂಪನಾದ ನಿನ್ನನ್ನು ನಾವು ಹೇಗೆ ಸ್ತುತಿಸಬೇಕೋ ಗೊತ್ತಾಗುತ್ತಿಲ್ಲ. ನೀನು ಮಾತಿಗೂ ಮನಸ್ಸಿಗೂ ನಿಲುಕದ ಸ್ವರೂಪವುಳ್ಳವನಾಗಿರುವೆ. ಐದು ಮುಖವುಳ್ಳವನಾದ ನೀನು, ಐವತ್ತುಕೋಟಿ ರೂಪವುಳ್ಳವನಾಗಿ, ತ್ರಿಮೂರ್ತಿಸ್ವರೂಪನಾಗಿ, ಜ್ಞಾನರೂಪನಾಗಿ ಇಂದ್ರಿಯಗಳಿಗೆ ಅಗೋಚರನಾಗುವೆ. ಎಂಟು ದಿಕ್ಕುಗಳುಳ್ಳಂತಹ ವಿರಾಡ್ರೂಪವನ್ನು ಧರಿಸಿರುವ ಪರಮೇಶ್ವರನಿಗೆ ಕೋಟಿ ಕೋಟಿ ನಮಸ್ಕಾರ' ಎಂದು ದೇವತೆಗಳು ಸ್ತುತಿಸಿದಾಗ ಪರಮೇಶ್ವರ ಬ್ರಹ್ಮನನ್ನು ಕ್ಷಮಿಸಿ, ಅಭಯವನ್ನು ದಯಪಾಲಿಸಿದ.

ಬ್ರಹ್ಮ ಮರ್ದಿಸಿದ ರೇತಸ್ಸಿನಿಂದ ಮಹಾಕಾಂತಿಶಾಲಿಗಳಾದ ಅನೇಕ ಕಿಡಿಗಳು ಹುಟ್ಟಿದವು. ಜ್ವಲಿಸುವ ಆ ವೀರ್ಯದ ಕಣಗಳಿಂದ ವಾಲಖಿಲ್ಯರೆಂಬ ಸಾವಿರಾರು ಋಷಿಗಳು ಜನಿಸಿದರು. ಆ ಋಷಿಗಳೆಲ್ಲರೂ ಬ್ರಹ್ಮನ ಬಳಿಗೆ 'ತಂದೆ, ಓ ತಂದೆ' ಎನ್ನುತ್ತಾ ಬಂದರು. ಮುಜುಗರಕ್ಕೊಳಗಾದ ಬ್ರಹ್ಮ ಕೋಪದಿಂದ 'ವಾಲಖಿಲ್ಯರೇ, ನೀವೆಲ್ಲರೂ ಗಂಧಮಾದನ ಪರ್ವತಕ್ಕೆ ನಡೆಯಿರಿ. ಸೂರ್ಯನ ಶಿಷ್ಯರಾಗಿ ಘೋರತಪಸ್ಸನ್ನಾಚರಿಸಿ ಮಹಾಮುನಿಗಳಾಗಿ' ಎಂದ.

ಬ್ರಹ್ಮ ತನ್ನ ತಪ್ಪನ್ನು ಕ್ಷಮಿಸುವಂತೆ ಶಂಕರನ ಮುಂದೆ ಕೈಮುಗಿದು ನಿಂತು, 'ಮಹಾದೇವನೇ, ಜಗತ್ತಿನ ಎಲ್ಲ ಕಾರ್ಯಗಳನ್ನು ಮಾಡಿಸುವವನು ನೀನೇ. ನನ್ನ ಈ ಕುಕೃತ್ಯಕ್ಕೇ ಪ್ರೇರಕಶಕ್ತಿಯೂ ನೀನೇ. ನಿನ್ನ ಲೀಲೆ ಯಾರೂ ಊಹಿಸಲಾರರು. ನೀನೇ ಜಗತ್ತನ್ನು ಸೃಷ್ಟಿಸುವವನು, ಪಾಲಿಸುವವನು ಮತ್ತು ಸಂಹರಿಸುವವನು. ನಿನ್ನ ಇಚ್ಛೆಯಿಂದಲೇ ಜಗತ್ತೆಲ್ಲವೂ ನಿಂತಿದೆ. ಇದನ್ನು ಈಗ ನಾನು ಚೆನ್ನಾಗಿ ತಿಳಿದೆ' ಎಂದು ಭಕ್ತಿಯಿಂದ ಸ್ತುತಿಸಿದ.

ವಿಷ್ಣು ಮೊದಲಾದ ದೇವತೆಗಳು, ಮುನಿಗಳು, ಸಿದ್ಧರು ಮಹೇಶ್ವರನನ್ನು ಸ್ತುತಿಸಿದರು. ದೀನಸ್ತುತಿಯನ್ನು ಕೇಳಿ ಪ್ರಸನ್ನನಾದ ಶಿವ, ಎಲ್ಲರಿಗೂ ಅನುಗ್ರಹ ನೀಡಿದ. 'ಕಾಮಮಾಯೆ ಎಂಥವರ ಮನಸ್ಸನ್ನೂ ಹಾಳು ಮಾಡುತ್ತದೆ ಎಂಬುದಕ್ಕೆ ಸೃಷ್ಟಿಕರ್ತನಾದ ಬ್ರಹ್ಮನ ವರ್ತನೆಯೇ ಸಾಕ್ಷಿಯಾಗಿದೆ. ಇದಕ್ಕಾಗಿಯೇ ಕಾಮವಿಕಾರಗಳನ್ನು ನಿಗ್ರಹಿಸಿ, ನಾನು ಸದಾ ಧ್ಯಾನಾಸಕ್ತನಾಗಿರುತ್ತೇನೆ. ಧ್ಯಾನದಿಂದ ಮನಸ್ಸು ನಿರ್ಮಲವಾಗುತ್ತೆ, ಕೆಟ್ಟ ಆಲೋಚನೆಗಳು ಸುಳಿಯುವುದಿಲ್ಲ. ಧ್ಯಾನದ ಮಹಿಮೆಯನ್ನು ಭೂಲೋಕದ ಜನರಿಗೆಲ್ಲಾ ತಿಳಿಸಿ, ಜಗತ್ತು ನಿಷ್ಕಲ್ಮಶವಾಗಿರುವಂತೆ ಮಾಡಿ' ಎಂದು ಬೋಧಿಸಿದ.

ಇಲ್ಲಿಗೆ ಶ್ರೀಶಿವಮಹಾಪುರಾಣದಲ್ಲಿ ಪಾರ್ವತೀಖಂಡದ ನಲವತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

ಕಾಯಿಲೆಗಳ ನಿಯಂತ್ರಣಕ್ಕೆ ತಂತ್ರಜ್ಞಾನ ಒಳಗೊಂಡ ಸಮಗ್ರ ಯೋಜನೆ

ದೇಶದಲ್ಲಿ ಇನ್ನು 'ಒಂದು ಆರೋಗ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಶು ಸಂಗೋಪನೆ, ವನ್ಯಜೀವಿ ಮತ್ತು ಮನುಷ್ಯರನ್ನು ಒಳಗೊಳ್ಳುವ 'ಒಂದು ಆರೋಗ್ಯ' ಎನ್ನುವ ಸಮಗ್ರವಾದ ಯೋಜನೆ ದೇಶದಲ್ಲಿ ಶೀಘ್ರ ಜಾರಿಯಾಗಲಿದೆ.

ಕೋವಿಡ್ ಸಾಂಕ್ರಾಮಿಕ ಕಾಯಿಲೆ ಬಳಿಕ, ಇಂತಹ ಯೋಜನೆಯ ಅಗತ್ಯತೆಯನ್ನು ಕೇಂದ್ರ ಸರ್ಕಾರ ಮನಗಂಡಿದೆ. ಪ್ರಧಾನಮಂತ್ರಿ ಅವರ ವಿಜ್ಞಾನ, ತಂತ್ರಜ್ಞಾನ ಮತ್ತು ಆವಿಷ್ಕಾರಮಂಡಳಿ (ಪಿಎಂ-ಎಸ್‌ಟಿಐಎಸಿ) ಈ ಬಗ್ಗೆ ಶಿಫಾರಸ್ಸು ಮಾಡಿದ್ದು, ವಿವಿಧ ರೀತಿಯ ರೋಗಗಳ ಮೇಲೆ ತಂತ್ರಜ್ಞಾನಗಳ ಮೂಲಕ ನಿಗಾವಹಿಸಲು ಅನುಕೂಲವಾಗಲಿದೆ ಎಂದು ಪ್ರತಿಪಾದಿಸಲಾಗಿದೆ. ಜತೆಗೆ ಸಾಂಕ್ರಾಮಿಕ ಮತ್ತು ಸಾಂಕ್ರಾಮಿಕವಲ್ಲದ ರೋಗಗಳ ನಿಯಂತ್ರಣಕ್ಕೆ, ಲಸಿಕೆಗಳ ಸಂಶೋಧನೆಗೆ ಆದ್ಯತೆ ದೊರೆಯಲಿದೆ.

'ಬೆಂಗಳೂರು ಟೆಕ್‌ಸಮ್ಮಿಟ್'ನಲ್ಲಿ ಬುಧವಾರ ನಡೆದ ಭಾರತದ ಅಭಿವೃದ್ಧಿಯಲ್ಲಿ ತಂತ್ರಜ್ಞಾನಗಳ ಕ್ರಾಂತಿಯ ಸಮ್ಮಿಲನ ಕುರಿತ ಗೋಷ್ಠಿಯಲ್ಲಿ ಈ ಬಗ್ಗೆ ವಿವರಿಸಿದ ಕೇಂದ್ರ ಸರ್ಕಾರದ ಪ್ರಧಾನ ವೈಜ್ಞಾನಿಕ ಸಲಹೆಗಾರ ಪ್ರೊ. ಅಜಯ್ ಕೆ. ಸೂದ್, 'ಹತ್ತು ಸಚಿವಾಲಯಗಳು ಒಂದು ಆರೋಗ್ಯ ಯೋಜನೆಗಾಗಿ ಕಾರ್ಯನಿರ್ವಹಿಸುತ್ತಿವೆ. ಮನುಷ್ಯರು ಮತ್ತು ಪ್ರಾಣಿಗಳನ್ನು ಒಳಗೊಂಡ ಸಮಗ್ರವಾದ ಅತಿ ದೊಡ್ಡ ಯೋಜನೆ ಇದಾಗಿದೆ' ಎಂದು ವಿವರಿಸಿದರು.

'ಇದುವರೆಗೆ ಪಶುಸಂಗೋಪನೆ, ವನ್ಯಜೀವಿಗಳು ಮತ್ತು ನಾಗರಿಕರ ಆರೋಗ್ಯ ರಕ್ಷಣೆ ವಿಷಯಗಳನ್ನು ಪ್ರತ್ಯೇಕವಾಗಿಯೇ ಕಾಣಲಾಗುತ್ತಿತ್ತು. ಆದರೆ, ಕೋವಿಡ್ ನಂತರ ಸನ್ನಿವೇಶಗಳು ಬದಲಾಗಿವೆ. ಹೀಗಾಗಿ, ಅತ್ಯಾಧುನಿಕ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ಈ ಯೋಜನೆ ಜಾರಿಗೊಳಿಸಲಾಗುವುದು. ಇದರಿಂದ, ಪ್ರಾಣಿಗಳಿಂದ ಹರಡಬಹುದಾದ ಕಾಯಿಲೆಗಳನ್ನು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವ ಮೂಲಕವೇ ನಿಯಂತ್ರಿಸಬಹುದಾಗಿದೆ' ಎಂದು ತಿಳಿಸಿದರು.

'ವಿವಿಧ ಲಸಿಕೆಗಳಿಗೆ ತಂತ್ರಜ್ಞಾನ ಅಭಿವೃದ್ಧಿಪಡಿಸುವ ಸಂಶೋಧನೆಗೆ ಪ್ರೋತ್ಸಾಹ ನೀಡಲಾಗುವುದು. ಭವಿಷ್ಯದಲ್ಲಿ ನಾಗರಿಕರು ಮತ್ತು ಪ್ರಾಣಿಗಳ ಮೂಲಕ ಹಬ್ಬುವ ಸಾಂಕ್ರಾಮಿಕ ಕಾಯಿಲೆಗಳನ್ನು ನಿಯಂತ್ರಿಸಲು ಸಮಗ್ರ ಮಾಹಿತಿ ವ್ಯವಸ್ಥೆಯನ್ನು ಕ್ರೋಢೀಕರಿಸಲು ಮಹತ್ವ ನೀಡಲಾಗುವುದು. ಜತೆಗೆ, ಅಂತರ ಸಚಿವಾಲಯಗಳ ನಡುವೆ ಸಮನ್ವಯ, ಸಹಯೋಗ ಮತ್ತು ಸಂಪರ್ಕ ಸಾಧಿಸುವುದು ಸಹ ಅತ್ಯಂತ ಮಹತ್ವದ್ದಾಗಿದೆ' ಎಂದು ಮಾಹಿತಿ ನೀಡಿದರು.

ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್ಸಿ) ಮಾಜಿ ನಿರ್ದೇಶಕ ಪ್ರೊ. ಪದ್ಮನಾಭನ್ ಗೋವಿಂದರಾಜನ್ ಇದ್ದರು.


'6ಜಿ'ಗೆ ಕೇಂದ್ರದ ಸಿದ್ಧತೆ



ಪ್ರೊ. ಅಜಯ್ ಕೆ. ಸೂದ್

ದೇಶದಲ್ಲಿ ಈಗಾಗಲೇ '5ಜಿ' ತಂತ್ರಜ್ಞಾನ ಜಾರಿಗೊಳಿಸಲಾಗಿದ್ದು, ಈಗ '6ಜಿ' ಅನುಷ್ಠಾನಕ್ಕೆ ಕೇಂದ್ರ ಸರ್ಕಾರ ಸಿದ್ಧತೆಗಳನ್ನು ಕೈಗೊಂಡಿದೆ ಎಂದು ಪ್ರೊ. ಅಜಯ್ ಕೆ. ಸೂದ್ ತಿಳಿಸಿದರು. ಈ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಲು ದೂರಸಂಪರ್ಕ ಇಲಾಖೆ ಈಗಾಗಲೇ 6ಜಿ ತಂತ್ರಜ್ಞಾನ ಆವಿಷ್ಕಾರ ಸಮಿತಿಯವನ್ನು ರಚಿಸಿದೆ. ಸಂಶೋಧನೆ ಮತ್ತು ತಂತ್ರಜ್ಞಾನ ಅಭಿವೃದ್ಧಿ ಕೈಗೊಳ್ಳಲು ನೀಲನಕಾಶೆ ರೂಪಿಸುವುದು ಸಮಿತಿಯ ಹೊಣೆಯಾಗಿದೆ. ಜತೆಗೆ, ಭಾರತವನ್ನು ಈ ತಂತ್ರಜ್ಞಾನದಲ್ಲಿ ಮುಂಚೂಣಿಯಲ್ಲಿರುವಂತೆ ಯೋಜನೆಗಳನ್ನು ರೂಪಿಸುವುದಾಗಿದೆ ಎಂದು ತಿಳಿಸಿದರು.

ಗುಂಡಣ್ಣ



ಬೆರಗಿನ ಬೆಳಕು



ಗುರುರಾಜ ಕರಜಗಿ

ಸ್ವಂತ ಯಜಮಾನಿಕೆಯ ಬಾಳು

ಔದಾರ್ಯ ತಾಯಿ ನೀತಿಗೆ, ಧೈರ್ಯವೇ ತಂದೆ |
ಸ್ವಾಧಿಪತ್ಯದೆ ನೀನು ಬಾಳನಾಳುವೊಡೆ ||
ಹೋದುದನು ನೆನೆಯದಿರು, ಬರುವುದಕೆ ಸಿದ್ಧನಿರು
ಆದನಿತು ಸಂತೋಷ – ಮಂಕುತಿಮ್ಮ || 758 ||

ಪದ-ಅರ್ಥ: ಸ್ವಾಧಿಪತ್ಯದೆ = ಸ್ವ + ಅಧಿಪತ್ಯದೆ, ಬಾಳನಾಳುವೊಡೆ = ಬಾಳನು + ಆಳುವೊಡೆ(ಆಳಿದರೆ), ಆದನಿತು = ಆದ + ಅನಿತು(ಅಷ್ಟು)

ವಾಚ್ಯಾರ್ಥ: ನಿನ್ನ ಇಚ್ಛೆಯಂತೆ, ನಿನ್ನ ಆಡಳಿತದಲ್ಲಿಯೇ ಬದುಕು ಸಾಗಿಸಬೇಕೆಂದಿದ್ದರೆ ಕೆಲವು ನೀತಿಗಳು ಇರಬೇಕು. ಅಂಥ ನೀತಿಗೆ ಔದಾರ್ಯವೇ ತಾಯಿ, ಧೈರ್ಯವೇ ತಂದೆ. ಆಗಿ ಹೋದದ್ದನ್ನು ನೆನೆಯಬೇಡ, ಮುಂದೆ ಆಗುವುದಕ್ಕೆ ಸಿದ್ಧನಿರು. ದೊರೆತದ್ದಕ್ಕೆ ಸಂತೋಷಪಡು.

ವಿವರಣೆ: ಸ್ವಾಧಿಪತ್ಯವೆಂದರೆ ಸ್ವ-ಅಧಿಪತ್ಯ. ಹಾಗೆಂದರೆ ಸ್ವಂತ ಆಡಳಿತ ಅಥವಾ ಸ್ವಂತ ಒಡೆತನ. ಮತ್ತೊಬ್ಬರ ಒಡೆತನದಲ್ಲಿ ಕೆಲಸಮಾಡುವಾಗ ಯಜಮಾನರು ಹೇಳಿದ ಹಾಗೆ ಕಾರ್ಯಮಾಡಲೇಬೇಕಾಗುತ್ತದೆ. ಅದರಲ್ಲಿ ಒಂದು ಅನುಕೂಲವೂ ಇದೆ, ಮತ್ತೊಂದು ಅನಾನುಕೂಲವೂ ಇದೆ. ಅನುಕೂಲವೆಂದರೆ ನಾವು ತಲೆಕೆಡಿಸಿಕೊಳ್ಳಬೇಕಾಗಿಲ್ಲ, ಅವರು ಹೇಗೆ ಹೇಳುತ್ತಾರೋ ಹಾಗೆ ಮಾಡಿದರಾಯಿತು. ಆ ಕಾರ್ಯದ ಯಶಸ್ಸು ಮತ್ತು ವೈಫಲ್ಯ ಅವರಿಗೆ ಸೇರಿದ್ದು. ಕಾರ್ಯಮಾಡಲು ಬೇಕಾಗುವ ಉಪಾಯಗಳು, ಸಾಧನಗಳು ಎಲ್ಲವೂ ಯಜಮಾನರದೇ. ಅನಾನುಕೂಲವೆಂದರೆ, ನಮಗೆ ಒಳ್ಳೆಯ ಉಪಾಯ ಹೊಳೆದಿದ್ದರೂ ಅದನ್ನು ಮಾಡುವಂತಿಲ್ಲ. ಸ್ವಾತಂತ್ರ್ಯವಿಲ್ಲ. ನಾವು ಚೆನ್ನಾಗಿ ಪರಿಶ್ರಮದಿಂದ ದುಡಿದರೂ ಫಲ ನಮಗೆ ದಕ್ಕುವುದಿಲ್ಲ. ಆದರೆ ಒಡೆತನ, ಆಳ್ವಿಕೆ ನಮ್ಮದೇ ಆದಾಗ ನಮಗೆ ತೋಚಿದಂತೆ ಕೆಲಸ ಮಾಡಬಹುದು. ಜವಾಬ್ದಾರಿ ತುಂಬ ಹೆಚ್ಚಾಗುತ್ತದೆ. ಕಾರ್ಯ ನಕ್ಷೆ, ನೀತಿ, ವಿಧಾನಗಳು ಸಂಪೂರ್ಣವಾಗಿ ನಮ್ಮದೇ ಆಗುತ್ತವೆ.

ಕಗ್ಗ ಅದನ್ನು ತಿಳಿಸುತ್ತದೆ. ನಾವು ನಮ್ಮ ಬದುಕನ್ನು ಸಂಪೂರ್ಣವಾಗಿ ನಮ್ಮ ಅಧಿಪತ್ಯದಲ್ಲೇ ನಡೆಸುವುದಾದರೆ ಅದಕ್ಕೊಂದು ನೀತಿ ನಿರ್ದೇಶನವಿರಬೇಕು ಯಾವ ನೀತಿಗಳಿಂದ ಜೀವನ ಹಸನಾದೀತು ಎಂಬುದನ್ನು ಅದು ತೋರಿಸುತ್ತದೆ. ಈ ನೀತಿಗೆ ತಾಯಿ ಔದಾರ್ಯ. ಔದಾರ್ಯವೆಂಬುದು ಮತ್ತೊಬ್ಬರ ಕಷ್ಟಕ್ಕೆ, ನೋವಿಗೆ ತನ್ನ ಆತ್ಮತೃಪ್ತಿಯ ಸ್ವಾರ್ಥವೂ ಇಲ್ಲದೆ ತೋರುವ ಪ್ರತಿಸ್ಪಂದನ. ಹೀಗೆ ನಿಸ್ವಾರ್ಥವಾದ ಔದಾರ್ಯ ತೋರಲು ಮೊದಲು ಧೈರ್ಯಬೇಕು. ಪರರ ಟೀಕೆಗಳಿಗೆ, ನಿಂದೆಗಳಿಗೆ ಮಣಿಯದ, ಕುಗ್ಗದ ಧೈರ್ಯ, ಔದಾರ್ಯಕ್ಕೆ ಅಡಿಪಾಯ. ಹೆದರುಪುಕ್ಕನಾದವನು ಉದಾರಿಯಾಗಲಾರ. ಆದ್ದರಿಂದ ತನ್ನದೇ ಯಜಮಾನಿಕೆಯಲ್ಲಿ ಜೀವನ ನಡೆಸಬೇಕೆನ್ನುವವನು ಮೊದಲು ಧೈರ್ಯವನ್ನು ಪಡೆದು ಔದಾರ್ಯವನ್ನು ತೋರಬೇಕು. ಕಗ್ಗ ಇನ್ನೊಂದು ನೀತಿಯನ್ನು ಸೂಚಿಸುತ್ತದೆ. ಅದು ವರ್ತಮಾನದಲ್ಲಿ ಬದುಕುವ ರೀತಿ. ಹಿಂದೆ ಆಗಿ ಹೋದದ್ದನ್ನು ನೆನೆಯುತ್ತ ಕುಳಿತರೆ ಯಾವ ಪ್ರಯೋಜನವೂ ಇಲ್ಲ. ಯಾಕೆಂದರೆ ನಾವದನ್ನು ಬದಲಿಸಲಾರೆವು. ಭವಿಷ್ಯದ ಗರ್ಭದಲ್ಲಿ ಏನಿದೆಯೋ ತಿಳಿದಿಲ್ಲ. ಅದಕ್ಕಾಗಿ ವಿಪರೀತವಾದ ಆತಂಕ ಬೇಕಿಲ್ಲ. ಆದ್ದರಿಂದ ಸತ್ತುಹೋದ ಭೂತ ಮತ್ತು ಇನ್ನೂ ಹುಟ್ಟದ ಭವಿಷ್ಯಗಳ ಚಿಂತೆಯಲ್ಲಿ ನಲುಗಿ ಹೋಗುವುದರ ಬದಲು ಇಂದು, ವರ್ತಮಾನದಲ್ಲಿ ದೊರಕಿದ, ನಮ್ಮ ಶಕ್ತಿ, ಪರಿಶ್ರಮಗಳಿಗೆ ದಕ್ಕಿದ ಸಂತೋಷವನ್ನು ಅನುಭವಿಸುವುದು ಬದುಕನ್ನು ಹಗುರಾಗಿಸಿಕೊಳ್ಳುವ ದಾರಿ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಗುರುವಾರ ನವೆಂಬರ್ 17, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಕೃಷ್ಣ ಅಷ್ಟಮಿ ಗಂ. 07-57 ನಕ್ಷತ್ರ: ಮಘಾ ಗಂ. 21-21 ಯೋಗ: ಐಂದ್ರ ಗಂ. 25-23, ಕರಣ: ಕೌಲವ ಗಂ. 07-57, ತುಲಾ ಮಾಸದ 30 ನೇ ದಿನ. ರಾಹುಕಾಲ : ಮಧ್ಯಾಹ್ನ 01-30 – 03-00

ಸೂರ್ಯೋದಯ : 06-34 ಸೂರ್ಯಾಸ್ತ : 05-57

ಮುಸ್ಲಿಂ ದಿನಾಂಕ : 21 ರಬಿಯುಸ್ಸಾನಿ

ದಿನ ವಿಶೇಷ : ಲಾಲಾ ಲಜಪತರಾಯ್ ಪುಣ್ಯ ಸ್ಮರಣೆ

ಅದೃಷ್ಟ ಸಂಖ್ಯೆ : 2, 8

ಮೇಷ: ಅತಿಯಾಗಿ ಪ್ರೀತಿಸುವ ಹಾಗೂ ಆದರಿಸುವ ಜನರೊಂದಿಗೆ ಕಾಲ ಕಳೆಯಲು ಈ ದಿನ ಸಕಾಲ. ದೈಹಿಕ ಶಕ್ತಿ ಹೆಚ್ಚುವುದರಿಂದ ಕೆಲಸದಲ್ಲಿ ಉತ್ತಮ ಅಭಿವೃದ್ಧಿ ಕಾಣುವಿರಿ. ಯಾವುದೇ ಕಟ್ಟುಪಾಡಿಗೆ ಸಿಕ್ಕಿಕೊಳ್ಳಬೇಡಿ.

ವೃಷಭ: ಶುಭ ಸಮಾಚಾರಗಳನ್ನು ಕೇಳುವುದಲ್ಲದೆ ಪ್ರಯತ್ನಿಸಿದ ಎಲ್ಲಾ ಕಾರ್ಯಗಳಲ್ಲಿ ಯಶಸ್ಸು ಪಡೆಯುವಿರಿ. ಅವಶ್ಯ ವಸ್ತುಗಳ ಗಳಿಕೆಯಿಂದ ಸಂತೋಷ. ಅನೇಕ ರೀತಿಯಲ್ಲಿ ನಿಮಗೆ ಈ ದಿನ ಅದೃಷ್ಟದ ದಿನವೆನಿಸಲಿದೆ.

ಮಿಥುನ: ಕೊಡು ಕೊಳ್ಳುವ ವ್ಯವಹಾರಗಳಲ್ಲಿ ಹೆಚ್ಚಿನ ಲಾಭ ಕಂಡು ಕೆಲಸ ವೃದ್ಧಿಸಿಕೊಳ್ಳುವಿರಿ. ತಂದೆಯ ಮನಸ್ಸಿಗೆ ನೋವಾಗುವ ಸಂಗತಿಯು ಇಂದು ನಿಮ್ಮಿಂದ ನಡೆಯಲಿದೆ. ವಿವಾಹಯೋಗ್ಯರಿಗೆ ವಿವಾಹ ಭಾಗ್ಯ ಒದಗಿಬರುವುದು.

ಕರ್ಕಾಟಕ: ತಾಂತ್ರಿಕ ವಿದ್ಯಾರ್ಥಿಗಳು ನಿಮ್ಮ ವಿನೂತನ ಯೋಜನೆಯನ್ನು ಮಂಡಿಸುವಲ್ಲಿ ಯಶಸ್ವಿಯಾಗುವಿರಿ. ಆರ್ಥಿಕವಾಗಿ ಸಾಕಷ್ಟು ಸಂಪಾದನೆಯಾಗುವುದರಿಂದಅನಿವಾರ್ಯದ ಖರ್ಚಿಗೇನೂ ಯೋಚನೆ ಇರುವುದಿಲ್ಲ.

ಸಿಂಹ: ಸ್ವಯಂಕೃತ ತಪ್ಪುಗಳಿಂದ ವ್ಯವಹಾರದಲ್ಲಿ ಕೊಂಚ ಹಿನ್ನಡೆಯುಂಟಾಗುವ ಲಕ್ಷಣ ತೋರುವುದು. ಗಂಡ-ಹೆಂಡತಿಯ ಮಧ್ಯದಲ್ಲಿ ಅನಗತ್ಯ ವಿವಾದ ಬೇಡ. ಉದರ ವೇದನದಿಂದ ಬಳಲುವ ಸಾಧ್ಯತೆ ಇರುವುದು.

ಕನ್ಯಾ: ಹಿತ್ತಾಳೆ, ತಾಮ್ರದಂತಹ ಲೋಹದ ವಸ್ತುಗಳ ವ್ಯಾಪಾರಿಗಳಿಗೆ ಸಂಪಾದನೆ ಹೆಚ್ಚಳವಾಗಲಿದೆ. ಶುಭ ಮಂಗಳ ಕಾರ್ಯಗಳಿಗೆ ಅಡ್ಡಿ-ಆತಂಕ ಯಾವುದು ಇರುವುದಿಲ್ಲ. ಜಟಿಲ ಸಮಸ್ಯೆಗಳು ಬಗೆಹರಿಯುವುದು.

ತುಲಾ: ಸಂಸ್ಥೆಯ ಹತ್ತಾರು ಜನರಿಗೆ ಮಾರ್ಗದರ್ಶನ ಮಾಡಬೇಕಾಗುವುದು. ಆದ್ದರಿಂದ ವೃತ್ತಿಯ ಬಗ್ಗೆ ಆಳವಾದ ಮಾಹಿತಿ ತಿಳಿದುಕೊಳ್ಳುವುದು ಉತ್ತಮ. ಮಕ್ಕಳಿಂದ ಅಹಿತ ಕಾರ್ಯಗಳು ಸಂಭವಿಸಬಹುದು.

ವೃಶ್ಚಿಕ: ಈ ದಿನ ನಿಮಗೆ ಬರುವ ನೂತನ ಮನೋಭಿಲಾಷೆ, ಯೋಚನೆಗಳು ಖರ್ಚಿಗೆ ದಾರಿಯಾದರೂ ಮುಂದಿನ ದಿನಗಳಲ್ಲಿ ಉಪಕಾರಿಯಾಗಿರುತ್ತದೆ. ಷೇರುಪೇಟೆಯಿಂದ ಲಾಭ ಗಳಿಸುವಿರಿ. ಅದೃಷ್ಟದಾಯಕ ದಿನವಾಗಿರುತ್ತದೆ.

ಧನು: ಹೂವು-ಹಣ್ಣು ಮಾರಾಟಗಾರರಿಗೆ ಲಾಭವು ದುಪ್ಪಟ್ಟಾಗಲಿದೆ. ಯಂತ್ರೋಪಕರಣಗಳ ರಿಪೇರಿ ಮತ್ತು ಮಾರಾಟದಿಂದ ಮತ್ತು ಪಶು ಸಂಗೋಪನೆಯಿಂದ ಲಾಭ ಇರುವುದು. ಅವಿವಾಹಿತರಿಗೆ ಶುಭ ಫಲ ಲಭಿಸುವುದು.

ಮಕರ: ಜೀವನದ ಅಭಿವೃದ್ಧಿಗೆ ಬೇಕಾದ ಕಾರ್ಯಗಳು ನಿರಂತರವಾಗಿ ಮುಂದುವರಿಯಲಿದೆ. ನಿವೇಶನಗಳ ಖರೀದಿಯ ಆಲೋಚನೆಗೆ ಪೂರಕವಾದ ವಾತಾವರಣ ಸ್ನೇಹಿತರಿಂದ ಸಿಗಲಿದೆ. ಆರೋಗ್ಯದ ಬಗ್ಗೆ ನಿಗಾ ವಹಿಸಿ.

ಕುಂಭ: ನಾನಾ ರೀತಿಯಲ್ಲಿ ಹಣವು ನಿಮ್ಮ ಕೈ ಸೇರಲಿದೆ. ಬಂಧು ಮಿತ್ರರಿಂದ ಉತ್ತಮ ಸಹಕಾರ ಲಭ್ಯವಾಗುವುದು. ಗಣ್ಯ ವ್ಯಕ್ತಿಗಳಿಗೆ ಸಮಾಜ ಮತ್ತು ರಾಜಕೀಯ ಕ್ಷೇತ್ರದಲ್ಲಿ ಸ್ಥಾನ-ಮಾನ, ಗೌರವಗಳು ಲಭಿಸಲಿದೆ.

ಮೀನ: ಎಣಿಕೆಯಂತೆ ಕಾರ್ಯಗಳು ಸಿದ್ಧಿಸುವುದು. ಆದರೇ, ಗಣನೀಯವಾದ ಆದಾಯವಿದ್ದರೂ ಅದರ ಜೊತೆಯಲ್ಲಿಯೇ ಬಹುಮುಖದ ಖರ್ಚು-ವೆಚ್ಚಗಳನ್ನು ನಿರ್ವಹಿಸ ಬೇಕಾಗಬಹುದು. ಹಸಿರು ಬಣ್ಣ ಶುಭ ತರಲಿದೆ.

ಪದಬಂಧ 5141


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಅತಿಯಾದ ಬಾಯಾರಿಕೆ (4)
3.ಪ್ರತೀ ಸಲ ಹೂಡುವ ಯುಕ್ತಿ (4)
5.ತುತ್ತು ತಿರುವುಮುರುವಾಗಿಬಿಟ್ಟಿದೆ (3)
6.ತಡವಾಗಿ ಪ್ರಾರಂಭವಾದ ತಬ್ಬಿಬ್ಬು! (4)
7.ಕೊನೆಗೆ ಪತಿಯೊಡನಿರುವ ಸೇನಾನಾಯಕ (4)
9.ಏರ್ಪಾಟು ಈ ತರ ಬಂದಿದೆಯಲ್ಲಾ! (4)
11.ಸಂಭ್ರಮಕ್ಕಿಲ್ಲಿ ಕೊನೆಗೆ ಗರ ಬಡಿದಿದೆ! (4)
13.ಕೈ ಕೊನೆಗಿಟ್ಟಿರುವ ಆಳು (3)
15.ಕೊಬ್ಬಿದ ಆನೆಯಿದು (4)
16.ಸೂಕ್ಷ್ಮವಾಗಿ ನೋಡುವವನು (4)

ಮೇಲಿಂದ ಕೆಳಕ್ಕೆ

1.ಸಾಮಂತರಿಂದ ಅಧಿರಾಜನಿಗೆ ಸಲ್ಲುವ ಹಣ (2)
2.ಬಯಕೆಗೊಂದು ಪರ್ಯಾಯ ಪದ (4)
3.ಹೂವಿನಲ್ಲಿಯ ಸಿಹಿರಸ (4)
4.ಆಸ್ತಿಯಿಲ್ಲಿ ಉಲ್ಟಾಪಲ್ಟಾ ಕಾಣುತ್ತಿದೆ (2)
6.ಬಾಳಿಕೆಯನ್ನು ಹೀಗೆನ್ನಿ (3)
8.ತೀರದ ಹತ್ತಿರ ಅಂಧಕಾರ ಕವಿದಿದೆ (3)
10. ದೂರಿದರೂ ಪ್ರಯೋಜನವಿಲ್ಲ! ಈತ ಕೆಟ್ಟ ನಡತೆಯವನು (4)
11.ಸರಸ ಹಾಗೂ ವಿರಸ ಸಮನಾಗಿರುವಿಕೆ (4)
12.ಹೊಗೆ ಇಲ್ಲಿ ಆವರಿಸಿದೆ (2)
14.ನಾಲ್ಕು ಮೂಲೆಗಳುಳ್ಳದ್ದು (2)



5140ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಗಜಪತಿ 3.ಬಾಲಂಗೋಚಿ
5.ಲವಣ 7.ಶರ
9.ಕೊನರು 10.ಗುದ್ದು
11.ಮಾಡು 12.ತಾಕತ್ತು
14.ರಸ 16.ಬಳಪ
18.ಕರೆಯೋಲೆ 19.ರಸಾಯನ

ಮೇಲಿಂದ ಕೆಳಕ್ಕೆ:
1.ಗರ್ಭಕೋಶ 2.ತಿಲ
3.ಬಾಣ 4.ಸಿಡಿಮದ್ದು
6.ವಚನ 8.ರಗಡು
10.ಗುಡಾರ 11.ಮಾನಸಿಕ
13.ಕಪಾಳ 15.ಸಮಾಧಾನ
16.ಬಲೆ 17.ಪರ

ಸುಡೊಕು 5527

	6			2		5		
5		4			7		2	3
	2		5			6		7
8		1		3		7		9
			9	7	8		1	
9		2		5		3		6
7		3		9				
	8		7		5	9	3	
		9		8				5


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5526 ಸುಡೊಕು

3	4	7	6	5	1	8	2	9
8	2	9	4	7	3	1	6	5
1	6	5	8	9	2	3	4	7
4	8	2	7	1	6	9	5	3
9	7	3	5	2	8	4	1	6
6	5	1	9	3	4	7	8	2
5	3	4	2	8	9	6	7	1
2	9	8	1	6	7	5	3	4
7	1	6	3	4	5	2	9	8

ಷೇರುಪೇಟೆ ವಹಿವಾಟು 108



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,403
ಇಂದಿನ ಅಂತ್ಯ	18,409
▲	6
ದಿನದ ಗರಿಷ್ಠ	18,442

ತೆಂಗು ಧಾರಣೆ (ಸಾವಿರಕ್ಕೆ)



ಮಂಗಳೂರು
1ನೇ ದರ್ಜೆ ₹16000-20000
2ನೇ ದರ್ಜೆ ₹12000-15000

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು
100 ಮೊಟ್ಟೆಗೆ ₹545
12 ಮೊಟ್ಟೆಗೆ ₹70
ಮೈಸೂರು
100 ಮೊಟ್ಟೆಗೆ ₹545

ಖಾದ್ಯ ತೈಲ ಮುಂಬೈ



(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1550 (1550)
ಸೋಯಾ (ರಿಫೈನ್ಡ್)	₹1360 (1370)
ಸೂರ್ಯಕಾಂತಿ (ರಿಫೈನ್ಡ್)	₹1530 (1550)
ಪಾಮೋಲಿನ್	₹965 (975)

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ) ₹275-681
ದ್ವಿತಳಿ (ಬಿ.ವಿ) ₹244-855

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹146
ಆರ್‌ಎಸ್‌ಎಸ್-5 ₹138
ಗುಡ್ ಲಾಟ್ ₹131

ಈರುಳ್ಳಿ ಧಾರಣೆ



(ಕ್ವಿಂಟಲ್‌ಗೆ)

ದಪ್ಪ	₹1500-2400
ಮಧ್ಯಮ	₹1000-1500
ಸಣ್ಣ	₹500-1000

‘ಪ್ರಯಾಣಿಕ ವಾಹನ ಮಾರಾಟದಲ್ಲಿ ದಾಖಲೆ’

ನವದೆಹಲಿ (ಪಿಟಿಐ): ಪ್ರಸಕ್ತ ಹಣಕಾಸು ವರ್ಷದಲ್ಲಿ ದೇಶದಲ್ಲಿ 38 ಲಕ್ಷ ಪ್ರಯಾಣಿಕ ವಾಹನಗಳ ಮಾರಾಟ ಆಗಬಹುದು ಎಂದು ಟಾಟಾ ಮೋಟರ್ಸ್‌ನ ಪ್ರಯಾಣಿಕ ವಾಹನ ವಿಭಾಗದ ವ್ಯವಸ್ಥಾಪಕ ನಿರ್ದೇಶಕ ಶೈಲೇಶ್ ಚಂದ್ರ ಅಂದಾಜಿಸಿದ್ದಾರೆ.

ಆದರೆ, ಮುಂದಿನ ಹಣಕಾಸು ವರ್ಷದಲ್ಲಿ ಈ ಪ್ರಮಾಣದ ಮಾರಾಟ ಕಾಣಲಿಕ್ಕಿಲ್ಲ ಎಂದು ಅವರು ಹೇಳಿದ್ದಾರೆ. ಈ ಹಣಕಾಸು ವರ್ಷದಲ್ಲಿ ಅತಿಹೆಚ್ಚಿನ ಸಂಖ್ಯೆಯ ಪ್ರಯಾಣಿಕ ವಾಹನ ಮಾರಾಟ ದಾಖಲಾಗಬಹುದು ಎಂದಿದ್ದಾರೆ. ಭಾರತೀಯ ಆಟೊ ಮೊಬೈಲ್ ತಯಾರಕರ ಸಂಘದ (ಎಸ್‌ಐಎಎಂ) ಮಾಹಿತಿ ಪ್ರಕಾರ, 2021-22ರಲ್ಲಿ ದೇಶದಲ್ಲಿ 30.69 ಲಕ್ಷ ಪ್ರಯಾಣಿಕ ವಾಹನಗಳ ಮಾರಾಟ ಆಗಿದೆ. 2018-19ರಲ್ಲಿ ಒಟ್ಟು 33.77 ಲಕ್ಷ ಪ್ರಯಾಣಿಕ ವಾಹನಗಳ ಮಾರಾಟ ಆಗಿದ್ದು ಇದುವರೆಗಿನ ದಾಖಲೆ.

ಮುಂಬೈ ಧಾರಣೆ

ಶೇಂಗಾ

16–11-2022

ಜಾವಾ 70/80(ಹೊಸ)	11150-11200
ಜಾವಾ 80/90(ಹೊಸ)	10650-10700
ದಪ್ಪ ಮಧ್ಯಪ್ರದೇಶ(ಹೊಸ)	9400-9500
ದಪ್ಪ ಗುಜರಾತ್(ಹೊಸ)	10000-10100

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1560 (1560)
ಒಂದು ವಾರದ ಡೆಲಿವರಿ	1555 (1555)
ಸೋಯಾ ಕಚ್ಚಾ	1345 (1345)
ಪಾಮ್ ವಾರದ ಡೆಲಿವರಿ	965 (973)
ಸೂರ್ಯಕಾಂತಿ ಎಣ್ಣೆ ಕಚ್ಚಾ	--- (---)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
52,850 (52,750)
ಬೆಳ್ಳಿ ಕೆ.ಜಿ 62,500 (62,300)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	250-300
ನಡುಗೋಲು	450-480
ರಾಶಿ	480-500
ರಾಶಿ ಉತ್ತಮ	550-600
ಜರಡಿ	700-750
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-100
ಹಸಿರು ಅತಿ ಉತ್ತಮ	1250-1350
ಕಾಳು ಮೆಣಸು	475
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-38000
ಹಳತು	48000-55000
ಕುಮಟ	
ಚಿಪ್ಪು	25799-33019
ಕೋಕ	17189-29999
ಫ್ಯಾಕ್ಟರಿ	12019-19299
ಹೊಸಚಾಲಿ	29509-33109
ಹಳೆಚಾಲಿ	36229-40519
ಶಿವಮೊಗ್ಗ	
ಬೆಟ್ಟೆ	48690-52369
ಗೊರಬಲು	16209-36009
ಹೊಸತು	44199-46599
ರಾಶಿ	45199-47819
ಸರಕು	60010-80196
ಸಿದ್ದಾಪುರ	
ಬಿಳಿಗೋಟು	27899-33699
ಚಾಲಿ	36709-40299
ಕೋಕ	26899-31699
ಕೆಂಪುಗೋಟು	27119-36469
ರಾಶಿ	42199-46549
ತಟ್ಟಿಬೆಟ್ಟೆ	36699-37199
ಶಿರಸಿ	
ಬೆಟ್ಟೆ	26029-42899
ಬಿಳಿಗೋಟು	26399-35776
ಚಾಲಿ	35399-41639
ರಾಶಿ	36009-47099
ತಿಪಟೂರು ಕೊಬ್ಬರಿ	
ಕನಿಷ್ಠ	12300
ಗರಿಷ್ಠ	12601
ಮಾದರಿ	12300

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13500	13800	13800	166.20 ಸೆಂಟ್ಸ್
ಎಸಿ	6890	7000	6900	
ಆರ್‌ಪಿ	8500	8000	8400	ಲಂಡನ್
ಆರ್‌ಸಿ	4530	4150	4200	1824 ಡಾಲರ್ಸ್

ಮುಂದುವರಿದ ತೇಜಿ ವಹಿವಾಟು


ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳಲ್ಲಿ ತೇಜಿ ವಹಿವಾಟು ಮುಂದುವರಿದಿದೆ.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ಬುಧವಾರ ಮತ್ತೊಂದು ದಾಖಲೆಯ ಮಟ್ಟವನ್ನು ತಲುಪಿದೆ. 108 ಅಂಶ ಏರಿಕೆ ಕಂಡ ಸೆನ್ಸೆಕ್ಸ್, ದಾಖಲೆಯ ಮಟ್ಟವಾದ 61,980 ಅಂಶಗಳಲ್ಲಿ ವಹಿವಾಟು ಕೊನೆಗೊಳಿಸಿತು.

ಬ್ಯಾಂಕಿಂಗ್ ವಲಯದ ಷೇರುಗಳನ್ನು ಹೂಡಿಕೆದಾರರು ಹೆಚ್ಚು ಖರೀದಿಸಿದ್ದು ಸೂಚ್ಯಂಕದ ಓಟಕ್ಕೆ ನೆರವಾಯಿತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 6 ಅಂಶ ಏರಿಕೆ ಕಂಡಿತು.

‘ದೇಶಿ ಅರ್ಥ ವ್ಯವಸ್ಥೆಯ ಸ್ಥಿತಿ, ವಿದೇಶಿ ಹೂಡಿಕೆಯ ಪ್ರಮಾಣ ಪೂರಕವಾಗಿಯೇ ಇದೆಯಾದರೂ, ದೇಶದ ಈಕ್ವಿಟಿ ಮಾರುಕಟ್ಟೆಗಳ ಮೌಲ್ಯವು ಹೆಚ್ಚಾಗಿರುವ ಕಾರಣ, ಒಂದಿಷ್ಟು ಎಚ್ಚರಿಕೆಯ ವಹಿವಾಟು ನಡೆಯಬಹುದು’ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.



ವಿದೇಶಗಳ ಜೊತೆ ರೂಪಾಯಿಯಲ್ಲಿ ಆಮದು, ರಫ್ತು ವಹಿವಾಟು

ವಿಶೇಷ ಖಾತೆ ತೆರೆದ ರಷ್ಯಾ ಬ್ಯಾಂಕ್

ನವದೆಹಲಿ (ಪಿಟಿಐ): ವಿದೇಶಗಳ ಜೊತೆ ರೂಪಾಯಿಯಲ್ಲಿ ವಹಿವಾಟು ನಡೆಸಲು ಒಂಬತ್ತು ವಿಶೇಷ ಖಾತೆಗಳನ್ನು ಆರಂಭಿಸಲಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ. ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಅನುಮೋದನೆ ಕೊಟ್ಟ ನಂತರ ದೇಶದ ಎರಡು ಬ್ಯಾಂಕ್‌ಗಳಲ್ಲಿ ಒಂಬತ್ತು ಖಾತೆಗಳನ್ನು ತೆರೆಯಲಾಗಿದೆ.

ರಷ್ಯಾದ ಅತಿದೊಡ್ಡ ಬ್ಯಾಂಕ್ ಆಗಿರುವ ಸ್ಬರ್‌ಬ್ಯಾಂಕ್ ಮತ್ತು ಎರಡನೆಯ ಅತಿದೊಡ್ಡ ಬ್ಯಾಂಕ್ ಆಗಿರುವ ವಿಟಿಬಿ ಬ್ಯಾಂಕ್ ವಿಶೇಷ ಖಾತೆಗಳನ್ನು ತೆರೆಯಲು ಅನುಮತಿ ಪಡೆದ ಮೊದಲ ವಿದೇಶಿ ಬ್ಯಾಂಕ್‌ಗಳಾಗಿವೆ. ರಷ್ಯಾದ ಗಾಜ್‌ಪ್ರಮ್ ಬ್ಯಾಂಕ್ ಭಾರತದಲ್ಲಿ ಶಾಖೆ ಹೊಂದಿರದಿದ್ದರೂ ಯುಕೊ ಬ್ಯಾಂಕ್‌ನಲ್ಲಿ ತನ್ನ ವಿಶೇಷ ಖಾತೆಯನ್ನು ತೆರೆದಿದೆ.

ಮುಖ್ಯಾಂಶಗಳು

- ಎರಡು ಬ್ಯಾಂಕ್‌ಗಳಲ್ಲಿ ಒಂಬತ್ತು ಖಾತೆ
- ಭಾರತ–ರಷ್ಯಾ ಮಧ್ಯೆ ರೂಪಾಯಿಯಲ್ಲಿ ವಹಿವಾಟು

‘ಯುಕೊ, ಸ್ಬರ್, ವಿಟಿಬಿ ಹಾಗೂ ಇಂಡಸ್‌ಇಂಡ್ ಬ್ಯಾಂಕ್‌ಗಳಲ್ಲಿ ವಿಶೇಷ ಖಾತೆಗಳನ್ನು ತೆರೆಯಲಾಗಿದೆ’ ಎಂದು ವಾಣಿಜ್ಯ ಕಾರ್ಯದರ್ಶಿ ಸುನಿಲ್ ಭಾರ್ತ್‌ವಾಲ್ ತಿಳಿಸಿದ್ದಾರೆ.

ಒಂಬತ್ತು ವಿಶೇಷ ಖಾತೆಗಳನ್ನು ತೆರೆದಿರುವ ಕಾರಣ ಭಾರತ ಮತ್ತು ರಷ್ಯಾ ನಡುವಿನ ವಹಿವಾಟುಗಳಿಗೆ ರೂಪಾಯಿಯಲ್ಲಿ ಹಣ ಪಾವತಿ ಸಾಧ್ಯವಾಗಲಿದೆ.

ಆಮದು ಮತ್ತು ರಫ್ತು ವಹಿವಾಟುಗಳ ಪಾವತಿಯು ರೂಪಾಯಿಯಲ್ಲಿ ಆಗುವುದನ್ನು ಹೆಚ್ಚಿಸುವಂತೆ ಆರ್‌ಬಿಐ ದೇಶದ ಬ್ಯಾಂಕ್‌ಗಳ ಆಡಳಿತ ಮಂಡಳಿಗಳಿಗೆ ಹಾಗೂ ವರ್ತಕರ ಸಂಘದ ಪ್ರತಿನಿಧಿಗಳಿಗೆ ಹೇಳಿತ್ತು.

ರಷ್ಯಾದ ಜೊತೆ ರೂಪಾಯಿಯಲ್ಲಿಯೇ ವಹಿವಾಟು ನಡೆಸುವುದಕ್ಕೆ ಇನ್ನೂ ಕೆಲವು ಪ್ರಕ್ರಿಯೆಗಳು ಪೂರ್ಣಗೊಳ್ಳಬೇಕಿವೆ. ಅವು ಶೀಘ್ರದಲ್ಲಿಯೇ ಪೂರ್ಣಗೊಳ್ಳಲಿವೆ ಎಂದು ಭಾರ್ತ್‌ವಾಲ್ ಹೇಳಿದರು.

ವಾಟ್ಸ್‌ಆ್ಯಪ್ ನೆರವಿನಿಂದ ಕ್ರೆಡಿಟ್ ಸ್ಕೋರ್ ವರದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ರೆಡಿಟ್ ಸ್ಕೋರ್ ವರದಿಯನ್ನು ನೀಡುವ ಎಕ್ಸ್‌ಪೀರಿಯನ್ ಇಂಡಿಯಾ ಕಂಪನಿಯು, ವಾಟ್ಸ್‌ಆ್ಯಪ್ ನೆರವಿನಿಂದ ಕ್ರೆಡಿಟ್ ವರದಿ ತರಿಸಿಕೊಳ್ಳುವ ಸೇವೆಯನ್ನು ಆರಂಭಿಸಿದೆ.

ಈ ಕ್ರೆಡಿಟ್ ವರದಿ ತರಿಸಿಕೊಳ್ಳುವುದಕ್ಕೆ ಶುಲ್ಕ ಕೊಡಬೇಕಾಗಿಲ್ಲ ಎಂದು ಪ್ರಕಟಣೆ ತಿಳಿಸಿದೆ.

ಭಾರತದಲ್ಲಿ 48 ಕೋಟಿಗಿಂತ ಹೆಚ್ಚು ಜನ ವಾಟ್ಸ್‌ಆ್ಯಪ್ ಬಳಸುತ್ತಾರೆ. ‘ಕ್ರೆಡಿಟ್ ಸ್ಕೋರ್ ವರದಿಯನ್ನು ವಾಟ್ಸ್‌ಆ್ಯಪ್ ನೆರವಿನಿಂದ ತರಿಸಿಕೊಳ್ಳುವ ಸೇವೆಯನ್ನು ಆರಂಭಿಸುತ್ತಿರುವವರಲ್ಲಿ ನಾವೇ ಮೊದಲಿಗರು. ಕ್ರೆಡಿಟ್ ಸ್ಕೋರ್ ವರದಿಯು ಗ್ರಾಹಕರಲ್ಲಿ ಹಣಕಾಸಿನ ಶಿಸ್ತು ಮೂಡಿಸಲು ನೆರವಾಗುತ್ತದೆ’ ಎಂದು ಎಕ್ಸ್‌ಪೀರಿಯನ್ ಇಂಡಿಯಾ ಕಂಪನಿಯ ಅಧಿಕಾರಿ ನೀರಜ್ ಧವನ್ ಹೇಳಿದ್ದಾರೆ.

ಗ್ರಾಹಕರು ವಾಟ್ಸ್‌ಆ್ಯಪ್ ಮೂಲಕ 91 99200 35444 ಸಂಖ್ಯೆಗೆ Hi ಎಂದು ಸಂದೇಶ ಕಳುಹಿಸಿ, ಹೆಸರು, ಇ–ಮೇಲ್ ವಿಳಾಸ, ದೂರವಾಣಿ ಸಂಖ್ಯೆ ಹಂಚಿಕೊಂಡು ತಮ್ಮ ಕ್ರೆಡಿಟ್ ವರದಿ ಪಡೆದುಕೊಳ್ಳಬಹುದು ಎಂದು ಪ್ರಕಟಣೆ ತಿಳಿಸಿದೆ.

ಗುಂಡಿಗಳ ಮಧ್ಯೆ ಸಂಚಾರಕ್ಕೆ ಎಸ್‌ಯುವಿ ಬೈಕ್!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗುಂಡಿಗಳ ಮಧ್ಯೆ ಸಂಚಾರಕ್ಕೆ ಎಸ್‌ಯುವಿ ಬೈಕ್, ಎಲೆಕ್ಟ್ರಿಕಲ್ ವಾಹನಗಳು, ಡ್ರೋನ್‌ಗಳು ಅನಿಮೇಷನ್, ಇಂತಹ ಹತ್ತಾರು ತಂತ್ರಜ್ಞಾನಗಳ ಲೋಕವೇ ‘ಬೆಂಗಳೂರು ಟೆಕ್‌ಸಮ್ಮಿಟ್’ನಲ್ಲಿ ಅನಾವರಣಗೊಂಡಿದೆ.

ಬೆಂಗಳೂರು ‘ಟೆಕ್ ಸಮ್ಮಿಟ್’ ಅಂಗವಾಗಿ ಆಯೋಜಿಸಿರುವ ಪ್ರದರ್ಶನದಲ್ಲಿ ನಾಗರಿಕರ ಅನುಕೂಲಕ್ಕೆ ತಂತ್ರಜ್ಞಾನ ಬಳಕೆ, ರಕ್ಷಣಾ ವಲಯದ ಕ್ಷಿಪಣಿಗಳು ಮತ್ತು ಟ್ಯಾಂಕರ್‌ಗಳ ಮಾದರಿಗಳು, ಸಾಗರದಲ್ಲಿ ಕಾರ್ಯಾಚರಣೆಗೆ ಬಳಸುವ ಜಲಾಂತರ್ಗಾಮಿ ನಿರೋಧಕ ಶಸ್ತ್ರಾಸ್ತ್ರಗಳ ಮಾದರಿಗಳು, ನವೋದ್ಯಮಗಳು, ಎಲೆಕ್ಟ್ರಿಕಲ್ ವಾಹನಗಳು, ಸೈಬರ್ ವಂಚನೆಗಳ ಕುರಿತು ಅರಿವು ಮೂಡಿಸುವ ಪ್ರಯತ್ನಗಳು ಗಮನಸೆಳೆದವು.

ಸುಮಾರು 550ಕ್ಕೂ ಹೆಚ್ಚು ಮಳಿಗೆಗಳಿಗೆ ವಿದ್ಯಾರ್ಥಿಗಳು, ನಾಗರಿಕರು, ತಂತ್ರಜ್ಞರು ಭೇಟಿ ನೀಡಿ ವೀಕ್ಷಿಸಿದರು.

‘ಟ್ರಿಗೊ’ ಕಂಪನಿ ಬೆಂಗಳೂರಿನಲ್ಲೇ ತಯಾರಿಸಿದ ಮೂರು ಚಕ್ರಗಳಿರುವ ಎಲೆಕ್ಟ್ರಿಕಲ್ ‘ಎಸ್‌ಯುವಿ ಬೈಕ್’ ಆಕರ್ಷಿಸಿತು. ಗುಂಡಿಗಳ ಮಧ್ಯೆಯೇ ನೆಮ್ಮದಿಯಿಂದ ಸಂಚರಿಸಲು ಈ ಬೈಕ್ ಸುರಕ್ಷಿತ ಎಂದು ಕಂಪನಿ ಪ್ರತಿಪಾದಿಸಿದೆ.

‘ಹಿಂಬದಿಯ ಸವಾರರಿಗೂ ಈ ಬೈಕ್ ಅರಾಮದಾಯಕವಾಗಿದೆ. ಒಂದು ಬಾರಿ ಚಾರ್ಜ್ ಮಾಡಿದರೆ 145 ಕಿಲೋ ಮೀಟರ್ ಸಂಚರಿಸಬಹುದು. 2023ರ ಜನವರಿ 26ರಿಂದ ಈ ಬೈಕ್ ನಾಗರಿಕರಿಗೆ ಲಭ್ಯವಾಗಲಿದೆ. ಈ ಬೈಕ್ ಮೊತ್ತ ಸದ್ಯಕ್ಕೆ ₹ 1.5 ಲಕ್ಷ ನಿಗದಿಪಡಿಸಲಾಗಿದೆ. ಯಾವುದೇ ಎಲೆಕ್ಟ್ರಿಕಲ್ ಪಾಯಿಂಟ್‌ನಲ್ಲಿ ಸುಲಭವಾಗಿ ಮತ್ತು ಸರಳವಾಗಿ ಬ್ಯಾಟರಿಗಳನ್ನು ಚಾರ್ಜ್ ಮಾಡಬಹುದು’ ಎಂದು ಟ್ರಿಗೊ ಕಂಪನಿಯ ಸಂಸ್ಥಾಪಕ ಮತ್ತು ಸಿಇಒ ಶ್ರವಣ್ ವಿವರಿಸಿದರು.



ಬೆಂಗಳೂರಿನಲ್ಲಿ ಬುಧವಾರ ಆರಂಭವಾದ ’ಬೆಂಗಳೂರು ಟೆಕ್ ಸಮ್ಮಿಟ್’ನಲ್ಲಿ ಪ್ರದರ್ಶಿಸಲಾದ ಎಲೆಕ್ಟ್ರಿಕಲ್ ಬೈಕ್ ಜನರರನ್ನು ಆಕರ್ಷಿಸಿತು –ಪ್ರಜಾವಾಣಿ ಚಿತ್ರ

ಪ್ರತೀ ವರ್ಷ 3,000 ಭಾರತೀಯರಿಗೆ ಬ್ರಿಟನ್ ವೀಸಾ; ಸುನಕ್

ಯುವ ವೃತ್ತಿಪರರ ವೀಸಾಗೆ ಅಸ್ತು

ಬಾಲಿ, ಇಂಡೊನೇಷ್ಯಾ (ಪಿಟಿಐ, ರಾಯಿಟರ್ಸ್): 18–30 ವರ್ಷ ವಯೋಮಾನದ ಭಾರತೀಯ ಪದವೀಧರ ಯುವಜನತೆ ಎರಡು ವರ್ಷದ ಅವಧಿಗೆ ಬ್ರಿಟನ್‌ನಲ್ಲಿ ವಾಸಿಸಲು ಹಾಗೂ ಕೆಲಸ ಮಾಡಲು ಅವಕಾಶ ನೀಡುವ ವೀಸಾ ಯೋಜನೆಗೆ ಬ್ರಿಟನ್ ಪ್ರಧಾನಿ ರಿಷಿ ಸುನಕ್ ಅವರು ಬುಧವಾರ ಹಸಿರು ನಿಶಾನೆ ತೋರಿಸಿದ್ದಾರೆ.

ಭಾರತೀಯ ವೃತ್ತಿಪರರಿಗೆ ಪ್ರತಿ ವರ್ಷ 3,000 ವೀಸಾಗಳನ್ನು ಬ್ರಿಟನ್ ನೀಡಲಿದೆ. ಇದೇ ರೀತಿ, ಬ್ರಿಟಿಷ್ ನಾಗರಿಕರೂ ಭಾರತದಲ್ಲಿ ವಾಸಿಸಲು ಹಾಗೂ ಕೆಲಸ ಮಾಡಲು ಈ ಯೋಜನೆ ಅವಕಾಶ ಕಲ್ಪಿಸುತ್ತದೆ. ಕಳೆದ ವರ್ಷ ಸಹಿ ಹಾಕಲಾಗಿದ್ದ ಎಂಎಂಪಿ ಒಪ್ಪಂದದ ಭಾಗವಾಗಿ ‘ಬ್ರಿಟನ್–ಭಾರತ ಯುವ ವೃತ್ತಿಪರರ ಯೋಜನೆ’ 2023ರಿಂದ ಜಾರಿಗೆ ಬರಲಿದೆ.

ಈ ಯೋಜನೆಯನ್ನು ಭಾರತ–ಬ್ರಿಟನ್ ನಡುವಿನ ಮೈತ್ರಿಯಲ್ಲಿ ಮಹತ್ವದ ಹೆಜ್ಜೆ ಎಂದು ಬಣ್ಣಿಸಲಾಗಿದೆ. ಇಂತಹ ಯೋಜನೆಗೆ ಮೊದಲಿಗೆ ಭಾರತವನ್ನು ಆಯ್ಕೆ ಮಾಡಲು ಆದ್ಯತೆ ನೀಡಲಾಗಿದೆ ಎಂದು ಬ್ರಿಟನ್ ಪ್ರಧಾನಿ ಕಚೇರಿ ತಿಳಿಸಿದೆ.

ಜಾಗತಿಕ ನಾಯಕರ ಜೊತೆ ಮೋದಿ ಚರ್ಚೆ: ಜಿ–20 ಶೃಂಗಸಭೆಯ ವೇಳೆ, ಪ್ರಧಾನಿ ನರೇಂದ್ರ ಮೋದಿ ಅವರು ಬ್ರಿಟನ್, ಫ್ರಾನ್ಸ್, ಆಸ್ಟ್ರೇಲಿಯಾ, ಇಟಲಿ ಸರ್ಕಾರಗಳ ಮುಖ್ಯಸ್ಥರ ಜತೆ ಮಾತುಕತೆ ನಡೆಸಿದರು. ರಕ್ಷಣೆ, ಪರಮಾಣು ಇಂಧನ, ಆಹಾರ ಭದ್ರತೆ ವಿಚಾರಗಳ ಕುರಿತು ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರನ್ ಜೊತೆ ಫಲಪ್ರದ ಚರ್ಚೆ ನಡೆಸಲಾಯಿತು ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ರಕ್ಷಣೆ ಹಾಗೂ ಆರ್ಥಿಕ ಸಹಕಾರ ವೃದ್ಧಿ ಬಗ್ಗೆ ಜರ್ಮನಿ ಛಾನ್ಸಲರ್ ಒಲಾಫ್ ಸ್ಕೊಲ್ಜ್ ಜೊತೆ ಮೋದಿ ಮಾತುಕತೆ ನಡೆಸಿದರು. ವ್ಯಾಪಾರ, ರಕ್ಷಣೆ ಹಾಗೂ ಭಯೋತ್ಪಾದನೆ ನಿಗ್ರಹ ವಿಚಾರದ ಬಗ್ಗೆ ಇಟಲಿ ಪ್ರಧಾನಿ ಜಾರ್ಜಿಯಾ ಮೆಲೊನಿ ಜತೆ ಚರ್ಚಿಸಿದರು. ಆಸ್ಟ್ರೇಲಿಯಾ ಪ್ರಧಾನಿ ಆಂಟೊನಿ ಅಲ್ಬನೀಸ್ ಹಾಗೂ ಮೋದಿ ನಡುವಿನ ಮಾತುಕತೆಯಲ್ಲಿ ಶಿಕ್ಷಣ ಹಾಗೂ ನಾವೀನ್ಯ ವಲಯಗಳು ಆದ್ಯತೆ ಪಡೆದಿದ್ದವು.

ಧಾನ್ಯ ಒಪ್ಪಂದ ಮುಂದುವರಿಕೆಗೆ ರಷ್ಯಾ ಒಲವು

ಮಾಸ್ಕೊ ವರದಿ: ಯುದ್ಧದ ಬಳಿಕ ಉಕ್ರೇನ್‌ನಿಂದ ಸ್ಥಗಿತಗೊಂಡಿದ್ದ ಆಹಾರ ಧಾನ್ಯಗಳು ಹಾಗೂ ರಸಗೊಬ್ಬರ ಪೂರೈಕೆಗೆ ವಿಶ್ವಸಂಸ್ಥೆ ಮಧ್ಯಸ್ಥಿಕೆಯಲ್ಲಿ ಮಾಡಿಕೊಂಡಿರುವ ಧಾನ್ಯ ಪೂರೈಕೆ ಒಪ್ಪಂದದ ಪರವಾಗಿ ಇರುವುದಾಗಿ ರಷ್ಯಾ ಹೇಳಿದೆ. ಆದರೆ ಉಕ್ರೇನ್‌ನಿಂದ ರಫ್ತಾಗುವ ಆಹಾರ ಧಾನ್ಯಗಳು ತೀರಾ ಅಗತ್ಯ ಇರುವ ದೇಶಗಳಿಗೆ ಮಾತ್ರ ಪೂರೈಕೆಯಾಗಬೇಕು ಎಂದು ಹೇಳಿದೆ. ಉಕ್ರೇನ್‌ನಲ್ಲಿ ರಷ್ಯಾ ಸೇನೆಯಿಂದ ಯಾವುದೇ ಅಡ್ಡಿಯಿಲ್ಲದೇ, ಕಪ್ಪುಸಮುದ್ರದ ಮಾರ್ಗವಾಗಿ ಧಾನ್ಯ ಸಾಗಾಟಕ್ಕೆ ಅವಕಾಶ ನೀಡುವುದಾಗಿ ರಷ್ಯಾ ಹಣಕಾಸು ಸಚಿವ ಆ್ಯಂಟನ್ ಸಿಲುನೊವ್ ಹೇಳಿದ್ದಾರೆ.

ಗುಜರಾತ್, ಹಿಮಾಚಲದ ಕಲಾಕೃತಿ ಉಡುಗೊರೆ ನೀಡಿದ ಮೋದಿ

ಗುಜರಾತ್ ಹಾಗೂ ಹಿಮಾಚಲ ಪ್ರದೇಶಕ್ಕೆ ಸಂಬಂಧಿಸಿದ ಕಲಾಕೃತಿಗಳು ಹಾಗೂ ಸಾಂಪ್ರದಾಯಿಕ ವಸ್ತುಗಳನ್ನು ಪ್ರಧಾನಿ ಮೋದಿ ಅವರು ಜಿ–20 ನಾಯಕರಿಗೆ ಉಡುಗೊರೆಯಾಗಿ ನೀಡಿದರು. ಶೃಂಗಾರರಸ ಬಿಂಬಿಸುವ ಕಾಂಗ್ರಾ ವರ್ಣಚಿತ್ರವನ್ನು ಬೈಡನ್ ಅವರಿಗೆ ನೀಡಿದರು. ದೇವಸ್ಥಾನಗಳಲ್ಲಿ ದೇವತೆಗಳ ವಿಗ್ರಹದ ಹಿಂದೆ ತೂಗುಹಾಕುವ ಗುಜರಾತ್‌ನ ವಿಶೇಷ ವಸ್ತ್ರವನ್ನು (ಮಾತಾ ನೀ ಪಛೇಡೀ) ಸುನಕ್ ಅವರಿಗೆ ನೀಡಿದರು. ಆಸ್ಟ್ರೇಲಿಯಾ ಪ್ರಧಾನಿ, ಜರ್ಮನಿಯ ಛಾನ್ಸಲರ್‌ಗೂ ಉಡುಗೊರೆಗಳನ್ನು ನೀಡಿದರು.

ಕಾಂಗ್ರೆಸ್ ಕಿಡಿ: ‘ದೇಶದ ವಿಚಾರಗಳನ್ನು ಅಂತರರಾಷ್ಟ್ರೀಯ ವೇದಿಕೆಗಳಲ್ಲಿ ಚರ್ಚಿಸಬಾರದು ಎಂಬ ಸಂಪ್ರದಾಯವನ್ನು ಪ್ರಧಾನಿ 2014ರಲ್ಲೇ ಮುರಿದಿದ್ದು, ಇದನ್ನು ಮುಂದುವರಿಸಿದ್ದಾರೆ. ಇಂಡೊನೇಷ್ಯಾದಲ್ಲಿ ಭಾರತೀಯರನ್ನು ಉದ್ದೇಶಿಸಿ ಮಾತನಾಡುವಾಗ ಆಡಿದ ಮಾತುಗಳು ಇದಕ್ಕೆ ತಾಜಾ ಉದಾಹರಣೆ’ ಎಂದು ಕಾಂಗ್ರೆಸ್ ಆರೋಪಿಸಿದೆ.

ಇಂಡೊನೇಷ್ಯಾದ ಭಾರತೀಯ ಸಮುದಾಯವನ್ನು ಉದ್ದೇಶಿಸಿ ಮಾತನಾಡುವಾಗ, ‘2014ಕ್ಕೂ ಮೊದಲ ಭಾರತಕ್ಕೂ ಹಾಗೂ ನಂತರದ ಭಾರತದ ನಡುವೆ ದೊಡ್ಡ ವ್ಯತ್ಯಾಸವಿದೆ’ ಎಂದು ಪ್ರಧಾನಿ ಹೇಳಿದ್ದರು. ಮೋದಿ ಅವರ ಈ ಮಾತನ್ನು ಕಾಂಗ್ರೆಸ್ ಖಂಡಿಸಿದೆ.

ಜಾಗತಿಕ ನಾಯಕರ ಸಮಾಗಮ

- ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಜತೆಗಿನ ಮಾತುಕತೆಯು ಉಭಯ ದೇಶಗಳ ಸ್ಥಿರ ಹಾಗೂ ರಚನಾತ್ಮಕ ಸಹಕಾರಕ್ಕೆ ನೆರವಾಗಲಿದೆ ಎಂದು ಜಪಾನ್ ಪ್ರಧಾನಿ ಫುಮಿಯೊ ಕಿಶಿದಾ ವಿಶ್ವಾಸ ವ್ಯಕ್ತಪಡಿಸಿದರು. ತೈವಾನ್ ವಿಚಾರ ಚರ್ಚೆಗೆ ಬಂದಿತೇ ಎಂಬ ಪ್ರಶ್ನೆಗೆ ಅವರು ಉತ್ತರಿಸಲಿಲ್ಲ
- ಬ್ರಿಟನ್ ಪ್ರಧಾನಿ ರಿಷಿ ಸುನಕ್ ಹಾಗೂ ಅಮೆರಿಕ ಅಧ್ಯಕ್ಷ ಬೈಡನ್ ನಡುವೆ ನಡೆದ ಮಾತುಕತೆಯಲ್ಲಿ ಉಕ್ರೇನ್ ಯುದ್ಧ, ಚೀನಾ ಹಾಗೂ ಉತ್ತರ ಐರ್ಲೆಂಡ್ ವಿಚಾರಗಳು ಚರ್ಚೆಗೆ ಬಂದವು
- ಕಾರ್ಯಕ್ರಮ ನಿಗದಿಪಡಿಸುವಲ್ಲಿ ಸಮಸ್ಯೆ ಉಂಟಾಗಿದ್ದರಿಂದ, ರಿಷಿ ಸುನಕ್ ಹಾಗೂ ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ನಡುವಿನ ಸಭೆ ರದ್ದಾಯಿತು

ಪೇಟಿಎಂನಲ್ಲಿನ ಷೇರು ಮಾರಲಿರುವ ಸಾಫ್ಟ್‌ಬ್ಯಾಂಕ್

ನವದೆಹಲಿ (ಪಿಟಿಐ): ಜಪಾನ್ ಮೂಲದ ಸಾಫ್ಟ್‌ಬ್ಯಾಂಕ್, ಒನ್97 ಕಮ್ಯುನಿಕೇಷನ್ಸ್ (ಪೇಟಿಎಂ ಮಾತೃ ಸಂಸ್ಥೆ) ಕಂಪನಿಯಲ್ಲಿ ಹೊಂದಿರುವ ಶೇಕಡ 4.5ರಷ್ಟು ಷೇರುಗಳನ್ನು ₹ 1,627 ಕೋಟಿಗೆ ಮಾರಾಟ ಮಾಡಲಿದೆ ಎಂದು ಮೂಲಗಳು ತಿಳಿಸಿವೆ.

ಪೇಟಿಎಂ ಆರಂಭಿಕ ಹೂಡಿಕೆದಾರರು ತಮ್ಮ ಷೇರುಗಳನ್ನು ಮಾರಾಟ ಮಾಡಲು ಇದ್ದ ಸಮಯದ ನಿರ್ಬಂಧ ತೆರವಾದ ತಕ್ಷಣವೇ ಸಾಫ್ಟ್‌ಬ್ಯಾಂಕ್ ಈ ತೀರ್ಮಾನ ಕೈಗೊಂಡಿದೆ. ಸಾಫ್ಟ್‌ಬ್ಯಾಂಕ್, ಒನ್97 ಕಮ್ಯುನಿಕೇಷನ್ಸ್‌ನಲ್ಲಿ ಶೇ 17.5ರಷ್ಟು ಷೇರುಗಳನ್ನು ಹೊಂದಿದೆ.

ಪೋಲೆಂಡ್‌ನಲ್ಲಿ ಕ್ಷಿಪಣಿ ಸ್ಫೋಟ; ಇಬ್ಬರ ಸಾವು

ಬ್ರಸೆಲ್ಸ್ (ಎಪಿ): ‘ಪೋಲೆಂಡ್‌ನಲ್ಲಿ ಇಬ್ಬರು ನಾಗರಿಕರನ್ನು ಬಲಿತೆಗೆದು ಕೊಂಡ ಸ್ಫೋಟವು ಬಹುಶಃ ರಷ್ಯಾದ ಕ್ಷಿಪಣಿ ದಾಳಿಯಿಂದಲ್ಲ. ಬದಲಿಗೆ ರಷ್ಯಾದ ವೈಮಾನಿಕ ಬಾಂಬ್ ದಾಳಿ ಎದುರಿಸಲು ಉಕ್ರೇನ್ ವಾಯು ರಕ್ಷಣಾ ವ್ಯವಸ್ಥೆಯ ಕ್ಷಿಪಣಿಯಿಂದ ಉಂಟಾದ ಅವಘಡ’ ಎಂದು ನ್ಯಾಟೊ ಪ್ರಧಾನ ಕಾರ್ಯದರ್ಶಿ ಜೆನ್ಸ್ ಸ್ಟೋಲ್ಟೆನ್‌ಬರ್ಗ್ ಬುಧವಾರ ಹೇಳಿದ್ದಾರೆ.

‘ಈ ಘಟನೆಯ ತನಿಖೆ ನಡೆಯುತ್ತಿದೆ. ಫಲಿತಾಂಶ ಎದುರುನೋಡುತ್ತಿದ್ದೇವೆ. ಆದರೆ, ಇದು ಉದ್ದೇಶಪೂರ್ವಕ ದಾಳಿಯ ಪರಿಣಾಮ ಎಂಬುದಕ್ಕೆ ಯಾವುದೇ ಸಾಕ್ಷ್ಯವಿಲ್ಲ’ ಎಂದು ಬ್ರಸೆಲ್ಸ್‌ನಲ್ಲಿ ನ್ಯಾಟೊ ರಾಯಭಾರಿಗಳ ಜತೆಗೆ ನಡೆಸಿದ ತುರ್ತು ಸಭೆ ಅಧ್ಯಕ್ಷತೆ ವಹಿಸಿದ್ದ ಸ್ಟೋಲ್ಟೆನ್‌ಬರ್ಗ್, ನಂತರ ಸುದ್ದಿಗಾರರಿಗೆ ಈ ವಿಷಯ ತಿಳಿಸಿದರು.

ಕಣದಿಂದ ಹಿಂದೆ ಸರಿದ ಎಎಪಿಯ ಕಂಚನ್ ಜರೀವಾಲಾ: ಬಿಜೆಪಿ ವಿರುದ್ಧ ಕೇಜ್ರಿವಾಲ್ ಆರೋಪ

‘ಬೆದರಿಕೆಯೊಡ್ಡಿ ನಾಮಪತ್ರ ವಾಪಸ್’

ಅಹಮದಾಬಾದ್/ನವದೆಹಲಿ (ಪಿಟಿಐ): ಸೂರತ್ ಪೂರ್ವ ವಿಧಾನಸಭಾ ಕ್ಷೇತ್ರದ ಎಎಪಿ ಅಭ್ಯರ್ಥಿ ಕಂಚನ್ ಜರೀವಾಲಾ ಅವರು ತಮ್ಮ ನಾಮಪತ್ರವನ್ನು ವಾಪಸ್ ಪಡೆದಿದ್ದಾರೆ. ಭಾರಿ ನೂಕುನುಗ್ಗಾಟದ ಮಧ್ಯೆ ಅವರು ಚುನಾವಣಾಧಿಕಾರಿ ಕಚೇರಿಗೆ ಬಂದು ನಾಮಪತ್ರ ವಾಪಸ್ ಪಡೆಯುವ ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ಸಂಖ್ಯೆಯಲ್ಲಿ ಹಂಚಿಕೆಯಾಗಿವೆ. ಕಂಚನ್ ಅವರನ್ನು ಅಪಹರಿಸಿ, ಬೆದರಿಕೆಯೊಡ್ಡಿ ನಾಮಪತ್ರ ವಾಪಸ್ ಪಡೆಯುವಂತೆ ಮಾಡಲಾಗಿದೆ ಎಂದು ಎಎಪಿ ಆರೋಪಿಸಿದೆ.

ಕಂಚನ್ ಮತ್ತು ಅವರ ಕುಟುಂಬದ ಸದಸ್ಯರು ಎರಡು ದಿನಗಳಿಂದ ಸಂಪರ್ಕಕ್ಕೆ ಸಿಗುತ್ತಿಲ್ಲ, ಅವರು ಕಾಣೆಯಾಗಿದ್ದಾರೆ. ಅವರನ್ನು ಅಪಹರಿಸಲಾಗಿದೆ ಎಂದು ಶಂಕಿಸಲಾಗಿತ್ತು. ಆದರೆ, ಅವರು 500ಕ್ಕೂ ಹೆಚ್ಚು ಪೊಲೀಸರು ಮತ್ತು ಬಿಜೆಪಿ ಗೂಂಡಾಗಳ ಜತೆಗೆ ಬಂದು ನಾಮಪತ್ರ ವಾಪಸ್ ಪಡೆದಿದ್ದಾರೆ. ಬಂದೂಕಿಟ್ಟು ಬೆದರಿಸಿ, ಅವರಿಂದ ಈ ಕೆಲಸ ಮಾಡಿಸಲಾಗಿದೆ. ಅಲ್ಲಿಂದ ಮತ್ತೆ ಅವರು ನಾಪತ್ತೆಯಾಗಿದ್ದಾರೆ ಎಂದು ಎಎಪಿ ಆರೋಪಿಸಿದೆ.

‘ಈ ಚುನಾವಣೆಯಲ್ಲಿ ಬಿಜೆಪಿ ಹೀನಾಯವಾಗಿ ಸೋಲಲಿದೆ. ಅಂತಹ ಸೋಲಿನಿಂದ ಹೆದರಿರುವ ಬಿಜೆಪಿಯು, ಎದುರಾಳಿ ಅಭ್ಯರ್ಥಿಗಳನ್ನು ಅಪಹರಿಸುವಷ್ಟು ಹೀನಾಯ ಸ್ಥಿತಿಗೆ ಇಳಿದಿದೆ’ ಎಂದು ಎಎಪಿ ನಾಯಕ ಮತ್ತು ದೆಹಲಿ ಉಪಮುಖ್ಯಮಂತ್ರಿ ಮನೀಷ್ ಸಿಸೋಡಿಯಾ ಆರೋಪಿಸಿದ್ದಾರೆ.

‘ಚುನಾವಣಾ ಆಯೋಗವು ಇದನ್ನು ಗಂಭೀರವಾಗಿ ಪರಿಗಣಿಸಬೇಕು ಮತ್ತು ನಮ್ಮ ಅಭ್ಯರ್ಥಿಯನ್ನು ವಾಪಸ್ ಕರೆತರಬೇಕು’ ಎಂದು ಟ್ವೀಟ್‌ನಲ್ಲಿ ಚುನಾವಣಾ ಆಯೋಗವನ್ನು ಒತ್ತಾಯಿಸಿದ್ದಾರೆ. ಆಯೋಗದ ವಿರುದ್ಧವೂ ಅವರು ಹರಿಹಾಯ್ದಿದ್ದಾರೆ. ‘ಅಭ್ಯರ್ಥಿ ಕಾಣೆಯಾಗಿ 24 ಗಂಟೆ ಕಳೆದಿದೆ. ಹೀಗಿದ್ದೂ ಆಯೋಗವು ಇನ್ನೂ, ‘ಜಿಲ್ಲಾಧಿಕಾರಿ ಮತ್ತು ಪೊಲೀಸ್ ವರಿಷ್ಠಾಧಿಕಾರಿಗೆ ಸೂಚನೆ ನೀಡಿದ್ದೇವೆ’ ಎಂದಷ್ಟೇ ಹೇಳುತ್ತಿದೆ’ ಎಂದು ಸಿಸೋಡಿಯಾ ಅಸಮಾಧಾನ ವ್ಯಕ್ತಪಡಿಸಿದ್ದಾರೆ.



ಅಹಮದಾಬಾದ್‌ನಲ್ಲಿ ನಡೆದ ಚುನಾವಣಾ ರ್‍ಯಾಲಿಯಲ್ಲಿ ಅಮಿತ್ ಶಾ ಮತ್ತು ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಪ್ರಚಾರ ನಡೆಸಿದರು. ಈ ವೇಳೆ ಶಾ ಅವರು ಸಾರ್ವಜನಿಕರತ್ತ ಹೂವಿನ ಹಾರ ತೂರಿದರು –ಪಿಟಿಐ ಚಿತ್ರ

ಚುನಾವಣಾ ಕಚೇರಿಯಿಂದ ನಮ್ಮ ಅಭ್ಯರ್ಥಿಯನ್ನು ಎಳೆದುಕೊಂಡು ಹೋಗಲಾಗಿದೆ. ಗುಜರಾತ್‌ನಲ್ಲಿ ‘ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆ’ ಎಂಬುದು ಅಣಕವಾಗಿಹೋಗಿದೆ

ರಾಘವ್ ಛಡ್ಡಾ, ಎಎಪಿ ವಕ್ತಾರ

ಕಂಚನ್ ಅವರ ನಾಮಪತ್ರ ತಿರಸ್ಕೃತಕ್ಕೆ ಬಿಜೆಪಿ ಯತ್ನಿಸಿತ್ತು, ಅದರಲ್ಲಿ ವಿಫಲವಾಯಿತು. ಈಗ ನಾಮಪತ್ರ ವಾಪಸ್ ಪಡೆಸಿಕೊಂಡಿದೆ. ಅವರನ್ನು ಅಪಹರಿಸಲಾಗಿದೆಯೇ?

ಅರವಿಂದ ಕೇಜ್ರಿವಾಲ್, ಎಎಪಿ ಸಂಚಾಲಕ

ಎಎಪಿ ದೇಶ ಮತ್ತು ಗುಜರಾತ್ ವಿರೋಧಿ ಪಕ್ಷ. ಪ್ರಚಾರದ ವೇಳೆ ಜನರು ಈ ಬಗ್ಗೆ ಪ್ರಶ್ನಿಸುತ್ತಿದ್ದರು. ಹೀಗಾಗಿ ನಾನು ಅಂತಹ ಪಕ್ಷವನ್ನು ಪ್ರತಿನಿಧಿಸದೇ ಇರಲು ನಿರ್ಧರಿಸಿದೆ

ಕಂಚನ್ ಜರೀವಾಲಾ, ನಾಮಪತ್ರ ವಾಪಸ್ ಪಡೆದ ನಾಯಕ

ಪ್ರಜಾ ಮತ
ಜನತಂತ್ರದ ಹಬ್ಬ 2022

‘ಓಲೈಕೆ ರಾಜಕಾರಣ ಕಿತ್ತೊಗೆದಿದ್ದೇವೆ’

ಗುಜರಾತ್‌ನಲ್ಲಿ ನಾವು, ನಮ್ಮ 27 ವರ್ಷಗಳ ಆಳ್ವಿಕೆಯಲ್ಲಿ ಓಲೈಕೆ ರಾಜಕಾರಣವನ್ನು ಕಿತ್ತೊಗೆದಿದ್ದೇವೆ. ಈ ಅವಧಿಯಲ್ಲಿ ಕಾನೂನಿನ ಆಳ್ವಿಕೆಯನ್ನು ಅನುಷ್ಠಾನಕ್ಕೆ ತಂದಿದ್ದೇವೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ.

‘ಅಯೋಧ್ಯೆ ರಾಮಮಂದಿರ ನಿರ್ಮಾಣ ವಿಚಾರದಲ್ಲಿ ಬಿಜೆಪಿ ಮತ್ತು ಬಿಜೆಪಿ ಕಾರ್ಯಕರ್ತರನ್ನು ಕಾಂಗ್ರೆಸ್ ಅವಹೇಳನ ಮಾಡುತ್ತಿತ್ತು. 550 ವರ್ಷಗಳ ರಾಮಜನ್ಮಭೂಮಿ ವಿವಾದಕ್ಕೆ ನರೇಂದ್ರ ಮೋದಿ ಕೊನೆಹಾಡಿದ್ದಾರೆ. 2024ರ ಜನವರಿಯಲ್ಲಿ ರಾಮಮಂದಿರ ಲೋಕಾರ್ಪಣೆಯಾಗಲಿದೆ. ರಾಹುಲ್ ಬಾಬಾ (ರಾಹುಲ್ ಗಾಂಧಿ) ಅಲ್ಲಿಗೆ ಹೋಗಿ ದರ್ಶನ ಪಡೆಯಲಿ’ ಎಂದು ಅಮಿತ್ ಶಾ ಹೇಳಿದ್ದಾರೆ.

‘ರಾಜ್ಯದಲ್ಲಿ ಕಾಂಗ್ರೆಸ್ ಆಳ್ವಿಕೆ ಇದ್ದಾಗ ವರ್ಷದ 365ರಲ್ಲಿ 265 ದಿನ ಕರ್ಫ್ಯೂ ಇರುತ್ತಿತ್ತು. ನಾವು ಕರ್ಫ್ಯೂ ಹೇರಲೇ ಇಲ್ಲ. ರಾಜ್ಯದ ಈಗಿನ ಯುವಕರಿಗೆ ಕರ್ಫ್ಯೂ ಎಂದರೆ ಏನು ಎಂಬುದೇ ತಿಳಿದಿಲ್ಲ’ ಎಂದಿದ್ದಾರೆ.

ಪಾಟಿದಾರ್ ನಾಯಕಿ ಎಎಪಿಗೆ

ಪಾಟಿದಾರ್ ಮೀಸಲಾತಿ ಹೋರಾಟದ ಮುಂದಾಳುಗಳಲ್ಲಿ ಒಬ್ಬರಾಗಿದ್ದ ರೇಷ್ಮಾ ಪಟೇಲ್ ಅವರು ಬುಧವಾರ ಎಎಪಿ ಸೇರಿದ್ದಾರೆ. ಅಹಮದಾಬಾದ್‌ನಲ್ಲಿನ ಎಎಪಿ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ರೇಷ್ಮಾ ಅವರನ್ನು ರಾಘವ್ ಛಡ್ಡಾ ಅವರು ಪಕ್ಷಕ್ಕೆ ಬರಮಾಡಿಕೊಂಡರು.

ಚುನಾವಣೆಯಲ್ಲಿ ಸ್ಪರ್ಧಿಸಲು ಟಿಕೆಟ್ ನೀಡಲಿಲ್ಲ ಎಂಬ ಕಾರಣಕ್ಕೆ ಅವರು ಈಚೆಗಷ್ಟೇ ಎನ್‌ಸಿಪಿ ತೊರೆದಿದ್ದರು. 2015ರಲ್ಲಿ ಗುಜರಾತ್‌ನ ಪಾಟಿದಾರ್ ಮೀಸಲಾತಿ ಹೋರಾಟದಲ್ಲಿ ರೇಷ್ಮಾ ಅವರು, ಹೋರಾಟದ ಮುಂಚೂಣಿಯ ನಾಯಕ ಹಾರ್ದಿಕ್ ಪಟೇಲ್ ಜತೆ ಗುರುತಿಸಿಕೊಂಡಿದ್ದರು. 2017ರ ವಿಧಾನಸಭಾ ಚುನಾವಣೆಗೂ ಮುನ್ನ ಬಿಜೆಪಿ ಸೇರಿದ್ದರು. 2019ರಲ್ಲಿ ಬಿಜೆಪಿ ತೊರೆದು, ಎನ್‌ಸಿಪಿ ಸೇರಿದ್ದರು.

ಈ ಬಾರಿಯ ಚುನಾವಣೆಯಲ್ಲಿ ಎನ್‌ಸಿಪಿಯಿಂದ ಅವರು ಟಿಕೆಟ್ ನಿರೀಕ್ಷಿಸಿದ್ದರು. ಕಾಂಗ್ರೆಸ್ ಜತೆ ಮೈತ್ರಿಮಾಡಿಕೊಂಡಿರುವ ಎನ್‌ಸಿಪಿ ಕೇವಲ ಎರಡು ಕ್ಷೇತ್ರಗಳಲ್ಲಿ ತನ್ನ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಿದೆ. ಟಿಕೆಟ್ ಸಿಗದೇ ಇದ್ದ ಕಾರಣ ಅವರು ಈಗ ಎಎಪಿ ಸೇರಿದ್ದಾರೆ.

ರಾಜಸ್ಥಾನ: ಕಾಂಗ್ರೆಸ್ ಉಸ್ತುವಾರಿ ಸ್ಥಾನ ನಿರಾಕರಣೆ

ಬೇರೊಬ್ಬರನ್ನು ನೇಮಿಸಲು ಮನವಿ

ನವದೆಹಲಿ (ಪಿಟಿಐ): ಶಾಸಕರ ಬಂಡಾಯದಿಂದಾಗಿ ಸೆಪ್ಟೆಂಬರ್‌ನಲ್ಲಿ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ ಕರೆಯಲು ವಿಫಲವಾದ ಕಾರಣ ರಾಜಸ್ಥಾನದ ಉಸ್ತುವಾರಿಯಾಗಿ ಮುಂದುವರಿಯಲು ಹಿರಿಯ ಕಾಂಗ್ರೆಸ್ ನಾಯಕ ಅಜಯ್ ಮಾಕೆನ್ ನಿರಾಕರಿಸಿದ್ದಾರೆ.

ನ.8ರಂದು ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಪತ್ರ ಬರೆದಿರುವ ಅಜಯ್, ಸೆ.25 ರಂದು ನಡೆದ ಬೆಳವಣಿಗೆಗಳ ಬಗ್ಗೆ ಪ್ರಸ್ತಾಪಿಸಿ, ತಮ್ಮ ಸ್ಥಾನಕ್ಕೆ ಮತ್ತೊಬ್ಬರನ್ನು ನೇಮಕ ಮಾಡುವಂತೆ ಮನವಿ ಮಾಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

‘ಡಿಸೆಂಬರ್ ಮೊದಲ ವಾರ ರಾಹುಲ್ ಗಾಂಧಿ ನೇತೃತ್ವದಲ್ಲಿ ಭಾರತ ಜೋಡೊ ಯಾತ್ರೆ ರಾಜಸ್ಥಾನಕ್ಕೆ ಆಗಮಿಸುತ್ತಿರುವುದು ಹಾಗೂ ಡಿ.4ರಂದು ಉಪಚುನಾವಣೆ ನಡೆಯುವ ಹಿನ್ನೆಲೆಯಲ್ಲಿ ಸಾಧ್ಯವಾದಷ್ಟು ಬೇಗ ಹೊಸ ಉಸ್ತುವಾರಿಯನ್ನು ನೇಮಿಸಬೇಕು’ ಎಂದು ಮಾಕೆನ್ ಪತ್ರದಲ್ಲಿ ತಿಳಿಸಿದ್ದಾರೆ. ಅಲ್ಲದೆ ತಾವು ಯಾವಾಗಲೂ ರಾಹುಲ್ ಗಾಂಧಿ ಅನುಯಾಯಿ ಆಗಿ ಇರುವುದಾಗಿಯೂ ಹೇಳಿದ್ದಾರೆ.



ಅಜಯ್ ಮಾಕೆನ್

ಸೆಪ್ಟೆಂಬರ್‌ನಲ್ಲಿ ಕಾಂಗ್ರೆಸ್ ಶಾಸಕಾಂಗ ಪಕ್ಷದ (ಸಿಎಲ್‌ಪಿ) ಸಭೆ ನಡೆಸಲು ಮಾಕೆನ್ ಮತ್ತು ಖರ್ಗೆ ಅವರು ಕೇಂದ್ರ ವೀಕ್ಷಕರಾಗಿ ಜೈಪುರಕ್ಕೆ ತೆರಳಿದ್ದರು. ಆದರೆ, ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಮತ್ತು ಮಾಜಿ ಉಪಮುಖ್ಯಮಂತ್ರಿ ಸಚಿನ್ ಪೈಲಟ್ ಪರವಾಗಿ ಎರಡೂ ಬಣಗಳ ಆರೋಪ ಮತ್ತು ಪ್ರತ್ಯಾರೋಪ, ಪ್ರತ್ಯೇಕ ಸಭೆಗಳಿಂದಾಗಿ ಶಾಸಕಾಂಗ ಪಕ್ಷದ ಸಭೆ ನಡೆಸಲು ಸಾಧ್ಯವಾಗಿರಲಿಲ್ಲ. ಮುಖ್ಯಮಂತ್ರಿಗೆ ನಿಷ್ಠರಾಗಿರುವ ಕೆಲ ಶಾಸಕರು ರಾಜ್ಯದ ಸಚಿವ ಶಾಂತಿ ಧರಿವಾಲ್ ಅವರ ನಿವಾಸದಲ್ಲಿ ಪ್ರತ್ಯೇಕ ಸಭೆ ನಡೆಸುವ ಮೂಲಕ ಗೆಹಲೋತ್ ಉತ್ತರಾಧಿಕಾರಿಯನ್ನಾಗಿ ಪೈಲಟ್ ಅವರನ್ನು ಮಾಡುವುದಕ್ಕೆ ವಿರೋಧ ವ್ಯಕ್ತಪಡಿಸಿದ್ದರು.

ಅಧ್ಯಕ್ಷ ಸ್ಥಾನ ತೊರೆದಿಲ್ಲ: ಸುಧಾಕರನ್

ತಿರುವನಂತಪುರ: ‘ತಾನು ಅಧ್ಯಕ್ಷ ಸ್ಥಾನ ತೊರೆಯುವ ಇಂಗಿತ ವ್ಯಕ್ತಪಡಿಸಿದ್ದು, ಈ ವಿಚಾರವನ್ನು ರಾಷ್ಟ್ರೀಯ ನಾಯಕರ ಗಮನಕ್ಕೂ ತಂದಿರುವುದಾಗಿ ಕೆಲ ಮಾಧ್ಯಮಗಳು ಸುದ್ದಿ ಬಿತ್ತರಿಸಿವೆ. ಅವು ಆಧಾರ ರಹಿತವಾದುವು’ ಎಂದು ಕೇರಳ ಪ್ರದೇಶ ಕಾಂಗ್ರೆಸ್ ಸಮಿತಿಯ (ಕೆಪಿಸಿಸಿ) ಅಧ್ಯಕ್ಷ ಕೆ.ಸುಧಾಕರನ್ ಬುಧವಾರ ಹೇಳಿದ್ದಾರೆ.

ಸುಧಾಕರನ್ ಅವರು ಇತ್ತೀಚಿನ ದಿನಗಳಲ್ಲಿ ನಿರಂತರವಾಗಿ ಆರ್‌ಎಸ್‌ಎಸ್ ಪರ ಹೇಳಿಕೆಗಳನ್ನು ನೀಡಿದ್ದರು. ಅವರು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿಯವರಿಗೆ ಪತ್ರ ಬರೆದಿದ್ದು, ಅಧ್ಯಕ್ಷ ಸ್ಥಾನ ತೊರೆಯುವ ಇಂಗಿತ ವ್ಯಕ್ತಪಡಿಸಿದ್ದಾರೆ. ಆರೋಗ್ಯದ ಸಮಸ್ಯೆ ಜೊತೆಗೆ ವಿರೋಧ ಪಕ್ಷದ ನಾಯಕ ವಿ.ಡಿ.ಸತೀಶನ್ ಸೇರಿದಂತೆ ಪಕ್ಷದ ಕೆಲ ನಾಯಕರಿಂದ ತಮಗೆ ಸಹಕಾರ ಸಿಗದಿರುವ ವಿಚಾರವನ್ನೂ ಪತ್ರದಲ್ಲಿ ಪ್ರಸ್ತಾಪಿಸಿದ್ದಾರೆ ಎಂದು ಕೆಲ ಮಾಧ್ಯಮಗಳು ವರದಿ ಮಾಡಿವೆ.

ಸೇತುವೆ ಬಳಕೆಗೆ ಅನುಮತಿಸಿದ್ದು ಏಕೆ: ಹೈಕೋರ್ಟ್

ಅಹಮದಾಬಾದ್ (ಪಿಟಿಐ): ಮೊರ್ಬಿ ತೂಗುಸೇತುವೆ ಗಂಭೀರ ಸ್ಥಿತಿಯಲ್ಲಿದೆ ಎಂದು ತಿಳಿದಿದ್ದರೂ ಅದರ ದುರಸ್ತಿಗೂ ಮುನ್ನ, ಅಂದರೆ 2021ರ ಡಿಸೆಂಬರ್ 29ರಿಂದ 2022ರ ಮಾರ್ಚ್7ರವರೆಗೆ ಜನರ ಬಳಕೆಗೆ ಮುಕ್ತಗೊಳಿಸಿದ್ದು ಏಕೆ ಎಂದು ಗುಜರಾತ್ ಹೈಕೋರ್ಟ್ ಬುಧವಾರ ಮೊರ್ಬಿ ಪುರಸಭೆಯನ್ನು ಪ್ರಶ್ನಿಸಿದೆ.

ಬ್ರಿಟಿಷರ ಕಾಲದ ಈ ತೂಗುಸೇತುವೆ ನವೀಕರಣದ ನಂತರ ಬಳಕೆಗೆ ಮುಕ್ತವಾದ ಐದು ದಿನಗಳಲ್ಲಿಯೇ (ಅಕ್ಟೋಬರ್ 30) ಕುಸಿದಿತ್ತು. ಈ ದುರಂತದಲ್ಲಿ 135 ಜನರು ಮೃತಪಟ್ಟಿದ್ದರು.

ಈ ಕುರಿತು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡು, ವಿಚಾರಣೆ ಆರಂಭಿಸಿರುವ ನ್ಯಾಯಮೂರ್ತಿಗಳಾದ ಅರವಿಂದ್ ಕುಮಾರ್ ಮತ್ತು ಅಶುತೋಷ್ ಶಾಸ್ತ್ರಿ ಅವರನ್ನು ಒಳಗೊಂಡ ವಿಭಾಗೀಯ ಪೀಠವು, ಯಾವುದೇ ಅನುಮೋದನೆ ಇಲ್ಲದಿದ್ದರೂ ಅಜಂತಾ ಕಂಪನಿಗೆ (ಒರೆವಾ ಗ್ರೂಪ್) ಸೇತುವೆ ಬಳಕೆ ಸಂಬಂಧ ಅನುಮತಿ ನೀಡಲು ಕಾರಣಗಳೇನು ಎಂದು ಕೇಳಿದೆ.

‘ಸೇತುವೆಯ ಸ್ಥಿತಿ ಗಂಭೀರವಾಗಿದೆ ಎಂದು 2021ರ ಡಿಸಂಬರ್ 29ರಂದು ಮೊರ್ಬಿ ಪುರಸಭೆಯ ಮುಖ್ಯ ಅಧಿಕಾರಿಗೆ ಮಾಹಿತಿ ನೀಡಿದ್ದ ಅಜಂತಾ ಕಂಪನಿಯು, ಸೇತುವೆಯ ನಿರ್ವಹಣೆ ಕುರಿತು ಒಪ್ಪಂದದ ಪ್ರಕಾರ ಮುಂದಿನ ಕ್ರಮ ತೆಗೆದುಕೊಳ್ಳುವಂತೆ ತಿಳಿಸಿತ್ತು’ ಎಂದು ಪುರಸಭೆಯು ಬುಧವಾರ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ಉಲ್ಲೇಖಿಸಿದೆ.

‘ಇಷ್ಟೆಲ್ಲ ಮಾಹಿತಿ ಇದ್ದರೂ ಸೇತುವೆ ಬಳಕೆಗೆ ಅಜಂತಾ ಕಂಪನಿಗೆ ಅನುಮತಿ ನೀಡಿದ ಕುರಿತ ಪ್ರಮಾಣ ಪತ್ರ ಸಲ್ಲಿಸುವಂತೆ’ ಪೀಠವು ಮೊರ್ಬಿ ಪುರಸಭೆಗೆ ಸೂಚಿಸಿತು. ಅಲ್ಲದೆ ಮುಂದಿನ ವಿಚಾರಣೆ ವೇಳೆ ಪುರಸಭೆಯ ಮುಖ್ಯ ಅಧಿಕಾರಿ ನ್ಯಾಯಾಲಯದಲ್ಲಿ ಹಾಜರಿರಬೇಕು ಎಂದು ನಿರ್ದೇಶಿಸಿತು.

ರೋಗಗ್ರಸ್ಥ ಮನಸ್ಸುಗಳು: ತರೂರ್ ಕಿಡಿ

ನವದೆಹಲಿ (ಪಿಟಿಐ): ಕಾರ್ಯಕ್ರಮವೊಂದರಲ್ಲಿ ಮಹಿಳೆಯೊಬ್ಬರು ತಮ್ಮೊಂದಿಗೆ ಸೆರೆಹಿಡಿದುಕೊಂಡಿದ್ದ ಛಾಯಾಚಿತ್ರವನ್ನು ಟ್ರೋಲ್ ಮಾಡಿದ್ದವರ ವಿರುದ್ಧ ಕಾಂಗ್ರೆಸ್ ಸಂಸದ ಶಶಿ ತರೂರ್ ಬುಧವಾರ ಕಿಡಿಕಾರಿದ್ದಾರೆ. ಟ್ರೋಲರ್‌ಗಳನ್ನು ‘ರೋಗಗ್ರಸ್ಥ ಮನಸ್ಸುಗಳು’ ಎಂದು ಟೀಕಿಸಿದ್ದಾರೆ.

ಮಹಿಳೆಯೊಬ್ಬರು ತರೂರ್ ಜೊತೆಗಿನ ಚಿತ್ರವನ್ನು ಟ್ವಿಟರ್‌ನಲ್ಲಿ ಹಂಚಿಕೊಂಡಿದ್ದರು. ಅದನ್ನು ಹಲವರು ಟ್ರೋಲ್ ಮಾಡಿದ್ದರು. ಇದರಿಂದ ನೊಂದಿದ್ದ ಆಕೆ ಆ ಚಿತ್ರವನ್ನು ಟ್ವಿಟರ್‌ನಿಂದ ತೆಗೆದು ಹಾಕಿದ್ದರು.

‘ತರೂರ್ ಅವರೊಂದಿಗಿನ ನನ್ನ ಚಿತ್ರವನ್ನು ಬಲ ಪಂಥೀಯರು ದುರ್ಬಳಕೆ ಮಾಡಿಕೊಂಡಿದ್ದಾರೆ. ತಮ್ಮ ರಾಜಕೀಯ ಲಾಭಕ್ಕಾಗಿ ತಪ್ಪು ಮಾಹಿತಿಗಳನ್ನು ಹರಡುತ್ತಿದ್ದಾರೆ. ಇದರಿಂದ ಮನಸ್ಸಿಗೆ ತುಂಬಾ ನೋವಾಗಿದೆ’ ಎಂದು ಮಹಿಳೆ ಟ್ವಿಟರ್‌ನಲ್ಲಿ ಬರೆದುಕೊಂಡಿದ್ದಾರೆ.



‘ಸಾಹಿತ್ಯ ಉತ್ಸವವೊಂದರಲ್ಲಿ ತರೂರ್ ಅವರನ್ನು ಭೇಟಿಯಾಗಿದ್ದೆ. ಪ್ರಸಿದ್ಧ ಲೇಖಕರಾಗಿರುವ ಅವರೊಂದಿಗೆ ನಾನು ಕೂಡ ಇತರರಂತೆ ಛಾಯಾಚಿತ್ರ ಸೆರೆಹಿಡಿದುಕೊಂಡಿದ್ದೆ. ಇದರ ಹಿಂದೆ ಯಾವುದೇ ರಾಜಕೀಯ ಅಥವಾ ವೈಯಕ್ತಿಕ ಕಾರಣಗಳಿಲ್ಲ’ ಎಂದೂ ಹೇಳಿದ್ದಾರೆ.

ಮಹಿಳೆಯ ಬರಹವನ್ನು ಮರು ಟ್ವೀಟ್ ಮಾಡಿರುವ ತರೂರ್, ‘ಕಾರ್ಯಕ್ರಮದಲ್ಲಿ ನನ್ನೊಂದಿಗೆ 50ಕ್ಕೂ ಹೆಚ್ಚು ಮಂದಿ ಫೋಟೊ ತೆಗೆಸಿಕೊಂಡಿದ್ದರು. ಅವರಲ್ಲಿ ಮಹಿಳೆ ಕೂಡ ಒಬ್ಬರು. ಆಕೆ ಹಂಚಿಕೊಂಡಿದ್ದ ಚಿತ್ರವನ್ನು ಬಳಸಿ ಇಲ್ಲ ಸಲ್ಲದ ಸಂಬಂಧ ಕಲ್ಪಿಸಲಾಗಿದೆ. ಆ ಮೂಲಕ ಆಕೆಯ ಮನಸ್ಸಿಗೆ ನೋವುಂಟು ಮಾಡಲಾಗಿದೆ. ನಿಮ್ಮ ರೋಗಗ್ರಸ್ಥ ಮನಸ್ಸನ್ನು ನಿಮ್ಮಲ್ಲಿಯೇ ಇಟ್ಟುಕೊಳ್ಳಿ’ ಎಂದು ಶಶಿ ತರೂರ್ ಅವರು ಟೀಕಿಸಿದ್ದಾರೆ.

ಶ್ರೀಮಂತ ರಾಷ್ಟ್ರಗಳ ಇಬ್ಬಗೆ ನೀತಿ: ಆರೋಪ

ನವದೆಹಲಿ (ಪಿಟಿಐ): ಶ್ರೀಮಂತ ರಾಷ್ಟ್ರಗಳ ಇಬ್ಬಗೆ ನೀತಿಯನ್ನು ಬ್ರೆಜಿಲ್, ದಕ್ಷಿಣ ಆಫ್ರಿಕಾ, ಭಾರತ, ಚೀನಾ ಒಳಗೊಂಡ ‘ಬೇಸಿಕ್’ ರಾಷ್ಟ್ರಗಳು ಈಜಿಪ್ಟ್‌ನಲ್ಲಿ ನಡೆಯುತ್ತಿರುವ ವಿಶ್ವಸಂಸ್ಥೆಯ 27ನೇ ಹವಾಮಾನ ಶೃಂಗಸಭೆಯಲ್ಲಿ ಟೀಕಿಸಿವೆ.

ಹವಾಮಾನ ಬದಲಾವಣೆ ವಿರುದ್ಧ ಹೋರಾಡಲು ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ನೆರವು ನೀಡುವುದಾಗಿ ಮಾಡಿಕೊಂಡಿದ್ದ ಒಪ್ಪಂದಕ್ಕೆ ಶ್ರೀಮಂತ ರಾಷ್ಟ್ರಗಳು ಬದ್ಧವಾಗಿಲ್ಲ. ಹಮಾಮಾನ ಬದಲಾವಣೆ ವಿಷಯದಲ್ಲಿ ನಾಯಕತ್ವ ವಹಿಸಿಕೊಳ್ಳುತ್ತಿಲ್ಲ. ಅದಕ್ಕಾಗಿ ಪ್ರಯತ್ನಪಡುತ್ತಿಲ್ಲ’ ಎಂದು ಬೇಸಿಕ್ ಸದಸ್ಯ ರಾಷ್ಟ್ರಗಳು ಜಂಟಿ ಹೇಳಿಕೆಯಲ್ಲಿ ತಿಳಿಸಿವೆ. ‘ಕಳೆದ ಕೆಲ ವರ್ಷಗಳಿಂದ ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಪಳೆಯುಳಿಕೆ ಇಂಧನ ತಯಾರಿಸುವ ಮತ್ತು ಬಳಸುವ ಪ್ರಮಾಣದಲ್ಲಿ ಗಮನಾರ್ಹ ಹೆಚ್ಚಳವಾಗಿದೆ’ ಎಂದು ಹೇಳಿವೆ.

ಅಮಾನ್ಯೀಕರಣ: ಆರ್ಥಿಕ ನೀತಿಯ ನಿರ್ಧಾರ

ನವದೆಹಲಿ: ‘ನೋಟು ಅಮಾನ್ಯೀಕರಣವು ಆರ್ಥಿಕ ನೀತಿಯ ಭಾಗವಾಗಿ ಕೈಗೊಂಡ ಅತ್ಯಂತ ಕಠಿಣ ನಿರ್ಧಾರ. ಭಾರತೀಯ ರಿಸರ್ವ್ ಬ್ಯಾಂಕ್‌ನೊಂದಿಗೆ (ಆರ್‌ಬಿಐ) ವ್ಯಾಪಕ ಸಮಾಲೋಚನೆ ನಡೆಸಿದ ಬಳಿಕ ಹಾಗೂ ಪೂರ್ವತಯಾರಿಗಳನ್ನು ಮಾಡಿಕೊಂಡ ನಂತರವೇ ಈ ತೀರ್ಮಾನ ತೆಗೆದುಕೊಳ್ಳಲಾಗಿತ್ತು’ ಎಂದು ಕೇಂದ್ರ ಸರ್ಕಾರ ಬುಧವಾರ ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ಐವರು ನ್ಯಾಯಮೂರ್ತಿಗಳನ್ನು ಒಳಗೊಂಡ ಸಾಂವಿಧಾನಿಕ ಪೀಠವು ಈ ಕುರಿತು ವಿಸ್ತೃತ ಪ್ರತಿಕ್ರಿಯೆ ಸಲ್ಲಿಸುವಂತೆ ಕೇಂದ್ರ ಸರ್ಕಾರಕ್ಕೆ ಸೂಚಿಸಿತ್ತು.

ಲಿಖಿತ ಪ್ರತಿಕ್ರಿಯೆ ಸಲ್ಲಿಸಿರುವ ಕೇಂದ್ರ ಹಣಕಾಸು ಸಚಿವಾಲಯ ‘ಆರ್ಥಿಕ ನೀತಿಯ ಸುಧಾರಣೆಯ ಹಂತವಾಗಿ ಹಲವು ಕಠಿಣ ಕ್ರಮಗಳನ್ನು ಕೈಗೊಳ್ಳಲಾಗಿತ್ತು. ₹500 ಹಾಗೂ ₹1,000 ಮುಖಬೆಲೆಯ ನೋಟುಗಳನ್ನು ಹಿಂಪಡೆದಿದ್ದು ಇದರಲ್ಲೊಂದು’ ಎಂದು ಹೇಳಿದೆ.

ಕಠುವಾ ಸಾಮೂಹಿಕ ಅತ್ಯಾಚಾರ ಆರೋಪಿ ವಯಸ್ಕ: ‘ಸುಪ್ರೀಂ’ ತೀರ್ಪು

ನವದೆಹಲಿ (ಪಿಟಿಐ): ಕಠುವಾದಲ್ಲಿ ಎಂಟು ವರ್ಷದ ಅಲೆಮಾರಿ ಬಾಲಕಿಯ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿ, ಕೊಲೆ ಮಾಡಿದ್ದ ಪ್ರಕರಣದ ಆರೋಪಿಗಳ ಪೈಕಿ ಒಬ್ಬ ಅಪರಾಧ ಕೃತ್ಯ ಎಸಗಿದ ಸಮಯದಲ್ಲಿ ಬಾಲಕ ಆಗಿರಲಿಲ್ಲ ಎಂಬುದನ್ನು ಸುಪ್ರೀಂ ಕೋರ್ಟ್ ಬುಧವಾರ ಎತ್ತಿಹಿಡಿದಿದೆ.

ಆರೋಪಿಯ ವಯಸ್ಸಿನ ದೃಢೀಕರಣದ ಬಗ್ಗೆ ವೈದ್ಯಕೀಯ ಅಭಿಪ್ರಾಯ ಕೈಬಿಡಲು ಸಾಧ್ಯವಿಲ್ಲ. ಈಗ ಆತನನ್ನು ವಯಸ್ಕ ಎಂದು ಪರಿಗಣಿಸಿ ಈ ಪ್ರಕರಣದಲ್ಲಿ ಆತನ ವಿರುದ್ಧ ಹೊಸದಾಗಿ ವಿಚಾರಣೆ ಆರಂಭಿಸಬಹುದು ಎಂದು ನ್ಯಾಯಾಲಯ ಹೇಳಿದೆ.

ನ್ಯಾಯಮೂರ್ತಿಗಳಾದ ಅಜಯ್ ರಸ್ತೋಗಿ ಮತ್ತು ಜೆ.ಬಿ. ಪಾರ್ದೀವಾಲಾ ಅವರಿದ್ದ ಪೀಠವು, ‘ವೈದ್ಯಕೀಯ ಸಾಕ್ಷ್ಯ ಪರಿಗಣಿಸಬಹುದೇ ಅಥವಾ ಇಲ್ಲವೇ ಎಂಬುದು ಸಾಕ್ಷ್ಯದ ಮೌಲ್ಯವನ್ನು ಅವಲಂಬಿಸಿರುತ್ತದೆ. ಯಾವುದೇ ಇತರ ನಿರ್ಣಾಯಕ ಪುರಾವೆಗಳು ಇಲ್ಲದಿದ್ದಾಗ ಆರೋಪಿಯ ವಯಸ್ಸಿನ ಬಗ್ಗೆ ನಿರ್ಧಾರಕ್ಕೆ ಬರಲು ವೈದ್ಯಕೀಯ ಅಭಿಪ್ರಾಯ ಪರಿಗಣಿಸಬೇಕು’ ಎಂದು ಅಭಿಪ್ರಾಯಪಟ್ಟಿದೆ.

ಆರೋಪಿ ಶುಭಂ ಸಂಗ್ರಾ ಬಾಲ ಆರೋಪಿ ಎಂದು ಕಠುವಾದಲ್ಲಿನ ಮುಖ್ಯ ನ್ಯಾಯಾಂಗ ಮ್ಯಾಜಿಸ್ಟ್ರೇಟ್ ನೀಡಿದ್ದ ಆದೇಶದ ಮೇಲೆ ಪ್ರತ್ಯೇಕ ವಿಚಾರಣೆಗೆ ಒಳಪಡಿಸಿ ಜಮ್ಮು ಮತ್ತು ಕಾಶ್ಮೀರದ ಹೈಕೋರ್ಟ್ ನೀಡಿದ್ದ ಆದೇಶಗಳನ್ನು ಪೀಠವು ರದ್ದುಗೊಳಿಸಿತು.

‘ಅಪರಾಧ ಎಸಗಿದ ಸಮಯದಲ್ಲಿ ಆರೋಪಿಯು ಬಾಲಕ ಆಗಿರಲಿಲ್ಲ. ಹಾಗಾಗಿ ಕಠುವಾದ ಸಿಜೆಎಂ ಮತ್ತು ಹೈಕೋರ್ಟ್ ತೀರ್ಪುಗಳನ್ನು ವಜಾಗೊಳಿಸಿದ್ದೇವೆ’ ಎಂದು ನ್ಯಾಯಮೂರ್ತಿ ಪಾರ್ದೀವಾಲಾ ಅವರು ತೀರ್ಪು ಪ್ರಕಟಿಸುವಾಗ ಹೇಳಿದರು.

2020ರ ಫೆಬ್ರವರಿ 7ರಂದು ಉನ್ನತ ನ್ಯಾಯಾಲಯವು ಸಂಗ್ರಾ ವಿರುದ್ಧ ಬಾಲಾಪರಾಧಿ ನ್ಯಾಯ ಮಂಡಳಿಯ (ಜೆಜೆಬಿ) ವಿಚಾರಣೆಗೆ ತಡೆ ನೀಡಿತ್ತು. ಅಪರಾಧದ ಸಮಯದಲ್ಲಿ ಆರೋಪಿ ಬಾಲಕ ಎಂದು ಪರಿಗಣಿಸಿದ ವಿಚಾರಣಾ ನ್ಯಾಯಾಲಯದ ಆದೇಶವನ್ನು ಜಮ್ಮು ಮತ್ತು ಕಾಶ್ಮೀರ ಹೈಕೋರ್ಟ್ ತಪ್ಪಾಗಿ ಸಿಂಧುಗೊಳಿಸಿದೆ ಎಂದು ಜಮ್ಮು ಮತ್ತು ಕಾಶ್ಮೀರ ಆಡಳಿತವು ಪ್ರತಿಪಾದಿಸಿದ ನಂತರ ವಿಚಾರಣೆಗೆ ಸುಪ್ರೀಂ ಕೋರ್ಟ್ ತಡೆ ನೀಡಿತ್ತು.

ಪ್ರಕರಣದ ಹಿನ್ನೆಲೆ: 2018ರ ಜನವರಿ 10ರಂದು ಅಲೆಮಾರಿ ಬಾಲಕಿಯನ್ನು ಅಪಹರಿಸಿ, ನಂತರ ಸಣ್ಣಹಳ್ಳಿಯೊಂದರ ದೇವಸ್ಥಾನದಲ್ಲಿ ನಾಲ್ಕು ದಿನಗಳ ಕಾಲ ಮತ್ತುಬರಿಸಿದ ಸ್ಥಿತಿಯಲ್ಲಿಟ್ಟು, ಆಕೆಯ ಮೇಲೆ ಸಾಮೂಹಿಕ ಅತ್ಯಾಚಾರ ಮಾಡಿ, ನಂತರ ಬಡಿದು ಕೊಂದಿದ್ದರು.

ಪ್ರಕರಣದ ಸೂತ್ರಧಾರಿ, ದೇವಸ್ಥಾನದ ಉಸ್ತುವಾರಿ ಸಾಂಜಿ ರಾಮ್, ಪ್ರಮುಖ ಆರೋಪಿಗಳಾದ ವಿಶೇಷ ಪೊಲೀಸ್ ಅಧಿಕಾರಿ ದೀಪಕ್ ಖಾಜುರಿಯಾ, ಪ್ರವೀಶ್ ಕುಮಾರ್ ಎಂಬುವವರಿಗೆ ಜೀವನಪರ್ಯಂತ ಶಿಕ್ಷೆ ಅನುಭವಿಸುವಂತೆ ವಿಶೇಷ ನ್ಯಾಯಾಲಯ 2019ರ ಜೂನ್ 10ರಂದು ತೀರ್ಪು ನೀಡಿತ್ತು.

ಇತರ ಮೂವರು ಆರೋಪಿಗಳಾದ ಸಬ್ ಇನ್‌ಸ್ಪೆಕ್ಟರ್ ಆನಂದ್ ದತ್ತ, ಹೆಡ್ ಕಾನ್‌ಸ್ಟೆಬಲ್ ತಿಲಕ್ ರಾಜ್ ಮತ್ತು ವಿಶೇಷ ಪೊಲೀಸ್ ಅಧಿಕಾರಿ ಸುರೇಂದರ್ ವರ್ಮಾ ಅವರಿಗೆ ಸಾಕ್ಷ್ಯ ನಾಶಕ್ಕಾಗಿ ಐದು ವರ್ಷಗಳ ಜೈಲು ಶಿಕ್ಷೆ ಮತ್ತು ತಲಾ ₹50 ಸಾವಿರ ದಂಡ ವಿಧಿಸಲಾಗಿತ್ತು. 7ನೇ ಆರೋಪಿ, ಸಾಂಜಿ ರಾಮ್ ಪುತ್ರ ವಿಶಾಲ್ ಜಂಗೋತ್ರನನ್ನು ಸಂಶಯದ ಲಾಭದ ಮೇಲೆ ಖುಲಾಸೆಗೊಳಿಸಿತ್ತು.

ರೈಲ್ವೆ: ‘ಫೀಲ್ಡ್ ಆಫೀಸರ್’ಗಳ ವೇತನ ಶ್ರೇಣಿ ಮೇಲ್ದರ್ಜೆಗೆ

ನವದೆಹಲಿ: ರೈಲ್ವೆ ಇಲಾಖೆಯ 80,000 ‘ಫೀಲ್ಡ್ ಆಫೀಸರ್’ಗಳ ವೇತನ ಶ್ರೇಣಿಯನ್ನು ಮೇಲ್ದರ್ಜೆಗೆ ಏರಿಸಲಾಗುತ್ತದೆ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಬುಧವಾರ ಪ್ರಕಟಿಸಿದರು.

ಸುಮಾರು 80 ಸಾವಿರ ರೈಲ್ವೆ ನೌಕರರಿಗೆ ತಮ್ಮ ವೇತನ ಶ್ರೇಣಿಯ ಸುಧಾರಣೆಗೆ ಇದೀಗ ಅವಕಾಶ ದೊರೆಯಲಿದೆ. ಈ ಸಂಬಂಧ ಸರ್ಕಾರ ‘ಸೂಪರ್‌ವೈಸರಿ ಕೇಡರ್’ನವರಿಗೆ ಹೊಸ ಅವಕಾಶಗಳನ್ನು ಘೋಷಿಸಿದ್ದು, ಈ ನೌಕರರು ‘ಗ್ರೂಪ್–ಎ’ ಅಧಿಕಾರಿಗಳಿಗೆ ಸಮಾನವಾದ ವೇತನ ಶ್ರೇಣಿಯನ್ನು ತಲುಪಲು ಅವಕಾಶ ಸಿಗಲಿದೆ.

ಸರ್ಕಾರದ ಈ ನಿರ್ಧಾರವು, ‘ಸೂಪರ್‌ವೈಸರಿ ಕೇಡರ್’ನ ಅಧಿಕಾರಿಗಳಾದ ಸ್ಟೇಷನ್ ಮಾಸ್ಟರ್, ಟಿಕೆಟ್ ಚೆಕ್ಕರ್, ಟ್ರಾಫಿಕ್ ಇನ್‌ಸ್ಪೆಕ್ಟರ್, ಸಿವಿಲ್, ಮೆಕ್ಯಾನಿಕಲ್, ಎಲೆಕ್ಟ್ರಿಕಲ್, ಎಸ್ ಅಂಡ್ ಟಿ ಟ್ರಾಫಿಕ್ ಕೆಮಿಕಲ್ ಮತ್ತು ಎಸ್ ಅಂಡ್ ಟಿ, ಮೆಟಲರ್ಜಿಕಲ್, ಸ್ಟೋರ್ಸ್ ಮತ್ತು ವಾಣಿಜ್ಯ ವಿಭಾಗಗಳ ಮೇಲ್ವಿಚಾರಕರಂತಹ ಸುಮಾರು 40,000 ಸಿಬ್ಬಂದಿಗೆ ತಕ್ಷಣವೇ ಪ್ರಯೋಜನ ದೊರೆಯಲಿದೆ. ಈ ಎಲ್ಲ ಸಿಬ್ಬಂದಿ ತಿಂಗಳಿಗೆ ಸರಾಸರಿ ₹ 2,500ರಿಂದ ₹ 4,000ದವರೆಗೆ ಹೆಚ್ಚುವರಿ ವೇತನ ಪಡೆಯಲಿದ್ದಾರೆ.

ಬೀದಿ ನಾಯಿಗೆ ಆಹಾರ ನೀಡಿದರೆ ದತ್ತು ತೆಗೆದುಕೊಳ್ಳಬೇಕಿಲ್ಲ: ‘ಸುಪ್ರೀಂ’

ನವದೆಹಲಿ (ಪಿಟಿಐ): ಬೀದಿ ನಾಯಿಗಳಿಗೆ ಆಹಾರ ನೀಡುವವರು ಕಡ್ಡಾಯವಾಗಿ ಅವುಗಳನ್ನು ದತ್ತು ತೆಗೆದುಕೊಳ್ಳಬೇಕು ಅಥವಾ ನಾಯಿಗಳ ಆಶ್ರಯ ಮನೆಯಲ್ಲಿ ಅವುಗಳನ್ನು ಇಟ್ಟು ಖರ್ಚು ಭರಿಸಬೇಕು ಎಂದು ಬಾಂಬೆ ಹೈಕೋರ್ಟ್ ನೀಡಿದ್ದ ಆದೇಶವನ್ನು ಸುಪ್ರೀಂಕೋರ್ಟ್ ಬುಧವಾರ ವಜಾಗೊಳಿಸಿದೆ.

ಇದೇ ವೇಳೆ, ಸಾರ್ವಜನಿಕರು ಬೀದಿ ನಾಯಿಗಳಿಗೆ ಆಹಾರ ನೀಡಲು ನಿರ್ದಿಷ್ಟ ಸ್ಥಳವನ್ನು ನಿಗದಿಪಡಿಸಬೇಕು ಎಂದು ನಾಗ್ಪುರ ಪಾಲಿಕೆಗೆ ಸುಪ್ರೀಂಕೋರ್ಟ್ ಸೂಚಿಸಿದೆ.

ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಲಯ ‘ನಾಯಿಗಳಿಗೆ ಆಹಾರ ನೀಡುವವರು ಕಡ್ಡಾಯವಾಗಿ ಅವುಗಳನ್ನು ದತ್ತು ತೆಗೆದುಕೊಳ್ಳಬೇಕು ಎಂದು ಹೇಳಲು ಸಾಧ್ಯವಿಲ್ಲ. ಮುಂದಿನ ವಿಚಾರಣೆವರೆಗೂ ಬೀದಿ ನಾಯಿಗಳಿಗೆ ಆಹಾರ ಹಾಕುವವರ ವಿರುದ್ಧ ಯಾವುದೇ ಬಲವಂತದ ಕ್ರಮ ಜರುಗಿಸುವಂತಿಲ್ಲ. ಸಾರ್ವಜನಿಕರು ಸಹ ನಾಯಿಗಳಿಗೆ ಆಹಾರ ನೀಡುವ ವೇಳೆ ಇತರರಿಗೆ ಯಾವುದೇ ತೊಂದರೆ ಆಗದಂತೆ ನೋಡಿಕೊಳ್ಳಬೇಕು ಎಂದು ತಿಳಿಸಿದೆ.

ಹಾಗೆಯೇ ಬಾಂಬೆ ಹೈಕೋರ್ಟ್ ಆದೇಶದ ಕುರಿತು ಪ್ರತಿಕ್ರಿಯೆ ನೀಡುವಂತೆ ನಾಗ್ಪುರ ಪಾಲಿಕೆ ಮತ್ತು ಭಾರತದ ಪ್ರಾಣಿಗಳ ಕಲ್ಯಾಣ ಮಂಡಳಿಯನ್ನು ಕೇಳಿದೆ.

ನಾಗ್ಪುರ ಮತ್ತು ಸುತ್ತಮುತ್ತಲಿನ ಸಾರ್ವಜನಿಕ ಪ್ರದೇಶದದಲ್ಲಿ ಬೀದಿ ನಾಯಿಗಳಿಗೆ ಆಹಾರ ಹಾಕುವವರು ಕಡ್ಡಾಯವಾಗಿ ಅವುಗಳನ್ನು ದತ್ತು ತೆಗೆದುಕೊಳ್ಳಬೇಕು. ಇಲ್ಲದಿದ್ದಲ್ಲಿ ಪ್ರತಿ ತಪ್ಪಿಗೆ ₹200 ದಂಡವಿಧಿಸಬಹುದು ಎಂದು ಅ.20ರಂದು ಬಾಂಬೆ ಹೈಕೋರ್ಟ್ ತೀರ್ಪು ನೀಡಿತ್ತು.

ಶ್ರದ್ಧಾ ವಾಲಕರ್ ದೇಹದ ತುಂಡುಗಳಿಗೆ ಆರಣ್ಯದಲ್ಲಿ ಮುಂದುವರಿದ ಶೋಧ

ನಾರ್ಕೊ ಪರೀಕ್ಷೆಗೆ ಅನುಮತಿ ಕೇಳಿದ ಪೊಲೀಸರು

ನವದೆಹಲಿ/ಮುಂಬೈ (ಪಿಟಿಐ): ಆರೋಪಿ ಅಫ್ತಾಬ್ ಅಮೀನ್ ಪೂನಾವಾಲಾನ ಸಹಜೀವನದ ಸಂಗಾತಿ, ಭೀಕರ ಹತ್ಯೆಗೊಳಗಾದ ಶ್ರದ್ಧಾ ವಾಲಕರ್ ದೇಹದ ಉಳಿದ ಭಾಗಗಳಿಗೆ ಶೋಧ ಕಾರ್ಯ ಸತತ ಎರಡನೇ ದಿನವೂ ಛತ್ತರ್‌ಪುರದ ಅರಣ್ಯ ಪ್ರದೇಶದಲ್ಲಿ ಮುಂದುವರಿದಿದೆ. ಆರೋಪಿಯನ್ನು ಮಾದಕ ದ್ರವ್ಯ ಸೇವನೆ (ನಾರ್ಕೊ) ಪರೀಕ್ಷೆಗೆ ಒಳಪಡಿಸಲು ಪೊಲೀಸರು ಅನುಮತಿ ಕೇಳಿದ್ದಾರೆ ಎಂದು ಬುಧವಾರ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಶ್ರದ್ಧಾ ದೇಹದ ತುಂಡುಗಳನ್ನು ಎಸೆದಿರುವ ಅರಣ್ಯ ಪ್ರದೇಶ ಸೇರಿ ಅನೇಕ ಸ್ಥಳಗಳಿಗೆ ಆರೋಪಿಯನ್ನು ಬುಧವಾರ ಕರೆದೊಯ್ದು ಪರಿಶೀಲಿಸಲಾಯಿತು. ಆರೋಪಿಯನ್ನು ನಾರ್ಕೊ ಪರೀಕ್ಷೆಗೆ ಒಳಪಡಿಸಲು ಅರ್ಜಿ ಸಲ್ಲಿಸಿದ್ದೇವೆ. ನ್ಯಾಯಾಲಯದಿಂದ ಇನ್ನೂ ಅನುಮತಿ ಸಿಕ್ಕಿಲ್ಲ’ ಎಂದು ಅವರು ಹೇಳಿದರು.

ತನಿಖಾಧಿಕಾರಿಗಳ ಪ್ರಕಾರ, ಅಫ್ತಾಬ್ ಅಮೀನ್ ತನ್ನ ಹೇಳಿಕೆಗಳನ್ನು ಬದಲಾಯಿಸುತ್ತಿರುವುದರಿಂದ ಮತ್ತು ತನಿಖೆಗೆ ಸಹಕರಿಸದ ಕಾರಣ ನಾರ್ಕೊ ಪರೀಕ್ಷೆ ಅಗತ್ಯವಾಗಿದೆ. ಇದುವರೆಗೆ ಸಂಗ್ರಹಿಸಿದ ಶ್ರದ್ಧಾ ಶವದ 13 ಭಾಗಗಳ ಡಿಎನ್‌ಎ ವಿಶ್ಲೇಷಣೆಗಾಗಿ ಶ್ರದ್ಧಾ ಅವರ ತಂದೆಯ ರಕ್ತದ ಮಾದರಿಗಳನ್ನು ಸಹ ಸಂಗ್ರಹಿಸಲಾಗಿದೆ.

‘ಮಗಳನ್ನು ಆರೋಪಿ ಹತ್ಯೆ ಮಾಡಿರುವುದಾಗಿ ನನ್ನ ಎದುರು ತಪ್ಪೊಪ್ಪಿಗೆ ನೀಡಿದ್ದಾನೆ’ ಎಂದು ಮೃತ ಶ್ರದ್ಧಾ ಅವರ ತಂದೆ ಹೇಳಿರುವುದಾಗಿ ‘ಎನ್‌ಡಿಟಿವಿ’ ವರದಿ ಮಾಡಿದೆ.

ಶ್ರದ್ಧಾ ಅವರ ದೇಹದ್ದು ಎನ್ನಲಾದ ಕೆಲವು ಮೂಳೆಗಳು ಮತ್ತು ಬ್ಯಾಗ್ ವಶಪಡಿಸಿಕೊಳ್ಳಲಾಗಿದೆ. ಬ್ಯಾಗ್‌ನಲ್ಲಿ ಬಟ್ಟೆ ಮತ್ತು ಇತರ ವಸ್ತುಗಳು ಇವೆ. ಶ್ರದ್ಧಾ ಅವರ ರುಂಡ, ಫೋನ್ ಮತ್ತು ಹತ್ಯೆಗೆ ಬಳಸಿದ ಆಯುಧ ಈವರೆಗೆ ಪತ್ತೆಯಾಗಿಲ್ಲ. ಮೇ 22ರ ನಂತರ ಶ್ರದ್ಧಾ ಅವರ ಬ್ಯಾಂಕ್ ಖಾತೆಯಿಂದ ₹54,000 ಅಫ್ತಾಬ್ ಖಾತೆಗೆ ವರ್ಗಾಯಿಸಿರುವುದು ಪತ್ತೆಯಾಗಿದೆ. ಕೆಲವು ಅನುಮಾನಾಸ್ಪದ ಬ್ಯಾಂಕ್ ವಹಿವಾಟುಗಳೂ ನಡೆದಿರುವ ದಾಖಲೆಗಳು ಲಭಿಸಿದೆ. ಸಾಮಾಜಿಕ ಮಾಧ್ಯಮದಲ್ಲಿ ಇಬ್ಬರೂ ನಡೆಸಿರುವ ಚಾಟ್‌ಗಳನ್ನು ಸಹ ಪರಿಶೀಲಿಸಲಾಗುತ್ತಿದೆ. ಈ ಹಿಂದೆಯೂ ಪೂನಾವಾಲಾ ಆಕೆಯನ್ನು ಕೊಲ್ಲಲು ಪ್ರಯತ್ನಿಸಿರುವ ಶಂಕೆ ಇರುವುದರಿಂದ ಈ ಬಗ್ಗೆಯೂ ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದ್ದಾರೆ.

ಆರೋಪಿಯನ್ನು ಗುರುವಾರ ಸಾಕೇತ್ ನ್ಯಾಯಾಲಯಕ್ಕೆ ಹಾಜರುಪಡಿಸಿ, ಹೆಚ್ಚಿನ ತನಿಖೆಗಾಗಿ ಕಸ್ಟಡಿಗೆ ನೀಡುವಂತೆ ಮನವಿ ಮಾಡಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ಮತಾಂತರ, ಮದುವೆಗೆ ಯುವತಿ ನಿರಾಕರಣೆ– ಹತ್ಯೆ

ಲಖನೌ: 18 ವರ್ಷದ ಯುವತಿಯೊಬ್ಬಳು ಮತಾಂತರ ಹಾಗೂ ಮದುವೆಗೆ ನಿರಾಕರಿಸಿದಕ್ಕೆ ಪಕ್ಕದ ಮನೆಯ ಸೂಫಿಯಾನ್ ಎಂಬ ಯುವಕ ಆಕೆಯನ್ನು ಮನೆಯ ನಾಲ್ಕನೇ ಮಹಡಿಯಿಂದ ತಳ್ಳಿ ಹತ್ಯೆ ಮಾಡಿರುವ ಘಟನೆ ದುಬಗ್ಗಾ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ ಎಂದು ಬುಧವಾರ ಪೊಲೀಸರು ತಿಳಿಸಿದ್ದಾರೆ.

ಯುವತಿಯು ದುಬಗ್ಗಾ ಪ್ರದೇಶದಲ್ಲಿ ವಾಸವಿದ್ದು, ಆರೋಪಿ ಪಕ್ಕದ ಮನೆಯವನೇ ಆಗಿದ್ದಾನೆ. ಯುವತಿಯು ಮದುವೆ ಹಾಗೂ ಮತಾಂತರಕ್ಕೆ ಸಂಬಂಧಿಸಿದಂತೆ ಆರೋಪಿಯೊಂದಿಗೆ ಜಗಳ ಮಾಡಿಕೊಂಡಿದ್ದಳು. ನಂತರ ಯುವತಿಯು ತನ್ನ ತಾಯಿ ಮತ್ತು ಸಹೋದರನೊಂದಿಗೆ ಆರೋಪಿ ಮನೆಗೆ ತೆರಳಿ ಅವರ ಪೋಷಕರಿಗೆ ಅವನ ವರ್ತನೆಯ ಬಗ್ಗೆ ದೂರು ನೀಡಿದ್ದಳು. ಆ ಸಂದರ್ಭದಲ್ಲಿ ಆಕೆಯನ್ನು ಮನೆ ಮೇಲಿಂದ ತಳ್ಳಿದ್ದಾನೆ. ಈ ಘಟನೆ ಮಂಗಳವಾರ ರಾತ್ರಿ ನಡೆದಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ತಕ್ಷಣವೇ ಆಕೆಯನ್ನು ಆಸ್ಪತ್ರೆಗೆ ಕರೆದೊಯ್ದರೂ ಚಿಕಿತ್ಸೆ ಫಲಕಾರಿಯಾಗದ ಸಾವನ್ನಪ್ಪಿದ್ದಾಳೆಂದು ಮೂಲಗಳು ತಿಳಿಸಿವೆ.

ಆರೋಪಿ ಯುವತಿಯನ್ನು ಮತಾಂತರ ಹಾಗೂ ಮದುವೆಯಾಗುವಂತೆ ಪೀಡಿಸುತ್ತಿದ್ದ ಎಂದು ಯುವತಿಯ ತಾಯಿ ತಿಳಿಸಿದ್ದಾರೆ. ಆರೋಪಿ ವಿರುದ್ಧ ದೂರು ದಾಖಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ

ಗೆಳತಿ ಹತ್ಯೆ ಬಳಿಕ ಜಾಲತಾಣದಲ್ಲಿ ವಿಡಿಯೊ ಹಂಚಿಕೆ

ಜಬಲ್‌ಪುರ, ಮಧ್ಯಪ್ರದೇಶ (ಪಿಟಿಐ): ನಂಬಿಕೆ ದ್ರೋಹ ಎಸಗಿದ್ದಾಳೆ ಎಂಬ ಕಾರಣಕ್ಕೆ ವ್ಯಕ್ತಿಯೊಬ್ಬ ತನ್ನ ಗೆಳತಿಯನ್ನು ರೆಸಾರ್ಟ್‌ವೊಂದರಲ್ಲಿ ಹತ್ಯೆ ಮಾಡಿ ಈ ಕುರಿತು ವಿಡಿಯೊವನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾನೆ. ಘಟನೆ ನಡೆದು ವಾರ ಕಳೆದರೂ ಪೊಲೀಸರು ಆತನನ್ನು ಬಂಧಿಸಿಲ್ಲ.

ತನ್ನ ಹೆಸರು ಅಭಿಜಿತ್ ಪಾಟಿದಾರ್ ಎಂದು ಹೇಳಿಕೊಂಡಿರುವ ಆರೋಪಿ, ‘ಬೇವಫಾಯಿ ನಹಿ ಕರ್ನೆ ಕಾ’ (ನಂಬಿಕೆ ದ್ರೋಹ ಮಾಡಬೇಡ) ಎಂದು ಹೇಳುತ್ತಾ ರೆಸಾರ್ಟ್‌ನ ಕೊಠಡಿಯೊಳಗೆ ಹೋಗುತ್ತಾನೆ. ಅಲ್ಲಿ ಹಾಸಿಗೆ ಮೇಲೆ ರಕ್ತದ ಮಡುವಿನಲ್ಲಿ ಬಿದ್ದಿರುವ ಮಹಿಳೆಯ ಶವ ತೋರಿಸುತ್ತಾನೆ. ಬಳಿಕ ಮಹಿಳೆಯ ಮುಖದ ಮೇಲಿನ ಹೊದಿಕೆ ತೆಗೆಯುತ್ತಾನೆ. ಈ ದೃಶ್ಯವಿರುವ ವಿಡಿಯೊವನ್ನು ಆತ ಹೋದ ಶುಕ್ರವಾರ ಮೃತ ಮಹಿಳೆಯ ಇನ್‌ಸ್ಟಾಗ್ರಾಂ ಖಾತೆಯಿಂದ ಹಂಚಿಕೊಂಡಿದ್ದಾನೆ.

‘ನಾನು ಜಬಲ್‌ಪುರದ ಪಠಾಣ್ ನಗರದ ನಿವಾಸಿ. ಎಣ್ಣೆ ಹಾಗೂ ಸಕ್ಕರೆ ವ್ಯಾಪಾರ ಮಾಡುತ್ತಿದ್ದೇನೆ. ಮಹಿಳೆಯನ್ನು ನಾನೇ ಹತ್ಯೆ ಮಾಡಿದ್ದೇನೆ’ ಎಂದು ಮತ್ತೊಂದು ವಿಡಿಯೊದಲ್ಲಿ ಹೇಳಿಕೊಂಡಿದ್ದಾನೆ. ‘ಮೃತ ಮಹಿಳೆಯನ್ನು ಶಿಲ್ಪಾ ಝರಿಯಾ (22) ಎಂದು ಗುರುತಿಸಲಾಗಿದೆ. ಆಕೆ ಜಬಲ್‌ಪುರ ಜಿಲ್ಲೆಯ ಕುಂದಾಮ್ ಪ್ರದೇಶದ ನಿವಾಸಿ ಎಂಬುದು ಗೊತ್ತಾಗಿದೆ. ಇದೇ ತಿಂಗಳ 8ರಂದು ಆಕೆಯ ಹತ್ಯೆ ನಡೆದಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಬುಧವಾರ ತಿಳಿಸಿದ್ದಾರೆ.

‘ಆರೋಪಿಯ ಪತ್ತೆಗಾಗಿ ವಿವಿಧ ಸ್ಥಳಗಳಿಗೆ ಪೊಲೀಸರ ತಂಡ ಕಳುಹಿಸಲಾಗಿದೆ. ಈವರೆಗೆ ಕಲೆಹಾಕಿರುವ ಮಾಹಿತಿಗಳನ್ನು ಸೂಕ್ಷ್ಮವಾಗಿ ಪರಿಶೀಲಿಸುತ್ತಿದ್ದೇವೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹೇಳಿದ್ದಾರೆ.

ಗುರುವಾರ • ನವೆಂಬರ್ 17, 2022 ಪ್ರಜಾವಾಣಿ

20ರಂದು ದೋಹಾದ ಅಲ್ ಬೈತ್ ಕ್ರೀಡಾಂಗಣದಲ್ಲಿ ಫುಟ್‌ಬಾಲ್ ಹಬ್ಬಕ್ಕೆ ಚಾಲನೆ

ಉದ್ಘಾಟನಾ ಸಮಾರಂಭ; ತಾರಾ ಮೆರುಗು

ದೋಹಾ (ರಾಯಿಟರ್ಸ್/ಎಪಿ): ಫಿಫಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯ ಉದ್ಘಾಟನಾ ಸಮಾರಂಭವನ್ನು ಸ್ಮರಣೀಯವನ್ನಾಗಿಸಲು ಸಂಘಟಕರು ಎಲ್ಲ ಸಿದ್ಧತೆ ಮಾಡಿದ್ದಾರೆ.

ನ.20ರಂದು ದೋಹಾದ ಅಲ್ ಬೈತ್ ಕ್ರೀಡಾಂಗಣದಲ್ಲಿ ಟೂರ್ನಿಗೆ ವರ್ಣರಂಜಿತ ಚಾಲನೆ ಲಭಿಸಲಿದೆ. ಕತಾರ್‌ನ ಸಂಸ್ಕೃತಿಯನ್ನು ಬಿಂಬಿಸುವುದೂ ಸೇರಿದಂತೆ ಹಲವು ಕಾರ್ಯಕ್ರಮಗಳು ಆಯೋಜನೆಯಾಗಿವೆ.

ಸಮಾರಂಭದಲ್ಲಿ ಪ್ರದರ್ಶನ ನೀಡಲಿರುವ ಕಲಾವಿದರ ಪಟ್ಟಿಯನ್ನು ಫಿಫಾ ಇನ್ನೂ ಬಿಡುಗಡೆ ಮಾಡಿಲ್ಲ. ವಿವಿಧ ದೇಶಗಳ ಖ್ಯಾತ ಕಲಾವಿದರು ಕಾರ್ಯಕ್ರಮದ ಕಳೆ ಹೆಚ್ಚಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ದಕ್ಷಿಣ ಕೊರಿಯಾದ ಬಿಟಿಎಸ್ ಸಂಗೀತ ತಂಡದ ಪ್ರದರ್ಶನ ಪ್ರಧಾನ ಆಕರ್ಷಣೆ ಎನಿಸಲಿದೆ. ಪಾಪ್ ತಾರೆ ಕೊಲಂಬಿಯದ ಶಕೀರಾ ಅವರ ಪ್ರದರ್ಶನವೂ ಇರಲಿದೆ ಎಂದು ‘ದಿ ಟೆಲಿಗ್ರಾಫ್’ ವರದಿ ಮಾಡಿದೆ. ಆದರೆ ಶಕೀರಾ ಪಾಲ್ಗೊಳ್ಳುವುದಿಲ್ಲ ಎಂಬ ವರದಿಗಳೂ ಇವೆ.

ಅಲ್ ಬೈತ್ ಕ್ರೀಡಾಂಗಣ ದೋಹಾದ ಕೇಂದ್ರ ಭಾಗದಿಂದ ಉತ್ತರಕ್ಕೆ 40 ಕಿ.ಮೀ. ದೂರದಲ್ಲಿದ್ದು, 60 ಸಾವಿರ ಆಸನ ವ್ಯವಸ್ಥೆ ಹೊಂದಿದೆ. ಉದ್ಘಾಟನಾ ಸಮಾರಂಭ ಭಾರತೀಯ ಕಾಲಮಾನ ರಾತ್ರಿ 7.30ಕ್ಕೆ ಶುರುವಾಗಲಿದೆ. ಅದೇ ದಿನ ರಾತ್ರಿ 9.30ಕ್ಕೆ ಆತಿಥೇಯ ಕತಾರ್ ಮತ್ತು ಈಕ್ವೆಡಾರ್ ಮಧ್ಯೆ ಮೊದಲ ಪಂದ್ಯ ನಡೆಯಲಿದೆ.

ಫ್ರಾನ್ಸ್‌ಗೆ ಕಿರೀಟ- ಬೆಂಜೆಮಾ ವಿಶ್ವಾಸ (ಪ್ಯಾರಿಸ್ ವರದಿ): ಹಾಲಿ ಚಾಂಪಿಯನ್ ಫ್ರಾನ್ಸ್, ಟ್ರೋಫಿಯನ್ನು ತನ್ನಲ್ಲೇ ಉಳಿಸಿಕೊಳ್ಳಲಿದೆ ಎಂಬ ವಿಶ್ವಾಸವನ್ನು ತಂಡದ ಪ್ರಮುಖ ಆಟಗಾರ ಕರೀಂ ಬೆಂಜೆಮಾ ವ್ಯಕ್ತಪಡಿಸಿದ್ದಾರೆ.

ವಿಶ್ವದ ಶ್ರೇಷ್ಠ ಫುಟ್‌ಬಾಲ್ ಆಟಗಾರನಿಗೆ ನೀಡುವ ಪ್ರತಿಷ್ಠಿತ ‘ಬ್ಯಾಲನ್ ಡಿಓರ್’ ಪ್ರಶಸ್ತಿಯನ್ನು ಈಚೆಗೆ ಗೆದ್ದಿರುವ ಬೆಂಜೆಮಾ ಅತ್ಯುತ್ತಮ ಫಾರ್ಮ್‌ನಲ್ಲಿದ್ದಾರೆ. ಅವರು ಈ ಟೂರ್ನಿಯಲ್ಲಿ ಕಿಲಿಯಾನ್ ಎಂಬಪೆ ಮತ್ತು ಆಂಟೋನ್ ಗ್ರೀಸ್‌ಮಾನ್ ಅವರ ಜತೆ ಫ್ರಾನ್ಸ್ ತಂಡದ ಫಾರ್ವರ್ಡ್ ವಿಭಾಗವನ್ನು ಮುನ್ನಡೆಸಲಿದ್ದಾರೆ.



ವಿಶ್ವಕಪ್ ಟೂರ್ನಿಯ ಉದ್ಘಾಟನಾ ಸಮಾರಂಭ ನಡೆಯಲಿರುವ ದೋಹಾದ ಅಲ್ ಬೈತ್ ಕ್ರೀಡಾಂಗಣದ ಬಳಿ ಟ್ರೋಫಿಯ ಬೃಹತ್ ಪ್ರತಿಕೃತಿ ಇಡಲಾಗಿದೆ —ಎಎಫ್‌ಪಿ ಚಿತ್ರ

ಅಭಿಮಾನಿಗಳಿಗೆ ಸಂಘಟಕರ ಬೆಂಬಲ

ದೋಹಾ (ಎಎಫ್‌ಪಿ): ವಿಶ್ವಕಪ್ ಟೂರ್ನಿಗೆ ಪ್ರಚಾರ ನೀಡುವ ಉದ್ದೇಶದಿಂದ ದೋಹಾದಲ್ಲಿ ಮೆರವಣಿಗೆ ನಡೆಸಿದ ಫುಟ್‌ಬಾಲ್ ಅಭಿಮಾನಿಗಳ ಬೆಂಬಲಕ್ಕೆ ಸಂಘಟಕರು ನಿಂತಿದ್ದಾರೆ.

ಭಾರತ ಒಳಗೊಂಡಂತೆ ದಕ್ಷಿಣ ಏಷ್ಯಾದ ದೇಶಗಳ ನೂರಾರು ಫುಟ್‌ಬಾಲ್ ಪ್ರೇಮಿಗಳು ಅರ್ಜೆಂಟೀನಾ, ಬ್ರೆಜಿಲ್ ಮತ್ತು ಇಂಗ್ಲೆಂಡ್ ತಂಡಗಳ ಜೆರ್ಸಿಯನ್ನು ಧರಿಸಿ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು. ಕೆಲವರು ಇವರನ್ನು ‘ನಕಲಿ ಅಭಿಮಾನಿಗಳು’ ಎಂದು ಲೇವಡಿ ಮಾಡಿದ್ದರು. ಸಾಮಾಜಿಕ ಜಾಲತಾಣಗಳಲ್ಲೂ ಈ ಬಗ್ಗೆ ಚರ್ಚೆ ನಡೆದಿತ್ತು.

ಆದರೆ ಅಭಿಮಾನಿಗಳ ಬೆಂಬಲಕ್ಕೆ ನಿಂತಿರುವ ಸಂಘಟಕರು, ‘ಇಂತಹ ಆರೋಪಗಳನ್ನು ನಾವು ತಳ್ಳಿಹಾಕುತ್ತೇವೆ. ಭಿನ್ನ ಸಂಸ್ಕೃತಿ ಮತ್ತು ಹಲವು ದೇಶಗಳಿಂದ ಬಂದಿರುವ ಫುಟ್‌ಬಾಲ್ ಪ್ರೇಮಿಗಳು ಇಲ್ಲಿದ್ದಾರೆ. ಅವರು ವಿವಿಧ ತಂಡಗಳನ್ನು ಬೆಂಬಲಿಸುತ್ತಾರೆ’ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂಗ್ಲೆಂಡ್ ಆಟಗಾರರು ಮಂಗಳವಾರ ದೋಹಾದ ಹೋಟೆಲ್‌ಗೆ ಬಂದಾಗ ಅವರನ್ನು ಸ್ವಾಗತಿಸಲು ನೆರೆದಿದ್ದವರಲ್ಲಿ ಇಂಗ್ಲೆಂಡ್‌ನ ಪ್ರಜೆಗಳಿಗಿಂತ ಭಾರತದ ಫುಟ್‌ಬಾಲ್ ಪ್ರೇಮಿಗಳೇ ಹೆಚ್ಚಿನ ಸಂಖ್ಯೆಯಲ್ಲಿದ್ದರು.


ಎಸ್‌ಡಿಪಿಐ ಧ್ವಜ ಎಂದು ಪೋರ್ಚುಗಲ್ ಧ್ವಜ ಹರಿದ!

ಕಣ್ಣೂರು (ಪಿಟಿಐ): ಫಿಫಾ ವಿಶ್ವಕಪ್ ಸಮೀಪಿಸುತ್ತಿರುವಂತೆ ಕೇರಳದಲ್ಲಿ ಫುಟ್‌ಬಾಲ್ ಕಾವು ಹೆಚ್ಚಿದೆ. ಈಗಾಗಲೇ ಹಲವು ನಗರಗಳಲ್ಲಿ ಮೆಸ್ಸಿ, ರೊನಾಲ್ಡೊ ಒಳಗೊಂಡಂತೆ ಪ್ರಮುಖ ಆಟಗಾರರ ಬೃಹತ್ ಕಟೌಟ್‌ಗಳು ತಲೆ ಎತ್ತಿವೆ. ಬ್ರೆಜಿಲ್, ಅರ್ಜೆಂಟೀನಾ, ಪೋರ್ಚುಗಲ್ ಸೇರಿದಂತೆ ವಿವಿಧ ದೇಶಗಳ ಧ್ವಜಗಳೂ ಅಲ್ಲಲ್ಲಿ ರಾರಾಜಿಸುತ್ತಿವೆ.

ಕಣ್ಣೂರು ನಗರದ ಪಾನೂರು ಪ್ರದೇಶದ ರಸ್ತೆ ಬದಿಯಲ್ಲಿ ಕ್ರಿಸ್ಟಿಯಾನೊ ರೊನಾಲ್ಡೊ ಅಭಿಮಾನಿಗಳು ಪೋರ್ಚುಗಲ್‌ನ ಧ್ವಜ ಕಟ್ಟಿದ್ದರು. ಆದರೆ ವ್ಯಕ್ತಿಯೊಬ್ಬ ಅದನ್ನು ಹರಿದು ಹಾಕಿದ್ದು, ಆ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದೆ. ‘ಪೋರ್ಚುಗಲ್ ಧ್ವಜವನ್ನು ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ (ಎಸ್‌ಡಿಪಿಐ) ಧ್ವಜ ಎಂದು ಭಾವಿಸಿ ಹರಿದು ಹಾಕಲಾಗಿದೆ. ಬಿಜೆಪಿ ಕಾರ್ಯಕರ್ತ ಆ ಕೆಲಸ ಮಾಡಿದ್ದಾನೆ’ ಎಂದು ಕೆಲವರು ಸಾಮಾಜಿಕ ಮಾಧ್ಯಮಗಳಲ್ಲಿ ಆರೋಪಿಸಿದ್ದಾರೆ.

ಧ್ವಜ ಹರಿದ ವ್ಯಕ್ತಿಯನ್ನು ಪೊಲೀಸರು ಬಂಧಿಸಿ, ಠಾಣಾ ಜಾಮೀನಿನಲ್ಲಿ ಬಿಡುಗಡೆ ಮಾಡಿದ್ದಾರೆ.

‘ಆತ ಬಿಜೆಪಿಯ ಸಕ್ರಿಯ ಕಾರ್ಯಕರ್ತ ಅಲ್ಲ. ಯಾವುದೇ ಅಪರಾಧ ಹಿನ್ನೆಲೆ ಹೊಂದಿಲ್ಲ. ಅಮಲೇರಿದ ಸ್ಥಿತಿಯಲ್ಲಿ ಈ ಕೃತ್ಯ ಎಸಗಿದ್ದಾನೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.



ಏರ್‌ಗನ್: ಭಾರತದ ಶೂಟರ್‌ಗಳ ಪ್ರಾಬಲ್ಯ

ನವದೆಹಲಿ (ಪಿಟಿಐ): ಭಾರತದ ಪಿಸ್ತೂಲ್ ಶೂಟರ್‌ಗಳು ಏಷ್ಯನ್ ಏರ್ ಗನ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಬೇಟೆ ಮುಂದುವರಿಸಿದ್ದಾರೆ.

ಕೊರಿಯಾದ ಡೇಗುನಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನಲ್ಲಿ ಬುಧವಾರ ಸ್ಪರ್ಧೆಯಲ್ಲಿದ್ದ ಎಲ್ಲ ನಾಲ್ಕೂ ಚಿನ್ನಗಳೂ ಭಾರತದ ಪಾಲಾದವು. ಸದ್ಯ ತಂಡವು ಗೆದ್ದ ಪದಕಗಳ ಸಂಖ್ಯೆ 21ಕ್ಕೇರಿದೆ.

ಮಹಿಳೆಯರ 10 ಮೀಟರ್ಸ್ ಏರ್ ಪಿಸ್ತೂಲ್‌ನಲ್ಲಿ ಭಾರತದ ರಿಧಮ್ ಸಂಗ್ವಾನ್ 16–8ರಿಂದ ಭಾರತದವರೇ ಆದ ಪಲಕ್ ಎದುರು ಗೆದ್ದು ಅಗ್ರಸ್ಥಾನ ಗಳಿಸಿದರು. ಇದೇ ಸ್ಪರ್ಧೆಯ ಜೂನಿಯರ್ ವಿಭಾಗದಲ್ಲಿ ಮನು ಭಾಕರ್ 17–15ರಿಂದ ಈಶಾ ಸಿಂಗ್ ಅವರಿಗೆ ಸೋಲಿಸಿ ಸ್ವರ್ಣ ಪದಕಕ್ಕೆ ಮುತ್ತಿಟ್ಟರು.

ಪುರುಷರ 10 ಮೀ. ಏರ್ ಪಿಸ್ತೂಲ್‌ನಲ್ಲಿ ಶಿವ ನರ್ವಾಲ್, ನವೀನ್ ಮತ್ತು ವಿಜಯ್‌ವೀರ್ ಸಿಂಧು ಅವರನ್ನೊಳಗೊಂಡ ತಂಡ ಚಿನ್ನ ತನ್ನದಾಗಿಸಿಕೊಂಡಿತು. ಫೈನಲ್‌ನಲ್ಲಿ ಇವರು 16–14ರಿಂದ ಕೊರಿಯಾ ಶೂಟರ್‌ಗಳಿಗೆ ಸೋಲುಣಿಸಿದರು. ಇದೇ ಸ್ಪರ್ಧೆಯ ಜೂನಿಯರ್ ವಿಭಾಗದಲ್ಲಿ ಸಾಗರ್ ಡಾಂಗಿ, ಸಾಮ್ರಾಟ್ ರಾಣಾ ಮತ್ತು ವರುಣ್ ತೋಮರ್ 16–2ರಿಂದ ಉಜ್ಬೆಕಿಸ್ತಾನದ ಎದುರು ಗೆದ್ದು ಸ್ವರ್ಣ ಪದಕ ಒಲಿಸಿಕೊಂಡರು.

ಡೆಕಾಥ್ಲಾನ್‌ಗೆ ಜಯ

ಬೆಂಗಳೂರು: ನಿಖಿಲ್ ಗಳಿಸಿದ ಹ್ಯಾಟ್ರಿಕ್ ಗೋಲುಗಳ ಬಲದಿಂದ ಡೆಕಾಥ್ಲಾನ್ ಹಾಕಿ ಕ್ಲಬ್ ತಂಡವು ರಾಜ್ಯ ಸಿ ಡಿವಿಷನ್ ಹಾಕಿ ಚಾಂಪಿಯನ್‌ಷಿಪ್‌ನಲ್ಲಿ ಭರ್ಜರಿ ಜಯ ಗಳಿಸಿತು.

ಬುಧವಾರ ಡೆಕಾಥ್ಲಾನ್ 9–1ರಿಂದ ಬಿಸಿವೈಎ ‘ಬಿ’ ತಂಡಕ್ಕೆ ಸೋಲುಣಿಸಿತು. ನಿಖಿಲ್ ಪಂದ್ಯದ 2ನೇ ನಿಮಿಷದಲ್ಲೇ ಚೆಂಡನ್ನು ಗೋಲುಪೆಟ್ಟಿಗೆಗೆ ಸೇರಿಸಿ ಮುನ್ನಡೆ ಒದಗಿಸಿದರು. ಬಳಿಕ 28 ಮತ್ತು 36ನೇ ನಿಮಿಷಗಳಲ್ಲಿ ಗೋಲು ದಾಖಲಿಸಿದರು. ವಿಜೇತ ತಂಡಕ್ಕಾಗಿ ದೇಶಿಕ್ (5, 31ನೇ ನಿ.), ಫಲ್ಗುನ್ (10, 42ನೇ ನಿ.), ವರುಣ್ ಗಣಪತಿ (48ನೇ ನಿ.) ಮತ್ತು ರೋಶನ್ (32ನೇ ನಿ.) ಕೂಡ ಕಾಣಿಕೆ ನೀಡಿದರು.

ಬಿಸಿವೈಎ ಪರ ಪ್ರಭು (78ನೇ ನಿ.) ಗೋಲು ಹೊಡೆದರು.

ಸುದ್ದಿ 2 ನಿಮಿಷ

ಟಿ20 ರ‍್ಯಾಂಕಿಂಗ್: ಅಗ್ರಸ್ಥಾನ ಉಳಿಸಿಕೊಂಡ ಸೂರ್ಯ

ದುಬೈ (ಪಿಟಿಐ): ಭಾರತದ ಸೂರ್ಯಕುಮಾರ್ ಯಾದವ್ ಅವರು ಬುಧವಾರ ಪ್ರಕಟಿಸಲಾದ ಐಸಿಸಿ ಟಿ20 ಕ್ರಿಕೆಟ್ ಬ್ಯಾಟರ್‌ಗಳ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನ ಉಳಿಸಿಕೊಂಡಿದ್ದಾರೆ.

ಆಸ್ಟ್ರೇಲಿಯಾದಲ್ಲಿ ಇತ್ತೀಚೆಗೆ ಕೊನೆಗೊಂಡ ಟಿ20 ವಿಶ್ವಕಪ್ ಟೂರ್ನಿಯಲ್ಲಿನ ಉತ್ತಮ ಆಟದಿಂದಾಗಿ ಸೂರ್ಯ ಮೊದಲ ಸ್ಥಾನದಲ್ಲಿ ಮುಂದುವರಿದಿದ್ದಾರೆ. ಸದ್ಯ ಅವರ ಬಳಿ 859 ರೇಟಿಂಗ್ ಪಾಯಿಂಟ್‌ಗಳಿವೆ.

ವಿಶ್ವಕಪ್ ಟೂರ್ನಿಯ ಐದು ಇನಿಂಗ್ಸ್‌ಗಳಲ್ಲಿ ಸೂರ್ಯ ಅವರು 59.75ರ ಸರಾಸರಿ ಮತ್ತು 189.68ರ ಸ್ಟ್ರೈಕ್‌ರೇಟ್‌ನಲ್ಲಿ 239 ರನ್ ಗಳಿಸಿದ್ದರು.

ಪಾಕಿಸ್ತಾನದ ಮೊಹಮ್ಮದ್ ರಿಜ್ವಾನ್ ಎರಡನೇ ಸ್ಥಾನದಲ್ಲಿದ್ದರೆ, ಬಾಬರ್ ಆಜಂ ಮೂರನೇ ಸ್ಥಾನದಲ್ಲಿದ್ದಾರೆ.

ವಿಶ್ವಕಪ್ ಟೂರ್ನಿಯಲ್ಲಿ ಭಾರತ ವಿರುದ್ಧದ ಸೆಮಿಫೈನಲ್ ಪಂದ್ಯದಲ್ಲಿ ಅಜೇಯ 86 ರನ್ ಗಳಿಸಿದ್ದ ಇಂಗ್ಲೆಂಡ್ ತಂಡದ ಅಲೆಕ್ಸ್ ಹೇಲ್ಸ್ 22 ಸ್ಥಾನಗಳ ಬಡ್ತಿ ಪಡೆದು 12ನೇ ಸ್ಥಾನಕ್ಕೇರಿದ್ದಾರೆ.

ದಕ್ಷಿಣ ಆಫ್ರಿಕಾದ ರಿಲಿ ರೊಸ್ಸೊ ಏಳನೇ ಸ್ಥಾನಕ್ಕೆ ಜಿಗಿದಿದ್ದಾರೆ. ಬೌಲಿಂಗ್‌ನಲ್ಲಿ ಇಂಗ್ಲೆಂಡ್‌ನ ಆದಿಲ್ ರಶೀದ್ ಐದು ಸ್ಥಾನ ಏರಿಕೆ ದಾಖಲಿಸಿ ಮೂರನೇ ಸ್ಥಾನಕ್ಕೆ ತಲುಪಿದ್ದಾರೆ.

ಆಲ್‌ರೌಂಡರ್‌ಗಳಲ್ಲಿ ಭಾರತದ ಹಾರ್ದಿಕ್ ಪಾಂಡ್ಯ ಮೂರನೇ ಸ್ಥಾನದಲ್ಲಿದ್ದಾರೆ.



ವಿಶ್ವ ಯೂತ್ ಬಾಕ್ಸಿಂಗ್: ದೀಪಕ್, ವಂಶಜ್ ಗೆಲುವಿನ ಆರಂಭ

ನವದೆಹಲಿ (ಪಿಟಿಐ): ಭಾರತದ ದೀಪಕ್ ಹಾಗೂ ವಂಶಜ್ ಅವರು ಏಷ್ಯನ್ ಯೂತ್ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಗೆಲುವಿನ ಆರಂಭ ಮಾಡಿದ್ದಾರೆ.

ಸ್ಪೇನ್‌ನ ಲಾ ನೂಸಿಯಾದಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ ಮೊದಲ ದಿನವಾದ ಮಂಗಳವಾರ ದೀಪಕ್ (75 ಕೆಜಿ ವಿಭಾಗ) ಅವರು ಅಲ್ಬೇನಿಯಾದ ಯುಸೇದ್ ನಿಕಾ ಎದುರು ಆರ್‌ಎಸ್‌ಸಿ (ರೆಫರಿಯಿಂದ ಸ್ಪರ್ಧೆ ಸ್ಥಗಿತ) ಆಧಾರದಲ್ಲಿ ಗೆದ್ದರು.

63.5 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿದ್ದ ವಂಶಜ್ ಅವರು ಉಜ್ಬೆಕಿಸ್ತಾನದ ಬೊಲ್ತುಯೆವ್ ಶಾವಕತೊನ್ ಎದುರು ಪಾರಮ್ಯ ಮೆರೆದರು. 5–0 ಪಾಯಿಂಟ್‌ಗಳಿಂದ ಗೆದ್ದು ಬೀಗಿದರು.

ಕಳೆದ ಬಾರಿಯ ವಿಶ್ವ ಯೂತ್ ಬಾಕ್ಸಿಂಗ್‌ನಲ್ಲಿ ಭಾರತ ತಂಡ ಎಂಟು ಚಿನ್ನ ಸೇರಿದಂತೆ ಒಟ್ಟು 11 ಪದಕಗಳನ್ನು ಗೆದ್ದು ಐತಿಹಾಸಿಕ ಸಾಧನೆ ಮಾಡಿತ್ತು.

ಐಟಿಟಿಎಫ್: ಶರತ್ ಕಮಲ್ ಆಯ್ಕೆ

ನವದೆಹಲಿ (ಪಿಟಿಐ): ಭಾರತದ ಅಚಂತ ಶರತ್ ಕಮಲ್ ಅವರು ಅಂತರರಾಷ್ಟ್ರೀಯ ಟೇಬಲ್ ಟೆನಿಸ್ ಫೆಡರೇಷನ್ (ಐಟಿಟಿಎಫ್) ಅಥ್ಲೀಟ್‌ಗಳ ಸಮಿತಿಗೆ ಆಯ್ಕೆಯಾಗಿದ್ದಾರೆ. ಭಾರತದ ಆಟಗಾರನೊಬ್ಬ ಈ ಸಮಿತಿಗೆ ಆಯ್ಕೆಯಾಗಿರುವುದು ಇದೇ ಮೊದಲು.

ಏಷ್ಯಾ, ಆಫ್ರಿಕಾ, ಅಮೆರಿಕಾ, ಯೂರೋಪ್ ಮತ್ತು ಓಷಿಯಾನಿಯಾ ವಲಯದಿಂದ ತಲಾ ನಾಲ್ಕು ಪುರುಷರು ಮತ್ತು ಮಹಿಳೆಯರು ಸೇರಿದಂತೆ ಒಟ್ಟು ಎಂಟು ಮಂದಿಯನ್ನು ಮತದಾನದ ಮೂಲಕ ಸಮಿತಿಗೆ ಆಯ್ಕೆ ಮಾಡಲಾಯಿತು. ಇವರು 2022 ರಿಂದ 2026ರ ವರೆಗೆ ಕಾರ್ಯನಿರ್ವಹಿಸಲಿದ್ದಾರೆ.

ನ.7 ರಿಂದ 13ರ ವರೆಗೆ ನಡೆದ ಮತದಾನದಲ್ಲಿ ವಿವಿಧ ದೇಶಗಳ ಒಟ್ಟು 283 ಆಟಗಾರರು ಮತ ಚಲಾಯಿಸಿದ್ದರು. ಶರತ್ ಕಮಲ್ ಅವರು ಎರಡನೇ ಅತಿಹೆಚ್ಚು ಮತಗಳನ್ನು (187) ಪಡೆದು ಆಯ್ಕೆಯಾದರು. ರೊಮೇನಿಯದ ಎಲಿಜಬೆತ್ ಸಮರಾ ಅವರು ಅತ್ಯಧಿಕ (212) ಮತಗಳನ್ನು ಗಳಿಸಿದರು.

ಮಹಿಳೆಯರ ಕೋಟಾದಲ್ಲಿ ಚೀನಾದ ಲಿಯು ಶಿವೆನ್ ಅವರು 153 ಮತಗಳನ್ನು ಗಳಿಸಿ ಆಯ್ಕೆಯಾದರು. ಈ ಸಮಿತಿಯಲ್ಲಿ ಏಷ್ಯಾದಿಂದ ಶರತ್ ಮತ್ತು ಲಿಯು ಮಾತ್ರ ಸ್ಥಾನ ಪಡೆದುಕೊಂಡಿದ್ದಾರೆ.

‘ನಿರೀಕ್ಷೆಗೂ ಹೆಚ್ಚಿನ ಮತಗಳನ್ನು ನೀಡಿ ನನ್ನನ್ನು ಸಮಿತಿಗೆ ಆಯ್ಕೆ ಮಾಡಿರುವುದಕ್ಕೆ ಏಷ್ಯಾ ಹಾಗೂ ಇತರ ದೇಶಗಳ ಆಟಗಾರರಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ಇದು ನನಗೆ ದೊರೆತ ಬಲುದೊಡ್ಡ ಗೌರವ’ ಎಂದು ಶರತ್ ಕಮಲ್ ಪ್ರತಿಕ್ರಿಯಿಸಿದ್ದಾರೆ.

ಅಥ್ಲೀಟ್‌ಗಳ ಸಮಿತಿಗೆ ಆಯ್ಕೆಯಾದವರು: ಎಲಿಜಬೆತ್ ಸಮರಾ (ರೊಮೇನಿಯ), ಅಚಂತಾ ಶರತ್ ಕಮಲ್ (ಭಾರತ), ಡೇನಿಯಲಿ ರಿಯೊಸ್ (ಪೋರ್ಟೊರಿಕೊ), ಒಮರ್ ಅಸ್ಸರ್ (ಈಜಿಪ್ಟ್), ಮೆಲಿಸಾ ಟಾಪರ್ (ಆಸ್ಟ್ರೇಲಿಯಾ), ಸ್ಟೆಫಾನ್ ಫೆಗೆರ್ಲ್ (ಆಸ್ಟ್ರಿಯಾ), ಜಾನ್ ಪೆರ್ಸನ್ (ಸ್ವೀಡನ್), ಲಿಯು ಶಿವೆನ್ (ಚೀನಾ)


ಅಚಂತ ಶರತ್ ಕಮಲ್

ಧರ್ಮಶಾಲಾ, ದೆಹಲಿಯಲ್ಲಿ ಟೆಸ್ಟ್

ನವದೆಹಲಿ (ಪಿಟಿಐ): ಮುಂದಿನ ವರ್ಷ ಫೆಬ್ರುವರಿ– ಮಾರ್ಚ್ ತಿಂಗಳಲ್ಲಿ ನಡೆಯಲಿರುವ ಭಾರತ– ಆಸ್ಟ್ರೇಲಿಯಾ ನಡುವಣ ನಾಲ್ಕು ಪಂದ್ಯಗಳ ಟೆಸ್ಟ್ ಸರಣಿಯ ಒಂದು ಪಂದ್ಯಕ್ಕೆ ನವದೆಹಲಿ ಆತಿಥ್ಯ ವಹಿಸಲಿದೆ.

ಇತರ ಮೂರು ಪಂದ್ಯಗಳು ಧರ್ಮಶಾಲಾ, ಅಹಮದಾಬಾದ್ ಮತ್ತು ಚೆನ್ನೈನಲ್ಲಿ ನಡೆಯಲಿವೆ ಎಂದು ಬಿಸಿಸಿಐ ಮೂಲಗಳು ತಿಳಿಸಿವೆ. ಬಿಸಿಸಿಐ ರೊಟೇಷನ್ ಪದ್ಧತಿಯಂತೆ ದೆಹಲಿಗೆ ಐದು ವರ್ಷಗಳ ಬಿಡುವಿನ ಬಳಿಕ ಟೆಸ್ಟ್ ಆತಿಥ್ಯ ದೊರೆತಿದೆ. 2017ರ ಡಿಸೆಂಬರ್‌ನಲ್ಲಿ ಭಾರತ– ಶ್ರೀಲಂಕಾ ನಡುವಿನ ಪಂದ್ಯವೇ ಇಲ್ಲಿ ನಡೆದ ಕೊನೆಯ ಟೆಸ್ಟ್ ಆಗಿದೆ.

‘ಸರಣಿಯ ಎರಡನೇ ಪಂದ್ಯ ದೆಹಲಿಯಲ್ಲಿ ನಡೆಯುವ ಸಾಧ್ಯತೆಯಿದೆ. ಮೂರನೇ ಟೆಸ್ಟ್ ಧರ್ಮಶಾಲಾದಲ್ಲಿ ನಡೆಯಬಹುದು. ಮೊದಲ ಟೆಸ್ಟ್ ಚೆನ್ನೈ ಅಥವಾ ಹೈದರಾಬಾದ್‌ನಲ್ಲಿ ಆಯೋಜಿಸಬೇಕೇ ಎಂಬ ಬಗ್ಗೆ ನಿರ್ಧಾರ ಆಗಿಲ್ಲ. ಕೊನೆಯ ಪಂದ್ಯ ಅಹಮದಾಬಾದ್‌ನಲ್ಲಿ ನಡೆಯಲಿದೆ. ಸರಣಿಯ ವೇಳಾಪಟ್ಟಿ ಶೀಘ್ರದಲ್ಲೇ ಬಿಡುಗಡೆಯಾಗಲಿದೆ’ ಎಂದು ಮಂಡಳಿಯ ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಈ ವರ್ಷದ ಆರಂಭದಲ್ಲಿ ಬೆಂಗಳೂರಿನಲ್ಲಿ ಭಾರತ– ಶ್ರೀಲಂಕಾ ಟೆಸ್ಟ್ ನಡೆದಿತ್ತು. ಆದ್ದರಿಂದ ಆಸ್ಟ್ರೇಲಿಯಾ ವಿರುದ್ಧದ ಪಂದ್ಯದ ಆತಿಥ್ಯಕ್ಕೆ ಬೆಂಗಳೂರನ್ನು ಪರಿಗಣಿಸಿಲ್ಲ. 4 ಪಂದ್ಯಗಳ ಟೆಸ್ಟ್ ಸರಣಿಯಲ್ಲಿ ಯಾವ ಪಂದ್ಯವನ್ನು ಹೊನಲು ಬೆಳಕಿನಡಿ (ಪಿಂಕ್ ಬಾಲ್) ನಡೆಸಬೇಕು ಎಂಬುದು ತೀರ್ಮಾನ ಆಗಿಲ್ಲ. ಬಿಸಿಸಿಐ ಇದುವರೆಗೆ 3 ಪಿಂಕ್ ಬಾಲ್ ಟೆಸ್ಟ್‌ಗಳನ್ನು ಆಯೋಜಿಸಿದೆ.

ಬಿಎಫ್‌ಸಿಗೆ ಜಯದ ತವಕ

ಮುಂಬೈ: ಹ್ಯಾಟ್ರಿಕ್ ಸೋಲಿನಿಂದ ಕಂಗೆಟ್ಟಿರುವ ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ) ತಂಡವು ಇಂಡಿಯನ್ ಸೂಪರ್ ಲೀಗ್ ಫುಟ್‌ಬಾಲ್ ಟೂರ್ನಿಯಲ್ಲಿ ಗುರುವಾರ ಮುಂಬೈ ಸಿಟಿ ಎಫ್‌ಸಿ ಸವಾಲು ಎದುರಿಸಲಿದೆ.

ಇಲ್ಲಿಯ ಮುಂಬೈ ಫುಟ್‌ಬಾಲ್ ಅರೆನಾದಲ್ಲಿ ಉಭಯ ತಂಡಗಳ ಮಧ್ಯೆ ಸೆಣಸಾಟ ನಡೆಯಲಿದೆ. ಟೂರ್ನಿಯಲ್ಲಿ ಇದುವರೆಗೆ ಐದು ಪಂದ್ಯಗಳನ್ನು ಆಡಿರುವ ಬಿಎಫ್‌ಸಿ ಕೇವಲ ಒಂದರಲ್ಲಿ ಗೆಲುವು ಸಾಧಿಸಿದೆ. ಒಂದರಲ್ಲಿ ಡ್ರಾ ಮತ್ತು 3 ಪಂದ್ಯಗಳಲ್ಲಿ ನಿರಾಸೆ ಅನುಭವಿಸಿದೆ. ಹೀಗಾಗಿ ಲಯ ಕಂಡುಕೊಳ್ಳುವ ಸವಾಲು ತಂಡದ ಮುಂದಿದೆ.

ಸುನಿಲ್ ಚೆಟ್ರಿ ನಾಯಕತ್ವದ ಬೆಂಗಳೂರು ತಾನಾಡಿದ ಕೊನೆಯ ಮೂರು ಪಂದ್ಯಗಳನ್ನು ಕ್ರಮವಾಗಿ ಹೈದರಾಬಾದ್, ಒಡಿಶಾ ಮತ್ತು ಈಸ್ಟ್ ಬೆಂಗಾಲ್ ಎದುರು ಕೈಚೆಲ್ಲಿತ್ತು.

5 ಪಂದ್ಯಗಳು ಸೇರಿ ಬಿಎಫ್‌ಸಿ ಆಟಗಾರರು ಕೇವಲ 2 ಗೋಲು ದಾಖಲಿಸಿದ್ದಾರೆ. ಆದರೆ ಮುಂಬೈ ಆಟಗಾರರು 6 ಪಂದ್ಯಗಳಿಂದ 16 ಬಾರಿ ಚೆಂಡನ್ನು ಗೋಲುಪೆಟ್ಟಿಗೆಗೆ ಸೇರಿಸಿದ್ದಾರೆ. ಹೀಗಾಗಿ ಮುಂಬೈ ತಂಡವು ಚೆಟ್ರಿ ಪಡೆಗೆ ಕಠಿಣ ಸವಾಲಾಗುವುದು ಖಚಿತ.

ಪಂದ್ಯ ಆರಂಭ: ರಾತ್ರಿ 7.30

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಡಿಸ್ನಿ ಪ್ಲಸ್ ಹಾಟ್‌ಸ್ಟಾರ್

‘ಹ್ಯಾಂಡ್ ಆಫ್ ಗಾಡ್’ ಚೆಂಡಿಗೆ ₹ 19.53 ಕೋಟಿ!

ಲಂಡನ್ (ಎಎಫ್‌ಪಿ): ಅರ್ಜೆಂಟೀನಾದ ಫುಟ್‌ಬಾಲ್ ದಂತಕತೆ ಡೀಗೊ ಮರಡೋನಾ ಅವರಿಗೆ 1986ರ ವಿಶ್ವಕಪ್‌ನಲ್ಲಿ ‘ಹ್ಯಾಂಡ್ ಆಫ್ ಗಾಡ್’ (ದೇವರ ಕೈ) ಗೋಲು ತಂದುಕೊಟ್ಟ ಚೆಂಡು ಹರಾಜಿನಲ್ಲಿ ₹ 19.53 ಕೋಟಿ ಮೊತ್ತಕ್ಕೆ ಮಾರಾಟವಾಗಿದೆ.

‘ಅಡಿಡಾಸ್’ ಕಂಪನಿಯ ಈ ಬಿಳಿ ಬಣ್ಣದ ಚೆಂಡು ಟ್ಯುನೀಷಿಯಾದ ರೆಫರಿ ಅಲಿ ಬಿನ್ ನಾಸೆರ್ ಅವರ ಸುಪರ್ದಿಯಲ್ಲಿತ್ತು. ಬ್ರಿಟನ್‌ನ ಗ್ರಹಾಂ ಬಡ್ ಹರಾಜು ಸಂಸ್ಥೆಯ ಮೂಲಕ ಅವರು ಚೆಂಡನ್ನು ಹರಾಜಿಗೆ ಇಟ್ಟಿದ್ದರು.

1986ರ ಫಿಫಾ ವಿಶ್ವಕಪ್‌ನ ಅರ್ಜೆಂಟೀನಾ– ಇಂಗ್ಲೆಂಡ್ ನಡುವಣ ಕ್ವಾರ್ಟರ್ ಫೈನಲ್‌ನಲ್ಲಿ ‘ಹ್ಯಾಂಡ್ ಆಫ್ ಗಾಡ್’ ಗೋಲು ದಾಖಲಾಗಿತ್ತು. ಮರಡೋನಾ ಅವರು ಚೆಂಡನ್ನು ಹೆಡ್ ಮಾಡುವ ವೇಳೆ ಮೆಲ್ಲನೆ ಎಡಗೈನಿಂದ ಸವರಿ ಗೋಲು ಪೆಟ್ಟಿಗೆ ಸೇರಿಸಿಬಿಟ್ಟಿದ್ದರು. ಇದು ರೆಫರಿ ಬಿನ್ ನಾಸೆರ್ ಗಮನಕ್ಕೆ ಬರದ ಕಾರಣ ಗೋಲು ಎಂದು ತೀರ್ಪು ಕೊಟ್ಟಿದ್ದರು. ‘ಚೆಂಡು ಕೈಗೆ ಸವರಿತ್ತು’ ಎಂಬುದನ್ನು ಮರಡೋನಾ ಆ ಬಳಿಕ ಬಹಿರಂಗಪಡಿಸಿದ್ದರು.

ಈ ಪಂದ್ಯವನ್ನು ಅರ್ಜೆಂಟೀನಾ 2–1 ಗೋಲುಗಳಿಂದ ಜಯಿಸಿತ್ತು.


‘ಹ್ಯಾಂಡ್ ಆಫ್ ಗಾಡ್’ ಚೆಂಡು –ಎಎಫ್‌ಪಿ ಚಿತ್ರ

ಕಬಡ್ಡಿ: ಯೋಧಾಸ್‌ಗೆ ಗೆಲುವು

ಪುಣೆ: ಪ್ರದೀಪ್ ನರ್ವಾಲ್ (22 ಪಾಯಿಂಟ್ಸ್) ಅವರ ಮಿಂಚಿನ ಆಟದ ನೆರವಿನಿಂದ ಯು.ಪಿ.ಯೋಧಾಸ್ ತಂಡ ಪ್ರೊ ಕಬಡ್ಡಿ ಲೀಗ್‌ನಲ್ಲಿ ಸುಲಭ ಗೆಲುವು ಪಡೆಯಿತು.

ಬಾಳೇವಾಡಿಯ ಶಿವಛತ್ರಪತಿ ಕ್ರೀಡಾ ಸಂಕೀರ್ಣದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಯೋಧಾಸ್ 50–31 ರಲ್ಲಿ ದಬಾಂಗ್ ಡೆಲ್ಲಿ ತಂಡವನ್ನು ಮಣಿಸಿತು. ವಿಜಯಿ ತಂಡ ವಿರಾಮದ ವೇಳೆಗೆ 29–14 ರಲ್ಲಿ ಮುನ್ನಡೆಯಲ್ಲಿತ್ತು.

ಪೈರೇಟ್ಸ್– ತಲೈವಾಸ್ ಪಂದ್ಯ ಟೈ: ಪಟ್ನಾ ಪೈರೇಟ್ಸ್ ಮತ್ತು ತಮಿಳ್ ತಲೈವಾಸ್ ನಡುವಿನ ದಿನದ ಮೊದಲ ಪಂದ್ಯ 33–33 ಪಾಯಿಂಟ್ಸ್‌ಗಳಿಂದ ‘ಟೈ’ನಲ್ಲಿ ಕೊನೆಗೊಂಡಿತು.

ಪ್ರಥಮಾರ್ಧದಲ್ಲಿ ಪೈರೇಟ್ಸ್ 20–14 ರಲ್ಲಿ ಮುನ್ನಡೆ ಸಾಧಿಸಿತ್ತು. ನರೇಂದರ್ (14 ಪಾಯಿಂಟ್ಸ್) ಅವರ ಉತ್ತಮ ಆಟದ ನೆರವಿನಿಂದ ಎರಡನೇ ಅವಧಿಯಲ್ಲಿ ತಿರುಗೇಟು ನೀಡಿದ ತಲೈವಾಸ್ ಸೋಲು ತಪ್ಪಿಸಿಕೊಂಡಿತು.

ನಾಳೆಯಿಂದ ಹೈದರಾಬಾದ್‌ನಲ್ಲಿ ಪಂದ್ಯ: ಬುಧವಾರದ ಪಂದ್ಯದೊಂದಿಗೆ ಲೀಗ್‌ನ ಪುಣೆ ಲೆಗ್‌ಗೆ ತೆರೆಬಿದ್ದಿದೆ. ಅಂತಿಮ ಲೆಗ್‌ನ ಪಂದ್ಯಗಳು ಹೈದರಾಬಾದ್‌ನ ಗಚ್ಚಿಬೌಳಿ ಒಳಾಂಗಣ ಕ್ರೀಡಾಂಗಣದಲ್ಲಿ ಶುಕ್ರವಾರದಿಂದ ನಡೆಯಲಿದೆ.

ಶುಕ್ರವಾರದ ಪಂದ್ಯಗಳು: ಪುಣೇರಿ ಪಲ್ಟನ್– ಹರಿಯಾಣ ಸ್ಟೀಲರ್ಸ್

ಬೆಂಗಾಲ್ ವಾರಿಯರ್ಸ್– ತೆಲುಗು ಟೈಟನ್ಸ್

ಗುಜರಾತ್ ಜೈಂಟ್ಸ್– ಬೆಂಗಳೂರು ಬುಲ್ಸ್

ಪಾಯಿಂಟ್ಸ್ ಪಟ್ಟಿ (ಅಗ್ರ ಆರು ತಂಡಗಳು)

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್ಸ್
ಬೆಂಗಳೂರು	14	9	4	1	51
ಪುಣೇರಿ	14	8	4	2	49
ಜೈಪುರ	14	9	5	0	48
ಯುಪಿ	14	7	5	2	45
ಮುಂಬಾ	14	8	6	0	43
ಪಟ್ನಾ	14	6	5	3	41

ಸಮರ್ಥನಂನಿಂದ 19ರಂದು ವಾಕಥಾನ್

ಬೆಂಗಳೂರು: ಸಮರ್ಥನಂ ಸಂಸ್ಥೆಯು ಇದೇ 19ರಂದು ಇಲ್ಲಿಯ ಕಂಠೀರವ ಕ್ರೀಡಾಂಗಣದಲ್ಲಿ ವಾಕಥಾನ್ ಆಯೋಜಿಸಲಿದೆ.

ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಸಂಸ್ಥಾಪಕ ಮ್ಯಾನೇಜಿಂಗ್ ಟ್ರಸ್ಟಿ ಮಹಾಂತೇಶ್ ಜಿ.ಕಿವಡಸಣ್ಣವರ್ ಈ ವಿಷಯ ತಿಳಿಸಿದರು.

‘ಅಂಧರ ಕ್ರಿಕೆಟ್ ಬಗ್ಗೆ ಅರಿವು ಮೂಡಿಸುವುದು ಮತ್ತು ಬೆಂಬಲಿಸುವುದು ಅಲ್ಲದೆ ಡಿಸೆಂಬರ್ 5ರಿಂದ ಡಿಸೆಂಬರ್ 17ರವರೆಗೆ ಭಾರತದಲ್ಲಿ ನಡೆಯಲಿರುವ ಅಂಧರ ಟಿ-20 ವಿಶ್ವಕಪ್ ಉತ್ತೇಜಿಸುವ ಗುರಿಯನ್ನು ವಾಕಥಾನ್ ಹೊಂದಿದೆ’ ಎಂದರು.

ಕಾಂತಾರ ಸಿನಿಮಾದ ನಟಿ ಸಪ್ತಮಿ ಗೌಡ ಅವರು ಈ ವರ್ಷ ವಾಕಥಾನ್‌ನ ರಾಯಭಾರಿಯಾಗಿದ್ದಾರೆ.

ಮೈಸೂರು ರೇಸ್

ಇಂಡಿಯನ್ ಪೇಟ್ರಿಯಾಟ್ ಗೆಲ್ಲುವ ನಿರೀಕ್ಷೆ

ಎಸ್.ಎಂ.ಅತೋಲಾಹಿ ಮೆಮೋರಿಯಲ್ ಟ್ರೋಫಿ ಗುರುವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಇಂಡಿಯನ್ ಪೇಟ್ರಿಯಾಟ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಮಿಸ್ ಚೈನಾ 8, ಕಪ್ಪದೋಸಿಯಾ 7, ನ್ಯೂಸ್‌ಮೇಕರ್ 5
2ನೇ ರೇಸ್: ನಾಟ್ ಸೋ ನಾಟಿ 4, ಕಿಂಗ್ಸ್ ಕಮಾಂಡ್ 8, ಶಿವಾಲಿಕ್ ಆಟಿಟ್ಯೂಡ್ 9
3ನೇ ರೇಸ್: ಕೆಟಲಿನಾ 2, ಉಡುಕೈ 7, ಆರ್ಟಿಕಲ್ ಫಿಫ್ಟೀನ್ 12
4ನೇ ರೇಸ್: ವಿಜಯ ಸ್ಪಾರ್ಕಲ್ 9, ಅಸ್ಟ್ರಾಲಜರ್ 6, ಸ್ಪಿರಿಚ್ಯುಯಲ್ ಫೋರ್ಸ್ 8
5ನೇ ರೇಸ್: ಸೂಪರ್ ಸೆಕ್ಸಿ 11, ವಿವ ಲಾ ಡಿವ 6, ಮಿಲಾಸ್ 3
6ನೇ ರೇಸ್: ಇಂಡಿಯನ್ ಪೇಟ್ರಿಯಾಟ್ 2, ಪಿಂಕ್ ಜಾಸ್ಮೈನ್ 8, ಅಗ್ವಿಲಾ 15
7ನೇ ರೇಸ್: ಪ್ರಿನ್ಸ್ ಅಭೀರ್ 9, ಗ್ಯಾಲರಿ ಕ್ವೀನ್ 10, ಕೂರ್ಗ್ ರೆಜಿಮೆಂಟ್ 2
8ನೇ ರೇಸ್: ಮ್ಯಾಜಿಕ್ ಸರ್ಕಲ್ 10, ಗಿಂಟೋಕಿ (9), ಪ್ರಿನ್ಸ್ ಕಾರ್ಪೊರೇಟ್ 14

ಉತ್ತಮ ಬೆಟ್: ಪ್ರಿನ್ಸ್ ಅಭೀರ್

ಜಾಕ್‌ಪಾಟ್	1ನೇ ಟ್ರಬಲ್	2ನೇ ಟ್ರಬಲ್	3ನೇ ಟ್ರಬಲ್
4,5,6,7,8	1,2,3	3,4,5	6,7,8

ಸಂಕ್ಷಿಪ್ತ ಸುದ್ದಿ

21ರಿಂದ ಮಡಿಕೇರಿಯಲ್ಲಿ ರಾಜ್ಯಮಟ್ಟದ ಹಾಕಿ

ಮಡಿಕೇರಿ: ‘ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ವತಿಯಿಂದ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಬಾಲಕ–ಬಾಲಕಿಯರ ರಾಜ್ಯಮಟ್ಟದ ಹಾಕಿ ಟೂರ್ನಿಯನ್ನು ಇಲ್ಲಿನ ಸಾಯಿ ಹಾಕಿ ಟರ್ಫ್ ಮೈದಾನದಲ್ಲಿ ನ.21ರಿಂದ 25ರವರೆಗೆ ಆಯೋಜಿಸಲಾಗಿದೆ’ ಎಂದು ತಾಲ್ಲೂಕು ದೈಹಿಕ ಶಿಕ್ಷಣ ಪರಿವೀಕ್ಷಕ ಶ್ರೀನಿವಾಸ್ ಬುಧವಾರ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಲೀಗ್ ಮಾದರಿಯಲ್ಲಿ ನಡೆಯುವ ಈ ಟೂರ್ನಿಯಲ್ಲಿ ಮೈಸೂರು, ಬೆಳಗಾವಿ, ಬೆಂಗಳೂರು ಹಾಗೂ ಕಲಬುರಗಿ ವಿಭಾಗಗಳಿಂದ ಒಟ್ಟು 19 ತಂಡಗಳು ಭಾಗವಹಿಸಲಿವೆ. ಅಂತರರಾಷ್ಟ್ರೀಯ ಹಾಕಿ ಆಟಗಾರರಾದ ಎಸ್.ವಿ.ಸುನಿಲ್ ಹಾಗೂ ವಿ.ಎಸ್.ವಿನಯ್ ಉದ್ಘಾಟಿಸಲಿದ್ದಾರೆ’ ಎಂದರು. ‘ನ.18ರಿಂದ 19ರವರೆಗೆ ಮೈಸೂರು ವಿಭಾಗಮಟ್ಟದ ಹಾಕಿ ಟೂರ್ನಿಯೂ ಇದೇ ಮೈದಾನದಲ್ಲಿ ನಡೆಯಲಿದೆ’ ಎಂದು ಮಾಹಿತಿ ನೀಡಿದರು.

ಬ್ಯಾಡ್ಮಿಂಟನ್: 2ನೇ ಸುತ್ತಿಗೆ ಅನ್ವೇಷಾ

ಸಿಡ್ನಿ (ಪಿಟಿಐ): ಭಾರತದ ಯುವ ಆಟಗಾರ್ತಿ ಅನ್ವೇಷಾ ಗೌಡ ಅವರು ಆಸ್ಟ್ರೇಲಿಯಾ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯ ಎರಡನೇ ಸುತ್ತು ಪ್ರವೇಶಿಸಿದರು.

ಬುಧವಾರ ನಡೆದ ಮೊದಲ ಸುತ್ತಿನ ಪಂದ್ಯದಲ್ಲಿ ಅನ್ವೇಷಾ 21–9, 21–11 ರಲ್ಲಿ ಆತಿಥೇಯ ದೇಶದ ಪಿಚಾಯ ಎಲಿಸಿಯಾ ವಿರವೊಂಗ್ ವಿರುದ್ಧ ಗೆದ್ದರು. ಮಹಿಳಾ ಡಬಲ್ಸ್‌ನಲ್ಲಿ ಋತುಪರ್ಣ ಪಂಡಾ ಮತ್ತು ಶ್ವೇತಪರ್ಣ ಪಂಡಾ ಅವರು ಮೊದಲ ಸುತ್ತಿನಲ್ಲಿ 16–21, 14–21 ರಲ್ಲಿ ಚೀನಾ ತೈಪೆಯ ಲೀ ಚಿಯಾ ಸಿನ್– ತೆಂಗ್ ಚುನ್ ಸುನ್ ಎದುರು ಸೋತರು.

ಪುರುಷರ ಸಿಂಗಲ್ಸ್‌ನಲ್ಲಿ ಭಾರತದ ಸಮೀರ್ ವರ್ಮಾ ಗಾಯದ ಕಾರಣ ಟೂರ್ನಿಯಿಂದ ಹಿಂದೆ ಸರಿದರು. ಮಹಿಳಾ ಡಬಲ್ಸ್‌ನಲ್ಲಿ ಸಿಮ್ರಾನ್ ಮತ್ತು ರಿತಿಕಾ ಠಾಕರ್ ಕೂಡ ಹಿಂದೆ ಸರಿದರು.

ಐಒಎ: 25ರಿಂದ ನಾಮಪತ್ರ ಸಲ್ಲಿಕೆ

ನವದೆಹಲಿ: ಭಾರತ ಒಲಿಂಪಿಕ್ ಸಂಸ್ಥೆಯ (ಐಒಎ) ಚುನಾವಣೆಗೆ ಅಧಿಸೂಚನೆ ಹೊರಡಿಸಲಾಗಿದ್ದು, ಬುಧವಾರ ಪ್ರಕ್ರಿಯೆಗಳು ಆರಂಭವಾಗಿವೆ.

ಅಧ್ಯಕ್ಷ ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರ ಆಯ್ಕೆಗಾಗಿ ಚುನಾವಣೆ ನಡೆಯಲಿದೆ. ಡಿಸೆಂಬರ್ 10ರಂದು ಮತದಾನ ನಿಗದಿಯಾಗಿದ್ದು, ಇದೇ 25ರಿಂದ 27ರವರೆಗೆ ನಾಮಪತ್ರ ಸಲ್ಲಿಸಬಹುದಾಗಿದೆ. ಡಿಸೆಂಬರ್ 3 ನಾಮಪತ್ರ ಹಿಂಪಡೆಯಲು ಕೊನೆಯ ದಿನವಾಗಿದೆ.